

ಕನಸು ಹೊತ್ತ ಹೋರಾಟಗಾರ

ಸೃಷ್ಟಿಯಾದ ಶಿಲ್ಪ ಕಲೆಯ ಒಂದು ಉದಾಹರಣೆ. ಪಾನ್ ಹೋ ಎಂಬ ಶಿಲ್ಪಕಾರ ರಚಿಸಿದ ಈ ಶಿಲ್ಪದ ಹೆಸರು "ದುರ್ಗಮ ವರ್ಷಗಳು

12 ಆಗಸ್ಟ್ 1990

ಸಂಪುಟ 12 ಸಂಚಿಕೆ 32

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಪಂಜಾಬ್, ಕಾಶ್ಮೀರ, ಅಸ್ಸಾಂ ಸಮಸ್ಯೆಗಳು

ತುರ್ತಾಗಿ ಸರ್ವ ಪಕ್ಷಗಳ ಸಭೆ ಕರೆಯಿರಿ

ಸಾಕು ನಿಲ್ಲಿಸಿ! ಈ ಹಾಸ್ಯಾಸ್ಪದ ನಾಟಕವನ್ನು

(ಪಿ.ಡಿ. ಸಂಪಾದಕೀಯ)

ಬೆಲೆಗಳು ಗಗನದತ್ತ ಏರುತ್ತಿವೆ. ಉದ್ದಿಮೆ ಮೇಲೆ ಉದ್ದಿಮೆಗೆ ರೋಗ ಹಿಡಿಯುತ್ತಿದೆ. ನಿರುದ್ಯೋಗ ಏರುತ್ತಿದೆ. ರಾಷ್ಟ್ರೀಯ ರಂಗ ಸರ್ಕಾರ ಪಡೆದ ಆರ್ಥಿಕ ಸುಧಾರಿಸುವ ಲಕ್ಷಣ ತೋರುವ ಬದಲು ತ್ವರಿತವಾಗಿ ಹದಗೆಡುತ್ತಾ ಸಾಗಿದೆ. ನೋಡಲು ಕಣ್ಣಿದ್ದವರಿಗೆ, ಕೇಳಲು ಕಿವಿಯಿದ್ದವರಿಗೆ ಯಾರಿಗಾದರೂ ಬದುಕೇ ಭಯಾನಕವಾಗುತ್ತಿರುವ ಬಗ್ಗೆ ಜನರ ಅಸಂತೃಪ್ತಿಯ ಅನುಭವವಾಗುವುದು ಖಂಡಿತ. ಜನ ಹೆಚ್ಚೆಚ್ಚು ಬೇಸರಗೊಳ್ಳುತ್ತಿದ್ದಾರೆ.

ಕಳೆದ ನವಂಬರಿನಲ್ಲಿ ಜನ ಅತ್ಯಂತ ವ್ಯಗ್ರರಾಗಿ ಕಾಂಗ್ರೆಸ್(ಐ)ನ್ನು ಅಧಿಕಾರದಿಂದ ಒದ್ದೋಡಿಸಿದರು. ರಾಷ್ಟ್ರೀಯ ರಂಗ, ಜನತಾ ದಳಕ್ಕೆ ಮತವಿತ್ತರು. ಹೊಸದಾಗಿ ಸ್ಥಾಪನೆಗೊಂಡ ಸರಕಾರ ಮೇಲ್ನೋಟಕ್ಕಾದರೂ ಪರಿಸ್ಥಿತಿಯ ಸ್ವರೂಪ ಬದಲಿಸಲು ಪ್ರಯತ್ನಿಸಿ ಜೀವನವನ್ನು ಒಂದಿಷ್ಟಾದರೂ ಹಗುರಗೊಳಿಸಬಹುದೆಂಬ ದೊಡ್ಡ ನಿರೀಕ್ಷೆಯಿಂದ ಮತ ನೀಡಿದರು.

ಈಗ, ಕೋಮುವಾದದ, ಪ್ರತ್ಯೇಕತಾವಾದದ ರಕ್ಕಸ ಪಂಜಾಗಳು ದೇಶವನ್ನು ಹರಿದು ಚೂರು ಚೂರು ಮಾಡಲು ಪ್ರಯತ್ನಿಸುತ್ತಿವೆ. ಪಂಜಾಬ್, ಕಾಶ್ಮೀರ ಧಗಧಗಿಸುತ್ತಿವೆ. ಅಸ್ಸಾಂನಲ್ಲಿ ಆಗಲೇ ಭಯೋತ್ಪಾದಕತೆ ಹಲ್ಲು ಕಡಿಯುತ್ತಿದೆ. ತಮಿಳುನಾಡಿನದು ದುಃಸ್ವಪ್ನದ ಹೊಸಿಲಲ್ಲಿ ನಿಂತಂತಿದೆ. ರಾಮಜನ್ಮಭೂಮಿ-ಬಾಬ್ರಿ ಮಸೀದಿ ವಿವಾದ ಸರಕಾರದ ಮುಖದೆದುರೇ ಸ್ಫೋಟಗೊಳ್ಳುವ ಬೆದರಿಕೆಹಾಕಿದೆ.

ಇಷ್ಟೆಲ್ಲಾ ಸಾಲದೋ ಎಂಬಂತೆ ಟೈಂ ಬಾಂಬಿಗೆ ಉರಿಹತ್ತಿಸಲು ಇನ್ನೂ ಏನೇನೋ ಸೃಷ್ಟಿಸಲಾಗುತ್ತದೆ. ಇಂತಹ ಸನ್ನಿವೇಶದಲ್ಲಿ, ಕೇಂದ್ರದ ಮಂತ್ರಿಗಳಂತೂ ಬಿಡಿ, ದೇಶದ ಯಾವುದೇ ಜವಾಬ್ದಾರಿಯುತ ನಾಗರಿಕನಾದರೂ ಕಿರುಕುಳ ಕೊಡುವ ಯೋಚನೆ ಮಾಡಬಲ್ಲನೇ? ದೋಣಿ ಮುಳುಗಿಸುವ ಯೋಚನೆ ಮಾಡಬಲ್ಲನೇ? ಆದರೆ ಈಗ ಆಗುತ್ತಿರುವುದು ಇದೇ.

ರಾಷ್ಟ್ರೀಯ ರಂಗ ಸರ್ಕಾರ ಒಂದು ಬಿಕ್ಕಟ್ಟಿನಿಂದ ಇನ್ನೊಂದು ಬಿಕ್ಕಟ್ಟಿನತ್ತ ಕುಪ್ಪಳಿಸುತ್ತಿದೆ ಎಲ್ಲರ ನಿರೀಕ್ಷೆಗಳನ್ನು ಹುಸಿಗೊಳಿಸಿ. ಮತ್ತು ಜನಗಳು? ಅವರು ಸಿನಿಕರಾಗುತ್ತಿದ್ದಾರೆ. ಸಿನಿಕತನದ ಮನೋದೆಸೆಯಲ್ಲಿ ಜನ ಯಾವುದನ್ನೂ: ಯಾರನ್ನೂ ನಂಬುವುದಿಲ್ಲ ಎಂಬುದನ್ನು ರಾಷ್ಟ್ರೀಯ ರಂಗ ಸರಕಾರದ ಮುಖಂಡರು ಅರಿಯಬೇಕು. ರಾಷ್ಟ್ರೀಯ ರಂಗ ಸರಕಾರದ ಪ್ರಸ್ತುತ ಮುಗ್ಗಟ್ಟು ಸೃಷ್ಟಿಸಿದ ದೃಶ್ಯದ ಅತ್ಯಂತ ಅಪಾಯಕಾರಿ ಅಂಶವಿದು.

ಹಿಂದಿನ ಬಾರಿ ಬಿಕ್ಕಟ್ಟು ಪರಿಹಾರದ ಬಗ್ಗೆ ಸಮಾಧಾನದ ಉಸಿರು ಬಿಟ್ಟಿದ್ದವು. ಆದರೆ ಒಂದು ಪ್ರಶ್ನೆ ಚಿಹ್ನೆಯೊಂದಿಗೇ. ನಿಜವಾಗಿಯೂ ಪರಿಹಾರವಾಗಿದೆಯೇ ಎಂಬ ಸಂದೇಹದೊಂದಿಗೇ ದುರದೃಷ್ಟದಿಂದ ನಮ್ಮ ಸಂದೇಹ ನಿಜವಾದಂತಿದೆ.

ರಾಷ್ಟ್ರೀಯ ರಂಗ ಸರಕಾರ ಈಗ ಮಾಡುತ್ತಿರುವುದು ಬಿಕ್ಕಟ್ಟಿನ ಉಸ್ತುವಾರಿಯಷ್ಟೆ. ಸರಕಾರೀ ಮುಖಂಡರು ಹೆಚ್ಚೆಂದರೆ ತಮ್ಮದೇ ಜನ ಹಚ್ಚಿದ ಬೆಂಕಿಯನ್ನು ಆರಿಸುವ ಅಗ್ನಿಶಾಮಕರಂತೆ ವರ್ತಿಸುತ್ತಿದ್ದಾರೆ ಎಂದು ಹೇಳಬಹುದಷ್ಟೆ. ಏನಿಲ್ಲೆಂದರೂ ಇದೊಂದು ಅತ್ಯಂತ ಅಸಹ್ಯ ದೃಶ್ಯ. ರೋಮ್ ಉರಿಯುತ್ತಿದ್ದಾಗ ನೀರೋ ಪಿಟೀಲು ಬಾರಿಸುತ್ತಿದ್ದನಂತೆ. ಈ ಸರಕಾರ ಬಗ್ಗೆ ಟೀಕೆಯಲ್ಲಿ ಅಷ್ಟರ ಮಟ್ಟಿಗೆ ಹೋಗದಿದ್ದರೂ ಅದು ಜನತೆಯ ಹಲವಾರು ಜ್ವಲಂತ ಪ್ರಶ್ನೆಗಳ ಕುರಿತಂತೆ ತೋರುತ್ತಿರುವ ನಿರ್ಲಕ್ಷ್ಯ, ತಿರಸ್ಕಾರ, ಒಬ್ಬರಿನೊಬ್ಬರ ಕಾಲೆಳೆಯುವಲ್ಲಿ ಅವರು ತೋರುತ್ತಿರುವ ತೀವ್ರತೆ ಯಾವುದೇ ಸರಕಾರಕ್ಕೂ ನಾಚಿಕೆಗೇಡಿನ ಸಂಗತಿ ಎಂದು ಖಂಡಿತವಾಗಿಯೂ ಹೇಳಬಹುದು. ಸಾಕಿನ್ನು! ದಯವಿಟ್ಟು ಈ ಹಾಸ್ಯಾಸ್ಪದ ನಾಟಕವನ್ನು ನಿಲ್ಲಿಸಿ! ದೇಶವನ್ನಾವರಿಸಿದ ಸಮಸ್ಯೆಗಳನ್ನು ಪರಿಹರಿಸುವತ್ತ ಗಮನ ಕೇಂದ್ರೀಕರಿಸಿ.

(ಆಗಸ್ಟ್ 1,1990)

ಪಂಜಾಬ್, ಕಾಶ್ಮೀರ, ಅಸ್ಸಾಂಗಳಲ್ಲಿ ನಡೆಯುತ್ತಿರುವ ಪ್ರತ್ಯೇಕತಾವಾದಿ ಮತ್ತು ಭಯೋತ್ಪಾದಕತೆಯ ಬಗ್ಗೆ ಶೀಘ್ರ ಪರಿಹಾರಕ್ಕಾಗಿ ಇಂದು ತೀವ್ರ ಪ್ರಯತ್ನ ಮಾಡಬೇಕಾಗಿದೆ. ಹಿಂದಿನ ಕಾಂಗ್ರೆಸ್(ಐ) ಸರಕಾರವು ತನ್ನ ಸಂಕುಚಿತ ಪಕ್ಷಪಾತಿ ಹಿತಕ್ಕಾಗಿ ಅಂದು ಉಲ್ಬಣವಾದ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡಿತು. ಆದರೆ ಈ ಸಮಸ್ಯೆಗಳಿಗೆ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಬದ್ಧವಾದ ಎಲ್ಲ ಪಕ್ಷಗಳ ಒಟ್ಟು ಪ್ರಯತ್ನಬೇಕಾಗಿದೆ. ಈ ಸನ್ನಿವೇಶದಲ್ಲಿ ಇಂತಹ ಎಲ್ಲ ಪಕ್ಷಗಳನ್ನು ಒಟ್ಟು ಸೇರಿಸಿ. ಸಮಸ್ಯೆಗಳಿಗೆ ಪರಿಹಾರ ಒದಗಿಸುವುದರ ಬಗ್ಗೆ ಚರ್ಚಿಸಿ.ಸಾಮಾನ್ಯ ನಿರ್ಣಯ ಕಂಡುಕೊಳ್ಳಲು ಸಭೆ ಕರೆಯ ಬೇಕೆಂದು ಸಿ.ಪಿ.ಐ.(ಎಂ) ಸಲಹೆನೀಡುತ್ತದೆ. ಪ್ರಾರಂಭದಲ್ಲಿ ಪಂಜಾಬಿನಲ್ಲಿ ಉತ್ಸಾಹ ತೋರಿಸಿದ ರಾಷ್ಟ್ರೀಯ ರಂಗ, ಇತ್ತೀಚೆಗೆ ಸಿ.ಪಿ.ಐ (ಎಂ) ಕೊಟ್ಟಿರುವ ಸಲಹೆಯನ್ನು ಕಡೆಗಣಿಸಿರುವುದು ವಿಷಾದನೀಯ. ಆದರೆ ಇದೀಗ ಪಂಜಾಬ್, ಜಮ್ಮು ಮತ್ತು ಕಾಶ್ಮೀರ ಮತ್ತು ಅಸ್ಸಾಮ್‌ಗಳಲ್ಲಿ ನಡೆಯುತ್ತಿರುವ ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಧಕ್ಕೆ ಬಂದಿರುವ ಪರಿಸ್ಥಿತಿಗೆ ಪರಿಹಾರ ಕಂಡು ಕೊಳ್ಳಲು ಸರ್ವಪಕ್ಷಗಳ ಸಭೆ ಕರೆಯುವುದು ತುರ್ತಿನದಾಗಿದೆ ಎಂದು ಪಾಲಿಟ್‌ಬ್ಯೂರೋ ಧೃಢಪಡಿಸಿದೆ.

ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ 1990 ರ ಜುಲೈ 30 ರಿಂದ ಆಗಸ್ಟ್ 1 ರವರೆಗೆ ನವದೆಹಲಿಯಲ್ಲಿ ಸಭೆ ಸೇರಿ ಭಯೋತ್ಪಾದಕತೆ, ಪ್ರತ್ಯೇಕತೆ, ಕೋಮುವಾದದ ಪ್ರಚೋದನೆ ಮೊದಲಾದವುಗಳಿಂದ ದೇಶದ ಐಕ್ಯತೆಗೆ ಉಂಟಾಗಿರುವ ಗಂಡಾಂತರ ಮತ್ತು ಬೆಲೆಯೇರಿಕೆ ಮತ್ತು ರಾಜಕೀಯ ಅಸ್ಥಿರತೆಗೆ ಸರಿಯಾದ ನೆಲೆಯಲ್ಲಿ ಪರಿಹಾರ ಕೊಡಲು ವಿಫಲವಾದ ರಾಷ್ಟ್ರೀಯ ರಂಗ ಸರಕಾರದ ಅಸಮರ್ಥತೆ ಮೊದಲಾದವುಗಳ ಕುರಿತು ಚರ್ಚಿಸಿ ಈ ಕೈಳಗಿನ ನಿರ್ಣಯಗಳನ್ನು ಮಾಡಿದೆ.

ಪಂಜಾಬ್

ವಿದೇಶಗಳಿಂದ ಸಹಾಯ ಪಡೆಯುತ್ತಿರುವ ಭಯೋತ್ಪಾದಕರು ಕೊಲೆ, ಕೃತ್ಯ, ಹಣ ಲೂಟಿಗಳನ್ನು ಅವ್ಯಾಹತವಾಗಿ ನಡೆಸುತ್ತಿದ್ದಾರೆ. ಸ್ವಲ್ಪ ಮಟ್ಟಿಗೆ ಭದ್ರತಾ ಪಡೆಗಳು ಭಯೋತ್ಪಾದಕರನ್ನು ಸದೆಬಡಿಯುವಲ್ಲಿ ಸಫಲರಾದರೂ, ರಾಜಕೀಯವಾಗಿ ಸಮಸ್ಯೆಗೆ ಪರಿಹಾರ ಕೊಡುವುದರತ್ತ ಗಂಭೀರವಾದ ಪ್ರಯತ್ನ ನಡೆಯುತ್ತಿಲ್ಲ. ಆ ರಾಜ್ಯದಲ್ಲಿ ಅಲ್ಪಸಂಖ್ಯಾತರು ತಮ್ಮ ಭವಿಷ್ಯವು ಅಭದ್ರತೆಯಿಂದೊಡಗೂಡಿದೆ ಎಂದು ಚಿಂತಿತರಾಗಿದ್ದಾರೆ. ರಾಷ್ಟ್ರೀಯ ರಂಗ ಸರಕಾರವು "ರಾಜೀವ್--ಲೋಂಗೋವಾಲ್ ಒಪ್ಪಂದ" ದ ಪರಿಧಿಯಲ್ಲಿ ಪಂಜಾಬ್ ಜನರ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಪಿ.ಬಿ.ಒತ್ತಾಯಿಸಿದೆ.

ಕಾಶ್ಮೀರ

ಪಾಕಿಸ್ತಾನದಿಂದ ತರಬೇತಿ ಪಡೆದ ಶಸ್ತ್ರಧಾರಿ ಭಯೋತ್ಪಾದಕರು ಜಮ್ಮು ಮತ್ತು ಕಾಶ್ಮೀರ ಕಣಿವೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮುನ್ನುಗ್ಗಿ ಬರುತ್ತಿರುವುದು ಗಂಡಾಂತರಕಾರಿಯಾಗಿದೆ. ಮುಸ್ಲಿಮ್

ಪುಟ ಎಂಟಕ್ಕೆ

ಇರಾಕ್-ಕುವೈತ್ ಯುದ್ಧ

ಕೊಲ್ಲಿ ಬಿಕ್ಕಟ್ಟು ಉಲ್ಬಣಗೊಂಡು ಇರಾಕ್ - ಕುವೈತ್ ಯುದ್ಧದಲ್ಲಿ ಪರ್ಯವಸಾನಗೊಂಡಿದೆ. ಇರಾಕ್ ಕುವೈತ್ ವಿವಾದಗಳ ಮಾತುಕತೆ ನಡೆಯುತ್ತಿದ್ದು, ಅದು ಮುರಿದು ಬಿದ್ದ ಮರುದಿನ ಇರಾಕ್ ಪಡೆಗಳು ಕುವೈತ್ ಮೇಲೇ ಆಕ್ರಮಣಮಾಡಿದೆ. ಸುಮಾರು 24 ಗಂಟೆಗಳೊಳಗೆ ಕುವೈತ್ ಇರಾಕ್ ನಿಯಂತ್ರಣಕ್ಕೆ ಬಂದಿದ್ದು, ಅಲ್ಲಿ ಒಂದು 'ಕ್ರಾಂತಿಕಾರಿ ಸರ್ಕಾರ' ನಿರ್ಮಿಸಲಾಗಿದೆ ಎಂದು ಇರಾಕ್ ಹೇಳಿಕೊಂಡಿದೆ. ಕುವೈತ್ ಆಳುವ ರಾಜ ಕುಟುಂಬದ 'ಅಮೀರರು' ಇರಾಕ್ ಸೈನ್ಯ ಕುವೈತ್ ಪ್ರವೇಶಿಸುತ್ತಿದ್ದಂತೆಯೇ, ನೆರೆಯ ಸೌದಿ ಅರೇಬಿಯಾಕ್ಕೆ ಓಡಿಹೋಗಿದ್ದಾರೆ. ಕುವೈತ್‌ನ ಕ್ರಾಂತಿಕಾರಿ ಗುಂಪೊಂದಕ್ಕೆ ಸಹಾಯಮಾಡಿ ಅಮೀರರ ಪಾಳೆಯಗಾರಿ ಅಮೆರಿಕನ್ ಪರ ಸರ್ಕಾರ ಉರುಳಿಸಲು ತಾನು ಕುವೈತ್ ಪ್ರವೇಶಿಸಿದ್ದಾಗಿ ಹೇಳಿಕೊಂಡಿದೆ. ಕುವೈತ್‌ನ್ನು ಆಕ್ರಮಿಸಿಕೊಂಡಷ್ಟೇ ವೇಗವಾಗಿ ಇರಾಕ್, ಅಲ್ಲಿಂದ ಹಿಂತೆಗೆಯುವುದಾಗಿ ಘೋಷಿಸಿದೆ. ಆದರೆ ಇದು ಇರಾಕ್ ಮತ್ತು ಕುವೈತ್‌ನ ಭದ್ರತೆಗೆ ಅಪಾಯ ಬರುವ ಸೂಚನೆ ಇಲ್ಲದಿದ್ದರೆ ಮಾತ್ರ ಕುವೈತ್‌ನ ಹೊಸ 'ಕ್ರಾಂತಿಕಾರಿ ಸರ್ಕಾರ' ದ ರಕ್ಷಣೆಗೆ 'ಕುವೈತ್ ಸೈನ್ಯ'ವನ್ನು ಕಟ್ಟಲಾಗುತ್ತಿದೆ ಎಂದೂ ಇರಾಕ್ ಹೇಳಿಕೊಂಡಿದೆ.

ಕುವೈತ್ ಮತ್ತು ಇರಾಕ್ ಮಧ್ಯೆ ಹಲವಾರು ವಿವಾದಗಳು ಹಿಂದಿನಿಂದಲೂ ಇವೆ. ಗಡಿ ಪ್ರದೇಶದ ಕೆಲವು ಭೂಮಿಯ ವಿವಾದ ಅಲ್ಲದೆ, ಗಡಿಪ್ರದೇಶದಲ್ಲಿರುವ ಇರಾಕ್ ತೈಲ ಕೇಂದ್ರಗಳಿಂದ ಕುವೈತ್ ತೈಲ ಕದಿಯುತ್ತಿದೆ. ಅಧಿಕ ಉತ್ಪಾದನೆ ಮಾಡುತ್ತಿದೆ. ಎಂದು ಇರಾಕ್ ಹೇಳಿದೆ. ಅಲ್ಲದೆ ಕುವೈತ್--ಇರಾಕ್ ಗಡಿ ಸ್ಪಷ್ಟವಾಗಿ ಗುರುತಿಸಲ್ಪಡದೆ ಇರುವುದರಿಂದ ಕೆಲವು ತೈಲ ಸ್ಥಾವರಗಳ (ಗಡಿಪ್ರದೇಶದಲ್ಲಿರುವ) ಒಡೆತನದ ಬಗ್ಗೆ ಮೊದಲಿನಿಂದಲೂ ವಿವಾದವಿದೆ. ತೈಲ ಉತ್ಪಾದಿಸುವ ದೇಶಗಳು ವಿಧಿಸಿರುವ ಉತ್ಪಾದನಾ ಮಿತಿ ಬೆಲೆ ಎರಡನ್ನೂ ಕುವೈತ್ ಬೇಕೆಂತಲೇ ಅಮೆರಿಕಾದ ಪ್ರಚೋದನೆ ಮೇಲೆ ಉಲ್ಲಂಘಿಸುತ್ತಿದೆ ಎಂದು ಇರಾಕ್ ಆಪಾದನೆ. ಈ ಆಪಾದನೆಯನ್ನು ಇತ್ತೀಚೆಗೆ ನಡೆದ ತೈಲ ಉತ್ಪಾದಿಸುವ ದೇಶಗಳ ಸಭೆಯಲ್ಲಿ ಕುವೈತ್ ಒಪ್ಪಿಕೊಂಡು, ಇನ್ನು ಮುಂದೆ ಈ ನಿರ್ಬಂಧಗಳನ್ನು ಪಾಲಿಸುವುದು ಎಂದು ಹೇಳಿಕೊಂಡಿತ್ತು. ಇರಾನ್ - ಇರಾಕ್ ಯುದ್ಧ ಸಮಯದಲ್ಲಿ, ಕುವೈತ್ ನೀಡಿದ ಸಾಲ ಮನ್ನಾ ಮಾಡಬೇಕೆಂದು ಇರಾಕ್ ವಾದ ಸಹ. ಕುವೈತ್, ಸಂಯುಕ್ತ ಅರಬ್ ಅಮೀರರು (UAE). ಇವೆಲ್ಲಾ ಬ್ರಿಟಿಷ್ ವಸಾಹತುಶಾಹಿಗಳು ತಮ್ಮ ವಸಾಹತು ಅವಧಿಯಲ್ಲಿ ಅರಬ್ ಪ್ರದೇಶಗಳನ್ನು ಬಿಡುವಾಗ ಸೃಷ್ಟಿಸಿದ ರಾಜತನಗಳು. ಎಲ್ಲಾ ಆಧುನಿಕ ಅರಬ್ ದೇಶಗಳು ಈ ರಾಜಮನೆತನಗಳು ದುಂದು ವೆಚ್ಚ, ಲೆಕ್ಕಮಿತಿಯಿಲ್ಲದ ತೈಲ-ಆಧಾರಿತ ಐಶ್ವರ್ಯ, ಅಮೆರಿಕಾ ಪರ ಭಟ್ಟಂಗಿತನದ ಬಗ್ಗೆ ಭಾರೀ ಕೋಪದಿಂದ ಇವೆ. ಬಹಳಷ್ಟು ವರ್ಷ ಕಾಲ ಇರಾಕ್ ಕುವೈತ್‌ನ್ನು ಮಾನ್ಯ ಮಾಡಿರಲಿಲ್ಲ.

ಇದೇನೇ ಇದ್ದರೂ ಹಲವು ದೇಶಗಳು ಇರಾಕ್ ಕ್ರಮವನ್ನು ಖಂಡಿಸಿವೆ. ಅಮೆರಿಕನ್ ನಾಯಕತ್ವದಲ್ಲಿ ಎಲ್ಲಾ ಪಾಶ್ಚಿಮಾತ್ಯ ದೇಶಗಳು ಇರಾಕ್ ಮೇಲೆ ಆರ್ಥಿಕ ದಿಗ್ಬಂಧನ ವಿಧಿಸಿವೆ. ಸೋವಿಯೆಟ್ ಒಕ್ಕೂಟ ಸಹ ಎರಡು ದೇಶಗಳ ನಡುವಣ ವಿವಾದ ಶಾಂತಿಯುತವಾಗಿ ಮಾತುಕತೆಗಳಿಂದ ಬಗೆಹರಿಯಬೇಕು ಯುದ್ಧ ಅದಕ್ಕೆ ಪರಿಹಾರವಲ್ಲ ಎಂದಿದೆ. ಶಸ್ತ್ರಾಸ್ತ್ರ ಸರಬರಾಜುಗಳನ್ನು ನಿಲ್ಲಿಸಿದೆ. ಆದರೆ ಈ ಬಿಂಬಿಸಿ ಕೊಲ್ಲಿಯಲ್ಲಿ

ಪುಟ ಏಳಕ್ಕೆ

ಕೋಮು, ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಟ ಕಾರ್ಮಿಕ ವರ್ಗದ ಪ್ರಾಥಮಿಕ ಕರ್ತವ್ಯ

ಸಿ.ಐ.ಟಿ.ಯು. ಜನರಲ್ ಕೌನ್ಸಿಲ್ ಕರೆ

ಕಾಮ್ರೇಡ್ ಬಿ.ಟಿ.ಆರ್. ನಗರ ಎಂದು ಗೌರವ ಪೂರ್ಣ ಹೆಸರು ಹೊತ್ತ ಕಾನಪುರದ ಚಂದ್ರಶೇಖರ ಆಝಾದ ಕೃಷಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಜುಲೈ 21 ರಿಂದ 23 ರ ವರೆಗೆ ನಡೆದ ಸಿ.ಐ.ಟಿ.ಯು.ವಿನ ಜನರಲ್ ಕೌನ್ಸಿಲ್ ಸಭೆ ಎಲ್ಲಾ ಬಣ್ಣಗಳ ಕೋಮುವಾದಿ ಪ್ರತ್ಯೇಕತಾವಾದಿ, ವಿಚ್ಛೇದ್ರಕಾರಿ ಶಕ್ತಿಗಳ ವಿರುದ್ಧ ಹೋರಾಟ ಚಿಮ್ಮಿಸಿ, ಅವನ್ನು ಮೂಲೆಗುಂಪು ಮಾಡುವುದು ದೇಶದ ಐಕ್ಯತೆ, ಸಮಗ್ರತೆಯ ರಕ್ಷಣೆಗಾಗಿ ಎಡ, ಪ್ರಜಾಪ್ರಭುತ್ವ, ಜಾತ್ಯತೀತ, ದೇಶ ಪ್ರೇಮಿ ಶಕ್ತಿಗಳನ್ನು ಕ್ರೋಢೀಕರಿಸುವುದು ಕಾರ್ಮಿಕ ವರ್ಗದ ಆಂದೋಲನದ ಪ್ರಾಥಮಿಕ ಕರ್ತವ್ಯ ಎಂದು ಹೇಳಿದೆ.

> ಕಾರ್ಮಿಕ ಸಂಘಗಳ ವಿಶ್ವ ಒಕ್ಕೂಟ (ಡಬ್ಲ್ಯು.ಎಫ್.ಟಿ.ಯು)ದ ಮಹಾಧಿವೇಶನ ಸೆಪ್ಟಂಬರ್ 13-20 ರವರೆಗೆ ಮಾಸ್ಕೋದಲ್ಲಿ ನಡೆಯಲಿದೆ. ಇದಕ್ಕೆ ಐವರು ಸದಸ್ಯರ ಸಿ.ಐ.ಟಿ.ಯು. ನಿಯೋಗವನ್ನು ಕಳುಹಿಸಲು ನಿರ್ಧರಿಸಲಾಗಿದೆ. ಈ ನಿಯೋಗದ ಸದಸ್ಯರೆಂದರೆ--ಇ. ಬಾಲಾನಂದನ್, ಎಂ.ಕೆ. ಫಂದೆ, ಪಿ.ಕೆ. ಗಂಗೊಲಿ, ವಿಮಲಾ ರಣದಿವೆ ಮತ್ತು ಎ.ಕೆ. ಪದ್ಮನಾಭನ್

ಮೂರು ದಿನ ನಡೆದ ಈ ಸಭೆಯಲ್ಲಿ ದೇಶದ ರಾಜಕೀಯದಲ್ಲಿನ ಮಹತ್ವದ ಬದಲಾವಣೆಗಳು, ನಂತರದ ಸನ್ನಿವೇಶ, ಈ ಹಿನ್ನೆಲೆಯಲ್ಲಿ ಕಾರ್ಮಿಕ ಆಂದೋಲನದ ಪಾತ್ರ, ಸಂಘಟನೆ ಹಾಗೂ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ಮಹಿಳಾ ಕಾರ್ಮಿಕರ ಪಾತ್ರಕ್ಕೆ ಸಂಬಂಧಪಟ್ಟಂತೆ ಸಿ.ಐ.ಟಿ.ಯು. ಮುಖಂಡತ್ವ ಮುಖ್ಯವಾಗಿ ಬಿ.ಟಿ.ಆರ್. ರವರ ನಿರಂತರ ಶ್ರಮದ ಫಲವನ್ನು ಈ ಸಭೆಯಲ್ಲಿ ಕಾಣಬಹುದಾಗಿತ್ತು. ರಾಜ್ಯಸಮಿತಿಗಳ ಮಹಿಳಾ ಸಂಯೋಜಕ ಸಮಿತಿಗಳ ಪ್ರತಿನಿಧಿಗಳು ಮಾತ್ರವೇ ಅಲ್ಲ, ಈಬಾರಿ ಸುಮಾರಾಗಿ ಎಲ್ಲಾ ಪ್ರತಿನಿಧಿಗಳೂ ಮಹಿಳಾ ಕಾರ್ಮಿಕರ ಸಮಸ್ಯೆಗಳ, ಅವರ ಪಾತ್ರದ ಪ್ರಶ್ನೆ ಎತ್ತಿದರು.

ಕಾರ್ಮಿಕ ಆಂದೋಲನದ ಐಕ್ಯತೆಯ ಪ್ರಶ್ನೆ ಈ ದಿಕ್ಕಿನಲ್ಲಿ ಸಿ.ಐ.ಟಿ.ಯು.ವಿ.ನ ಪ್ರಯತ್ನದ ಬಗ್ಗೆಯೂ ಚರ್ಚೆ ನಡೆಯಿತು.

ಈ ಎಲ್ಲಾ ವಿಷಯಗಳ ಬಗ್ಗೆ ಆರಂಭದಿಂದಲೂ ಮಾರ್ಗದರ್ಶನ ಪ್ರೋತ್ಸಾಹ ನೀಡಿಕೊಂಡು ಬಂದಿದ್ದ ಕಾಂ.ಬಿ.ಟಿ.ಆರ್. ರವರನ್ನು ಈ ಜನರಲ್ ಕೌನ್ಸಿಲು ಸಭೆ ಬಾರಿಬಾರಿಗೂ ಸ್ಮರಿಸಿ ಕೊಂಡು ಅವರು ಕಟ್ಟಿ ಬೆಳೆಸಿದ ಈ ಮಹಾನ್ ಕಾರ್ಮಿಕ ಸಂಘಟನೆಗೆ ಯೋಗ್ಯವಾದ ರೀತಿಯಲ್ಲಿ ಈ ದಿಕ್ಕಿನಲ್ಲಿ ಪ್ರಯತ್ನಿಸಲು ಪ್ರತಿಜ್ಞೆ ಕೈಗೊಳ್ಳಲಾಯಿತು.

ಕಾರ್ಮಿಕ ವರ್ಗವನ್ನು ದೇಶವನ್ನು ಬಾಧಿಸುತ್ತಿರುವ ಹಲವಾರು ತುರ್ತು ಪ್ರಶ್ನೆಗಳ ಬಗ್ಗೆ ಕಾರ್ಯಾಚರಣೆಯ ಕಾರ್ಯಕ್ರಮವನ್ನು ಸಭೆ ಅಂಗೀಕರಿಸಿತು. (ಬಾಕ್ಸ್ ನೋಡಿ)

ನವಂಬರ್‌ನಲ್ಲಿ ಸಿ.ಪಿ.ಐ.(ಎಂ) ನ ಕಾಂ. ಸುಭಾಷಿಣಿ ಅಲಿಯವರನ್ನು ಲೋಕಸಭೆಗೆ ಆರಿಸಿದ ಕಾನಪುರದ ಕಾರ್ಮಿಕ ವರ್ಗ ಈ ಜನರಲ್ ಕೌನ್ಸಿಲ್ ಸಭೆಯ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಪಾಲುಗೊಂಡಿತು. ಉದ್ಘಾಟನಾ ಸಮಾರಂಭದಲ್ಲಿ ಸ್ವಾಗತ ಸಮಿತಿಯ ಕಾಂ.ಲಕ್ಷ್ಮಿ ಸೆಹಗಲ್, ಕಾಂ। ಬಿ.ಟಿ.ಆರ್. ಕಾಂ. ಸುಭಾಷಿಣಿ ಅಲಿಯವರ ಚುನಾವಣಾ ಪ್ರಚಾರವನ್ನು ಉದ್ಘಾಟಿಸಿದ ಸಂದರ್ಭವನ್ನು ನೆನಪಿಸಿಕೊಂಡರು. ಕೊನೆಯ ದಿನ ನಡೆದ ಬಹಿರಂಗ ರಾಲಿಯಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಕಾನಪುರದ ಕಾರ್ಮಿಕರು ಭಾಗವಹಿಸಿದ್ದರು. ಜ್ಯೋತಿ ಬಸು, ಸಮರ್ ಮುಖರ್ಜಿ, ವಿಮಲಾ ರಣದಿವೆ, ಎಂ.ಕೆ. ಫಂದೆ, ಸುಭಾಷಿಣಿ ಅಲಿ, ರಾಮ್ ಸುಮೇರ್ ಯಾದವ್, ರವಿ ಸಿನ್ಹಾ ಮತ್ತು ಅರವಿಂದ ಕುಮಾರ್ ಬಹಿರಂಗ ಸಭೆಯಿನ್ನುದ್ದೇಶಿಸಿ ಮಾತನಾಡಿದರು.

ಪ್ರಮುಖ ನಿರ್ಣಯಗಳು

- ★ ಬೆಲೆಯೇರಿಕೆ-ವಿರೋಧಿ - ದಿನ-ಆಗಸ್ಟ್ 23
- ★ ತ್ರಿಪುರಾ ದಿನ - ಸೆಪ್ಟಂಬರ್ 10
- ★ ಕ್ಲೋಶರ್‌ಗಳು, ಕೈಗಾರಿಕಾ ರೋಗಗ್ರಸ್ತತೆ ವಿರುದ್ಧ ಸಮಾವೇಶ
- ★ ಬಿ.ಟಿ.ಆರ್. ಸ್ಮಾರಕ ರಚನೆ

ಮಿನರ್ವ ಮಿಲ್‌ನಲ್ಲಿ ಗುಪ್ತ ಮತದಾನ ಚುನಾವಣೆ

ಕರ್ನಾಟಕದ ಜವಳಿ ಕೈಗಾರಿಕೆಯಲ್ಲಿ ದೀರ್ಘಕಾಲದ ಇತಿಹಾಸ ಹೊಂದಿರುವ ಮಿನರ್ವ ಮಿಲ್‌ನಲ್ಲಿ ದಿ. 4-8-1990 ರಂದು ಕಾರ್ಮಿಕ ಸಂಘಗಳ ಮಾನ್ಯತೆಗಾಗಿ ಗುಪ್ತ ಮತದಾನ ಚುನಾವಣೆಯನ್ನು ಏರ್ಪಡಿಸಲಾಗಿತ್ತು. ಸ್ವಾತಂತ್ರ್ಯ ಆಂದೋಲನದ ಕಾಲದಿಂದಲೂ ಹಲವಾರು ಹೋರಾಟಗಳನ್ನು ನಡೆಸಿದ ಅನುಭವ ಇಲ್ಲಿನ ಕಾರ್ಮಿಕರಿಗಿದೆ. ಇತ್ತೀಚೆಗೆ ರಾಷ್ಟ್ರೀಯ ರಂಗ ಸರ್ಕಾರವು ಅಧಿಕಾರಕ್ಕೆ ಬಂದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಜವಳಿ ನಿಗಮ (ಎನ್.ಟಿ.ಸಿ.) ಉದ್ದಿಮೆಗಳ ಪೈಕಿ ಮಿನರ್ವಮಿಲ್‌ನಲ್ಲಿ ಪ್ರಪ್ರಥಮ ಬಾರಿಗೆ ಕಾರ್ಮಿಕರ ಒಲವನ್ನು ನಿರ್ಧರಿಸಲು ಮುಕ್ತ ಅವಕಾಶವನ್ನು ಒದಗಿಸಲಾಗಿತ್ತು.

ಚುನಾವಣಾ ಫಲಿತಾಂಶದ ಪ್ರಕಾರ ಐ.ಎನ್.ಟಿ.ಯು.ಸಿ. ಮತ್ತುಸಿಐಟಿಯು ಅನುಕ್ರಮವಾಗಿ ಶೇ 40.5 ಹಾಗೂ ಶೇ 37.5 ರಷ್ಟು ಮತಗಳನ್ನು ಗಳಿಸಿ ಸಾಮೂಹಿಕ ಚೌಕಾಶಿಯ ಪ್ರತಿನಿಧಿಗಳಾಗಿ ಆಯ್ಕೆಯಾಗಿರುತ್ತವೆ.

ರಾಜೀವ್ ಗಾಂಧಿ ಸರ್ಕಾರದ ಆಧುನೀಕರಣ ಯೋಜನೆ ಹಾಗೂ ಹೊಸ ಜವಳಿ ನೀತಿ ಪರಿಣಾಮವಾಗಿ ಉಂಟಾದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ 1988-89 ರಲ್ಲಿ ಮಿನರ್ವಮಿಲ್ ಆಡಳಿತ ವರ್ಗ ಎರಡು ಬಾರಿ ಬೀಗಮುದ್ರೆ ಘೋಷಿಸಿತ್ತು. ಸುಮಾರು ಒಂದು ವರ್ಷ ಕಾಲ ಕಾರ್ಮಿಕರು ಬೀದಿಪಾಲಾಗಿ ವಿಪರೀತ ತೊಂದರೆ ಅನುಭವಿಸಿದರು. ಈ ಹಿನ್ನೆಲೆಯಲ್ಲಿ ಕಾರ್ಖಾನೆಯನ್ನು ಪುನರಾರಂಭಗೊಳಿಸುವ ಏಕೈಕ ಉದ್ದೇಶದಿಂದ ಕೆಲವೊಂದು ಅನಪೇಕ್ಷಿತ ಷರತ್ತುಗಳನ್ನೊಳಗೊಂಡ ಒಪ್ಪಂದಕ್ಕೆ ಸಿಐಟಿಯು ಮತ್ತು ಎಂ.ಎಂ.ಎಲ್.ಎ. ಸಂಘಗಳು ಸಹಿ ಹಾಕಿದವು. ಆದರೆ ಐಎನ್‌ಟಿಯುಸಿ ಸಂಘವು ಕಷ್ಟ ಕಾಲದಲ್ಲಿ ಕಾರ್ಮಿಕರನ್ನು ಕೈಬಿಟ್ಟು ಪರಿಸ್ಥಿತಿಯಿಂದ ನುಣುಚಿಕೊಂಡಿತ್ತು.

> ಗುಪ್ತ ಮತದಾನದ ಚುನಾವಣೆಗೆ ಕೆಲವು ದಿನಗಳ ಮೊದಲು ಅಂದರೆ ದಿ 15-7-1990 ರಂದು ಜರುಗಿದ ಸಿಐಟಿಯು ನೇತೃತ್ವದ ಮಿನರ್ವ ಮಿಲ್ ಹತ್ತಿ ಗಿರಣಿ ಕಾರ್ಮಿಕರ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಕೆಳಕಂಡ ನೂತನ ಪದಾಧಿಕಾರಿಗಳ ತಂಡವನ್ನೂ ಸರ್ವಾನುಮತದಿಂದ ಚುನಾಯಿಸಲಾಗಿದೆ.
>
> ಅಧ್ಯಕ್ಷರು - ವಿ.ಜೆ.ಕೆ. ನಾಯರ್
> ಉಪಾಧ್ಯಕ್ಷರು - ಎಸ್.ಆರ್. ಆರಾಧ್ಯ ಮತ್ತು ಚಂದ್ರಶೇಖರ್
> ಪ್ರಧಾನ ಕಾರ್ಯದರ್ಶಿ - ಅಂಜನಪ್ಪ
> ಸಹ ಕಾರ್ಯದರ್ಶಿಗಳು - ಲಕ್ಷ್ಮಣ, ತ್ರಿಮೂರ್ತಿ ಮತ್ತು ವಿಜಯಕುಮಾರ್
> ಸಂಘಟನಾ ಕಾರ್ಯದರ್ಶಿ - ನಂದಗೋಪಾಲ್
> ಖಜಾಂಚಿ - ಕುಪ್ಪುಸ್ವಾಮಿ

ಚುನಾವಣೆಯಲ್ಲಿ ಒಪ್ಪಂದದ ಪ್ರಶ್ನೆ ಪ್ರಧಾನವಾಗಿ ಬಂದಿತ್ತು. ಬಿನ್ನಿಮಿಲ್‌ನಲ್ಲಿ ಇದಕ್ಕಿಂತಲೂ ಕಡೆಯಾದ ಒಪ್ಪಂದವನ್ನು ಮಾಡಿದ್ದರೂ ಸಹ ಐಎನ್‌ಟಿಯುಸಿ ಮಿನರ್ವ ಮಿಲ್ ಒಪ್ಪಂದ ಕಾರ್ಮಿಕ ವಿರೋಧಿಯಾಗಿದೆಯೆಂದು ಅಬ್ಬರದ ಪ್ರಚಾರ ನಡೆಸಿತು. ಆದರೆ ಸಿ.ಐ.ಟಿ.ಯು ನೇತೃತ್ವದ ಸಂಘವು ಐಎನ್‌ಟಿಯುಸಿಯ ಸಂದರ್ಭಸಾಧಕ ನೀತಿಯನ್ನು ಬಯಲಿಗೆಳೆಯುವುದರೊಂದಿಗೆ ಹಿಂದಿನ ಕಾಂಗ್ರೆಸ್(ಐ) ನೇತೃತ್ವದ ಕೇಂದ್ರ ಸರ್ಕಾರದ ನೀತಿಗಳೇ ಜವಳಿ ಕಾರ್ಮಿಕರ ಇಂದಿನ ದುಸ್ಥಿತಿಗೆ ಮೂಲ ಕಾರಣವೆಂಬುದನ್ನು ಎತ್ತಿತೋರಿಸಿ ಪ್ರಬಲ ಸ್ಪರ್ಧೆ ನೀಡುವಲ್ಲಿ ಯಶಸ್ವಿಯಾಗಿದೆ. ಎಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲೂ ಎದೆಗುಂದದೆ ಹೋರಾಟದ ಹಾದಿಯಲ್ಲಿ ಕೈಹಿಡಿದು ಮುನ್ನಡೆಸಿದ ಸಿ.ಐಟಿ.ಯು. ಬಾವುಟವನ್ನು ಮಿನರ್ವ ಮಿಲ್ ಕಾರ್ಮಿಕರು ಎತ್ತಿ ಹಿಡಿದಿದ್ದಾರೆ.

ಆಡಳಿತ ವರ್ಗವು ಐಎನ್‌ಟಿಯುಸಿ ನೇತೃತ್ವದ ಸಂಘಕ್ಕೆ ಎಲ್ಲಾ ರೀತಿಯ ಪ್ರೋತ್ಸಾಹ ನೀಡಿದರೂ ಸಿಐಟಿಯು ಶಕ್ತಿಯನ್ನು ಸಂಪೂರ್ಣವಾಗಿ ಕುಗ್ಗಿಸಲು ಸಾಧ್ಯವಾಗಲಿಲ್ಲ. ಹಣ ಹೆಂಡ ಮತ್ತು ಪೊಳ್ಳು ಆಶ್ವಾಸನೆಗಳಿಂದ ಎಲ್ಲ ಕಾರ್ಮಿಕರನ್ನು ಮರುಳುಗೊಳಿಸಲಾಗುವುದಿಲ್ಲವೆಂಬುದನ್ನು ಸಹ ಚುನಾವಣೆಯಲ್ಲಿ ಸಾಬೀತುಪಡಿಸಲಾಗಿದೆ. ಇನ್ನೊಂದು ಮುಖ್ಯ ಅಂಶವೇನೆಂದರೆ 1940 ರ ದಶಕದಿಂದಲೂ ಪ್ರಭಾವ ಶಾಲಿಯಾಗಿದ್ದ ಮಿನರ್ವ ಮಿಲ್ ಕಾರ್ಮಿಕರ ಸಂಘ (ಎಂ.ಎಂ.ಎಲ್.ಎ) ತೀವ್ರವಾಗಿ ಪರಾಭವಗೊಂಡಿದೆ.

ಫಲಿತಾಂಶದ ವಿವರ ಕೆಳಕಂಡಂತಿದೆ

ಒಟ್ಟು ಮತದಾರರ ಸಂಖ್ಯೆ	1665	
ಚಲಾಯಿಸಲ್ಪಟ್ಟ ಮತಗಳು	1511	
ಐಎನ್‌ಟಿಯುಸಿ ನೊಂದಾಯಿತ ಸಂಘ	617	40.5%
ಸಿಐಟಿಯು ನೊಂದಾಯಿತ ಸಂಘ	563	37.5%
ಎಂ.ಎಂ.ಎಲ್.ಎ. (ಸ್ವತಂತ್ರ ಸಂಘ)	331	22%

ನಿಮಗಿದು ಗೊತ್ತೇ?

"ಸಂಪೂರ್ಣ ಸ್ವಾತಂತ್ರ್ಯ"ದ ಗುರಿಯನ್ನು ಕಾಂಗ್ರೆಸ್ ವಿರೋಧಿಸಿತ್ತು

ಈಗ ನಮ್ಮ ದೇಶದಲ್ಲಿ ಎಲ್ಲರೂ ಒಪ್ಪಿರುವ ಬಹುಪಾಲು ಆಧುನಿಕ ವಿಚಾರಗಳ ಪ್ರವರ್ತಕರು ಕಮ್ಯುನಿಸ್ಟರು. ನಂತರ ಕ್ರಮೇಣ ರಾಷ್ಟ್ರೀಯ ಆಂದೋಲನ ಅದನ್ನು ಸ್ವೀಕರಿಸಿತು. ಈಗ ಇದು ವಿಚಿತ್ರವೆನಿಸಬಹುದಾದರೂ ಒಂದು ಐತಿಹಾಸಿಕ ಸತ್ಯ.

ಸಮಾಜದ ಬಗ್ಗೆ ಮೊದಲು ಮಾತನಾಡಿದವರು. ಅದಕ್ಕಾಗಿ ದೀರ್ಘಕಾಲ ಬ್ರಿಟಿಷ್ ಜೈಲುಂಡವರು ಕಮ್ಯುನಿಸ್ಟರು ಎಂದು ಎಲ್ಲರಿಗೂ ಗೊತ್ತು. ಆದರೆ 'ಸಂಪೂರ್ಣ ಸ್ವಾತಂತ್ರ್ಯ' ದ ಘೋಷಣೆಯನ್ನು ಮೊದಲು ಎತ್ತಿದವರು ಕೂಡಾ ಕಮ್ಯುನಿಸ್ಟರು ಎಂದು ಬಹಳ ಮಂದಿಗೆ ತಿಳಿದಿರಲಿಕ್ಕಿಲ್ಲ.

1922 ರಲ್ಲಿ ಗಯಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕಾಗಿ ಬರೆದ ಕಮ್ಯುನಿಸ್ಟ್ ಪ್ರಣಾಳಿಕೆ "ರಾಷ್ಟ್ರೀಯ ವಿಮೋಚನಾ ಹೋರಾಟದ ಮುಖಂಡತ್ವದಲ್ಲಿರುವ ಕಾಂಗ್ರೆಸ್ ಪ್ರಜಾಪ್ರಭುತ್ವ ತತ್ವಗಳ ಮೇಲೆನಿಂತ ಸಾರ್ವತ್ರಿಕ ಮತದಾನದ ನೀತಿಯನ್ನಾಧರಿಸಿದ ಒಂದು ಸಂಪೂರ್ಣವಾಗಿ ಸ್ವತಂತ್ರವಾದ ಸರಕಾರವೇ ತನ್ನ ಗುರಿಯೆಂದು ಸಂಶಯಕ್ಕೆಡೆಯಿಲ್ಲದಂತೆ ಧೈರ್ಯವಾಗಿ ಸಾರಬೇಕು" ಎಂದು ಕರೆ ನೀಡಿತ್ತು ಆದರೆ ಕಾಂಗ್ರೆಸ್ ಈ ಗುರಿಯಿಂದ ಇನ್ನೂ ಬಹಳ ದೂರದಲ್ಲೇ ಇತ್ತು. ಬ್ರಿಟಿಷ್ ಸಾಮ್ರಾಜ್ಯದ ನೆರಳಲ್ಲೇ ಸ್ವಯಮಾಡಳಿತ(ಇದನ್ನು ಡೊಮಿನಿಯನ್ ಸ್ಥಾನಮಾನ ಎನ್ನುತ್ತಿದ್ದರು) ಕಾಂಗ್ರೆಸ್‌ನ 'ಸ್ವರಾಜ್ಯ'ವಾಗಿತ್ತು. 1921 ರ ಅಹಮ್ಮದಾಬಾದ್‌ನ ಕಾಂಗ್ರೆಸ್ ಅಧಿವೇಶನದಲ್ಲಿ ಹಸ್ರತ್‌ಮೊಹಾನಿಯವರು ಒಂದು ನಿರ್ಣಯ ಮಂಡಿಸಿ ಸ್ವರಾಜ್ಯ ಎಂದರೆ "ಎಲ್ಲಾ ವಿದೇಶೀ ಹತೋಟಿಗಳಿಂದ ಮುಕ್ತವಾದ ಸಂಪೂರ್ಣ ಸ್ವಾತಂತ್ರ್ಯ' ಎಂದು ನಿರ್ವಚಿಸಬೇಕೆಂದು ಪ್ರತಿಪಾದಿಸಿದಾಗ ಗಾಂಧೀಜಿ ಏನೆಂದರು ಗೊತ್ತೇ?" "ಇದು ನನಗೆ ದುಃಖವುಂಟು ಮಾಡಿದೆ. ಏಕೆಂದರೆ ಇದು ಬೇಜವಾಬ್ದಾರಿತನ ತೋರಿಸುತ್ತದೆ"! 1929 ರವರೆಗೂ ಕಾಂಗ್ರೆಸ್ 'ಸಂಪೂರ್ಣ ಸ್ವಾತಂತ್ರ್ಯ'ದ ಗುರಿಯನ್ನು ವಿರೋಧಿಸುತ್ತಲೇ ಇತ್ತು. 1930 ರಲ್ಲಿ ಅದು ಈ ಗುರಿಯನ್ನು ಅಂಗೀಕರಿಸಿದ್ದು ಕೂಡಾ ಒಂದು ರಾಜೀ ಸೂತ್ರವಾಗಿಯಷ್ಟೆ. ಕಮ್ಯುನಿಸ್ಟರ ನಿರಂತರ ಪ್ರತಿಪಾದನೆಯ ಪರಿಣಾಮವಾಗಿ ಕಾಂಗ್ರೆಸ್ಸಿನ ತೀವ್ರಗಾಮಿ ಯುವಕರೆಲ್ಲಾ ಇದರಿಂದ ಪ್ರಭಾವಿತರಾಗಿ ಅವರ ಒತ್ತಾಯವನ್ನು ಕಾಂಗ್ರೆಸ್ ಮುಖಂಡತ್ವಕ್ಕೆ ಎದುರಿಸುವುದು ಅಸಂಭವವಾದಾಗಲಷ್ಟೆ.

ಕಾರ್ಮಿಕರು, ರೈತರು, ಮತ್ತಿತರ ಜನ ಸಮೂಹಗಳ ನಡುವೆ ಕೆಲಸ ಮಾಡುತ್ತಿದ್ದ ಸಮರಧೀರ ಯುವಜನ ತಮ್ಮ ಅನುಭವದಿಂದಲೇ ಈ ಗುರಿ ಅನಿವಾರ್ಯವೆಂದು ಕಂಡುಕೊಂಡಿದ್ದರು. 1927ರಲ್ಲಿ ಮದ್ರಾಸ್ ಕಾಂಗ್ರೆಸ್ ಅಧಿವೇಶನದಲ್ಲಿ ಈ ಬಗ್ಗೆ ಒಂದು ನಿರ್ಣಯ ಮಂಡಿಸಿದಾಗಲ್ಲೂ ಗಾಂಧೀಜಿ 'ದುಃಖಿತ'ರಾದರು! "ಇಂತಹ ನಿರ್ಣಯಗಳನ್ನು ಅಂಗೀಕರಿಸಿ ನಮ್ಮ ನಪುಂಸಕತೆಯನ್ನು ಪ್ರದರ್ಶಿಸುತ್ತೇವಷ್ಟೆ.... ನಾವು ಶಾಲಾ ಮಕ್ಕಳ ಚರ್ಚೆಯ ಮಟ್ಟಕ್ಕೆ ಕುಸಿದಿದ್ದೇವೆ"!

ಆದರೂ ಒಂದು ವರ್ಷದೊಳಗೇ ಈ ಒತ್ತಾಯ ದ್ವಿಗುಣ ಬಲಪಡೆದುಕೊಂಡಿತು. ಮರುವರ್ಷ ಕಲ್ಕತ್ತೆಯಲ್ಲಿ ಅಧಿವೇಶನದ ಆವರಣವನ್ನೇ ನುಗ್ಗಿದ ಕಾರ್ಮಿಕರು 'ಪೂರ್ಣಸ್ವಾತಂತ್ರ್ಯ" ದ ಗುರಿ ಅಂಗೀಕರಿಸಬೇಕೆಂದು ಒತ್ತಾಯಿಸಿ ಧರಣಿ ಕೂತರು. ಜವಾಹರಲಾಲ್ ನೆಹರೂ, ಸುಭಾಷ್‌ಚಂದಬೋಸ್‌ರಂತ ಮುಖಂಡರ ಒಲವೂ ಆ ಕಡೆಗೇ ಇತ್ತು. ನಿರ್ವಾಹವಿಲ್ಲದಿದ್ದರೂ, ಇನ್ನಷ್ಟು ಸಮಯ ಪಡೆಯಲು ಗಾಂಧೀಜಿ, ಮೋತೀಲಾಲ್ ಮತ್ತಿತರ ಕಾಂಗ್ರೆಸ್ ಮುಖಂಡರು ಒಂದು ರಾಜೀಸೂತ್ರ ಮಂಡಿಸಿದರು- "ಡೊಮಿನಿಯನ್ ಸ್ಥಾನಮಾನ ನೀಡಲು ಬ್ರಿಟಿಷ್ ಸರಕಾರಕ್ಕೆ ಒಂದು ವರ್ಷದ ಗಡುವು ನೀಡುವುದು. ಅಷ್ಟರಲ್ಲಿ ಬ್ರಿಟಿಷ್ ಸರಕಾರ ಒಪ್ಪದಿದ್ದರೆ ಪೂರ್ಣ ಸ್ವರಾಜ್ಯದ ಗುರಿಯನ್ನು ಅಂಗೀಕರಿಸಲಾಗುವುದು" ಜವಾಹರಲಾಲ್ ಮತ್ತು ಸುಭಾಷ್ ಇದಕ್ಕೆ ತಿದ್ದುಪಡಿ ಸೂಚಿಸಿದರೂ ಸಫಲರಾಗಲಿಲ್ಲ.

1929 ರ ಡಿಸೆಂಬರ್‌ನಲ್ಲಿ ಕಾಂಗ್ರೆಸ್ ಲಾಹೋರ್ ಅಧಿವೇಶನದ ಹಿಂದಿನ ದಿನದವರೆಗೂ ಗಾಂಧೀಜಿ ಮತ್ತಿತರ ಕಾಂಗ್ರೆಸ್ ಮುಖಂಡರು ಬ್ರಿಟಿಶರೊಂದಿಗೆ ಈ ಬಗ್ಗೆ ಮಾತುಕತೆಗಳು ಆರಂಭಿಸಲು ಶತಪ್ರಯತ್ನ ಪಟ್ಟರು. ಆದರೆ ಬ್ರಿಟಿಷರು ಅವರ ನೆರವಿಗೆ ಬರಲಿಲ್ಲ. ಇನ್ನು ಇದನ್ನು ಮುಂದೂಡುವುದು ದುಸ್ಸಾಧ್ಯವಾಗಿತ್ತು. ಲಾಹೋರ್ ಅಧಿವೇಶನ 'ಪೂರ್ಣಸ್ವರಾಜ್ಯ' ತನ್ನ ಗುರಿಯೆಂದು ಕೊನೆಗೂ ಘೋಷಿಸಿತು.

ಆದರೆ ಇದೂ ರಾಜೀ ಸೂತ್ರದ ಇನ್ನೊಂದು ರೂಪವಾಗಿತ್ತು. ಏಕೆಂದರೆ ಈ ನಿರ್ಣಯ ಅಂಗೀಕಾರವಾದ ಮೇಲೂ ಗಾಂಧೀಜಿ ಈಗಲೂ ತಾನು ಡೊಮಿನಿಯನ್ ಸ್ಥಾನಮಾನದ ಸಂವಿಧಾನಕ್ಕೆ ಕಾಯಲು ಸಿದ್ಧ ಎಂದರೆ, ಅತ್ತ ಗಾಂಧೀಜಿಯ ರಾಜೀಸೂತ್ರದ ಫಲವಾಗಿ ಕಾಂಗ್ರೆಸ್ ಅಧ್ಯಕ್ಷರಾದ ಯುವಕ ನೆಹರೂರವರೂ ಕೂಡಾ "ಸ್ವಾತಂತ್ರ್ಯ ದೊರೆತ ನಂತರ ತಾನು ಸಮಾನ ಸ್ಥಾನಮಾನದ ಸದಸ್ಯನಾಗಿರುವ ದೊಡ್ಡ ಗುಂಪೊಂದಕ್ಕಾಗಿ ತನ್ನ ಸ್ವಾತಂತ್ರ್ಯದ ಒಂದಂಶವನ್ನೂ ತ್ಯಜಿಸಲು ಸಿದ್ಧ" ಎಂದರು.

ಅಂದರೆ ಗಾಂಧೀಜಿ ಈ ನಿರ್ಣಯಕ್ಕೆ ತಮ್ಮದೇ ಅರ್ಥ ಹಚ್ಚಿದರೆ, ನೆಹರೂ ಸ್ವಾತಂತ್ರ್ಯ ನಂತರ ಅದಕ್ಕೆ ಮಿತಿ ಹಾಕಲು ಸಿದ್ಧರಿದ್ದರು! ನಮಗೆ 1947ರಲ್ಲಿ ಕೊನೆಗೂ ಕಾಂಗ್ರೆಸ್ ನೇತೃತ್ವದಲ್ಲಿ ದೊರೆತದ್ದು ಇಂತಹ ಮಿತಿಯಿದ್ದ ಸ್ವಾತಂತ್ರ್ಯವೇ. ಅದರ ಪರಿಣಾಮವನ್ನು ಈಗ ಸ್ಪಷ್ಟವಾಗಿ ಕಾಣುತ್ತಿದ್ದೇವೆ

ಸಾಲ ಮನ್ನಾ ಮಾಡಲು ರೈತರ ಧರಣಿ

ಕರ್ನಾಟಕ ಪ್ರಾಂತ ರೈತ ಸಂಘದ ಕರೆಯ ಮೇರೆಗೆ, 10,000 ರೂಪಾಯಿ ಒಳಗಿನ ಸಾಲ ಮನ್ನಾ ಮಾಡಬೇಕು, ತೀರುವಳಿ ಪತ್ರಕೊಟ್ಟು ಶೀಘ್ರವೇ ಮರು ಸಾಲ ನೀಡಬೇಕೆಂದು ಒತ್ತಾಯಿಸಲು, ತಾ। 30-7-90 ರಂದು ಕರ್ನಾಟಕ ರಾಜ್ಯಾದ್ಯಂತ ಧರಣಿ ಸತ್ಯಾಗ್ರಹ ನಡೆಸಲಾಯಿತು. ವಿವಿಧ ಸ್ಥಳಗಳಲ್ಲಿ ನಡೆದ ಧರಣಿ ಸತ್ಯಾಗ್ರಹದ ಸಂಕ್ಷಿಪ್ತ ವರದಿ ಇಲ್ಲಿದೆ.

ಬೆಂಗಳೂರು ದಕ್ಷಿಣ ತಾಲೂಕು

ಕಗ್ಗಲೀಪುರದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಶಾಖೆಯ ವ್ಯಾಪ್ತಿಗೆ ಬರುವ ಸುಮಾರು 200 ಜನರನ್ನೊಳಗೊಂಡ ರೈತರ ತಂಡವು, ಧರಣಿ ಸತ್ಯಾಗ್ರಹ ನಡೆಸಿದರು. ಈ ಧರಣಿಯನ್ನು ಕಾಂ। ಜಗನ್ನಾಥ್ ಇನ್ನು ಮುಂತಾದವರ ಮುಖಂಡತ್ವದಲ್ಲಿ ಯಶಸ್ವಿಯಾಗಿ ನಡೆಸಲಾಯಿತು.

ಆಡುಗೋಡಿಯಲ್ಲಿ ಕಾಂ। ಲಕ್ಕಣ್ಣ, ಕಾಂ। ವೆಂಕಲಾಚಲಯ್ಯ, ಕಾಂ। ವೆಂಕಟೇಶ ಅವರ ನೇತೃತ್ವದಲ್ಲಿ ಯಶಸ್ವಿ ಧರಣಿ ಸತ್ಯಾಗ್ರಹವನ್ನು ನಡೆಸಲಾಯಿತು. ಧರಣಿ ಸತ್ಯಾಗ್ರಹದ ನಂತರ ಬ್ಯಾಂಕ್‌ಮೇನೇಜರರಿಗೆ ಮನವಿ ಪತ್ರವನ್ನು ನೀಡಲಾಯಿತು.

ತಾ॥ 29-7-90 ರಂದು ಕೆಂಗೇರಿ ಯುಕೋ ಬ್ಯಾಂಕಿನ ಮುಂದೆ ಆ ಬ್ಯಾಂಕಿನ ವ್ಯಾಪ್ತಿಗೆ ಬರುವ ಗ್ರಾಮಗಳ ಸುಮಾರು ಇನೂರಕ್ಕೂ ಹೆಚ್ಚು ರೈತರು ಧರಣಿ ಸತ್ಯಾಗ್ರಹವನ್ನು ನಡೆಸಿದರು. ಈ ಧರಣಿ ಸತ್ಯಾಗ್ರಹವನ್ನು ಪ್ರಾಂತ ರೈತ ಸಂಘದ ಕಾರ್ಯದರ್ಶಿ ಜಗನ್ನಾಥ್‌ರವರು ಉದ್ಘಾಟಿಸಿದರು. ಲಕ್ಕಣ್ಣ, ವೆಂಕಟಾಚಲಯ್ಯ ಜಗನ್ನಾಥ್‌ರವರನ್ನು ಒಳಗೊಂಡ ನಿಯೋಗವು ಬ್ಯಾಂಕ್ ಮ್ಯಾನೇಜರರಿಗೆ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಅರ್ಪಿಸಿದರು. ಕಾಡುಗೋಡಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮುಂದೆ ಆ ಬ್ಯಾಂಕಿನ ವ್ಯಾಪ್ತಿಗೆ ಬರುವ ರೈತರು ತಾರೀಖು 30ರಂದು ಧರಣಿಯನ್ನು ನಡೆಸಿದರು. ಈ ಧರಣಿಯ ಕಾಂ. ಲಕ್ಕಣ್ಣ. ಕಾಂ.ವೆಂಕಟಾಚಲಯ್ಯ ಕಾಂ. ವೆಂಕಟೇಶ ಗೌಡ ಇನ್ನೂ ಮುಂತಾದವರು ಮುಖಂಡತ್ವವನ್ನು ವಹಿಸಿದ್ದರು

ವಿಜಾಪುರ

30-7-90 ರ ಮುಂಜಾನೆ. ರೈತರು ಬೃಹತ್ ಮೆರವಣಿಗೆಯಲ್ಲಿ ಹೊರಟು, ರಾಜ್ಯದ ಕಾಂಗ್ರೆಸರ್ಕಾರದ ಜನ ವಿರೋಧಿ, ರೈತ ವಿರೋಧಿ ನೀತಿಗಳನ್ನು ಖಂಡಿಸುತ್ತಾ, ಘೋಷಣೆಗಳನ್ನು ಕೂಗುತ್ತಾ, ಮುಖ್ಯ ಬೀದಿಗಳಲ್ಲಿ ಹಾಯ್ದು ಲೀಡ್ ಬ್ಯಾಂಕ್‌ನ ಮುಂದೆ, ಧರಣಿ ಸತ್ಯಾಗ್ರಹ ನಡೆಸಲಾಯಿತು. ಆ ಬ್ಯಾಂಕ್‌ನ ಮೇನೇಜರ್ ಮನವಿಯನ್ನು ಸ್ವೀಕರಿಸಿ, ಸರಕಾರದ ಕೆಲವು ಆದೇಶಗಳನ್ನು ತಿಳಿಸಿ, ಮನವಿಯ ಬೇಡಿಕೆಗಳನ್ನು ಶೀಘ್ರವಾಗಿ ಸರಕಾರಕ್ಕೆ ತಿಳಿಸುವುದಾಗಿ ಆಶ್ವಾಸನೆ ಇತ್ತರು. ಡಿವೈಎಫ್ಐ ಜಿಲ್ಲಾ ಅಧ್ಯಕ್ಷರಾದ ಕಾಂ. ಮುನ್ನಾಸಾಬಕಲಾದಗಿ, ರೈತ ಸಂಘದ ಉಪಾಧ್ಯಕ್ಷರಾದ ಕಾಂ. ಭೀಮಶಿ ಕಲಾದಗಿಯವರುಗಳು, ಸಾಲಮನ್ನಾ ಮಾಡುವ, ಕೇಂದ್ರ ಸರ್ಕಾರದ ಆದೇಶವು, 2-10-85 ರ ಕಟಬಾಕಿದಾರರಿಗೆ ಹಾಗೂ 86 ರಿಂದ 2-10-89 ರವರೆಗಿನ ಆಣೇವಾರಿ (ಅರ್ಧಬೆಳೆಗಳ)ಗಳಿಗೆ ಕೆಲವು ರಿಯಾಯಿತಿ ನೀಡಿದ್ದು ಬಹಳ ರೈತರಿಗೆ ಸಾಲಮನ್ನಾ ಅನ್ವಯಿಸುವುದಿಲ್ಲ, ಕೇವಲ ಶೇಕಡಾ 10 ರಷ್ಟು ಜನರಿಗೆ ಅನ್ವಯಿಸುವುದರಿಂದ, ಇದನ್ನು ಪುನರ್ ಪರಿಶೀಲಿಸಬೇಕೆಂದು, ಎಲ್ಲಾ ರೈತರ ಸಾಲಮನ್ನಾಮಾಡಬೇಕೆಂದು ಒತ್ತಾಯಿಸಿದರು. ಈ ಧರಣಿಯ ನೇತೃತ್ವವನ್ನು, ಜಿಲ್ಲಾ ಕೃಷಿ ಕೂಲಿಗಾರರ ಸಂಘದ ಅಧ್ಯಕ್ಷ ಕಾಂ. ಮಳಸಿದ್ದ ನಾಯಕೋಡಿ, ವಿಜಾಪುರ ತಾಲೂಕು, ರೈತ ಸಂಘದ ಉಪಾಧ್ಯಕ್ಷರಾದ ಬಸವಂತಪ್ಪ ಕುಲ್ಲೊಳ್ಳಿ ವಹಿಸಿದ್ದರು.

ಶಹಾಪುರ

ನೂರಾರು ರೈತರು ರೈತ ಭವನದಿಂದ ಮೆರವಣಿಗೆ ಮುಖಾಂತರ ಸಹಕಾರಿಬ್ಯಾಂಕ್ ವ್ಯವಸ್ಥಾಪಕರಿಗೆ, ಕೇಂದ್ರ ಸರಕಾರವು ಸಾಲ ಮನ್ನಾ ಮಾಡಲು ಹಾಕಿರುವ ಶರತ್ತುಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸುವ ಮನವಿಯನ್ನು ಸಲ್ಲಿಸಲಾಯಿತು. ನಂತರ ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್ ಬ್ಯಾಂಕಿನ ಮುಂದೆ ನೂರಾರು ರೈತರು, ರೈತ ಮಹಿಳೆಯರು ಧರಣಿ ಸತ್ಯಾಗ್ರಹ ನಡೆಸಿದರು.

ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಚೆನ್ನಪ್ಪ ಆನೆಗುಂದಿಯವರು ಮಾತನಾಡಿ, ಕಾಂಗ್ರೆಸ್ಸಿನ ರೈತ ವಿರೋಧಿ ನೀತಿಯನ್ನು ಖಂಡಿಸಿ, ರೈತರಿಗೆ ಆಗಿರುವ ಗಂಭೀರ ಪರಿಸ್ಥಿತಿಯನ್ನು ಪರಿಹರಿಸದಿದ್ದರೆ ಉಗ್ರವಾದ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಬಳ್ಳಾರಿ

ಬಳ್ಳಾರಿ ತಾಲ್ಲೂಕಿನ ಎತ್ತಿನ ಬೂದಿಹಾಳು, ಗೋಡೆಹಾಳು, ಅಮರಪುರ ಕೊಳಗಲ್ಲು, ಶ್ರೀಧರಗುಪ್ಪ ಹಾಗೂ ಇನ್ನಿತರ ಗ್ರಾಮಗಳಿಂದ ಬಂದ ಸುಮಾರು 200 ಕ್ಕೂ ಹೆಚ್ಚು ರೈತರು ನಗರದ ಸಿಂಡಿಕೇಟ್ ಬ್ಯಾಂಕ್ ಎದುರು ಧರಣಿ ಸತ್ಯಾಗ್ರಹ ನಡೆಸಿದರು. ಮನವಿ ಪತ್ರ ಪಡೆದ ಬ್ಯಾಂಕಿನ ಅಧಿಕಾರಿಗಳು ಸಾಲ ಮನ್ನಾ ಕುರಿತು ಹೊರಡಿಸಿದ ಸರಕಾರದ ಆದೇಶವನ್ನು ವಿವರಿಸಿದರು.

ಅನೇಕ ಕಾರಣಗಳಿಂದ ಸತತ ಬರಗಾಲಕ್ಕೆ ತುತ್ತಾಗಿರುವ ರೈತರು, ಆಣೆವಾರು ಲೆಕ್ಕಾಚಾರ ಹಾಗೂ ಇತರೆ ಷರತ್ತುಗಳನ್ನುಸರ್ಕಾರ ಹಾಕಿರುವುದು ಚುನಾವಣೆಯಲ್ಲಿ, ರೈತರಿಗೆ ನೀಡಿದ ಸಾಲಮನ್ನಾದ ಆಶ್ವಾಸನೆಯನ್ನು ಹುಸಿಗೊಳಿಸಿ, ರೈತರಿಗೆ ಮಾಡಿದ ಮಹಾ ಮೋಸ ಇದೆಂದು ಟೀಕಿಸಿದರು. ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡ ರೈತರು ಯಾವ ಯಾವ ವರ್ಷ, ಯಾವ ಯಾವ ಹಳ್ಳಿಗಳಲ್ಲಿ ಆಣೇವಾರು ಲೆಕ್ಕಚಾರವಾಗಿದೆ ಎಂಬ ವಿವರಗಳನ್ನು ನೀಡುವಂತೆ ಜಿಲ್ಲಾಧಿಕಾರಿಗಳನ್ನು ಒತ್ತಾಯಿಸುವ ತೀರ್ಮಾನವನ್ನು ಕೈಗೊಂಡರು. ಸತ್ಯಾಗ್ರಹದ ನೇತೃತ್ವವನ್ನು ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಯು. ಬಸವರಾಜ್, ಜಿಲ್ಲಾ ಉಪಾಧ್ಯಕ್ಷರಾದ ಬಸವಗೌಡ ಅವರು ವಹಿಸಿದ್ದರು.

ದೊಡ್ಡ ಬಳ್ಳಾಪುರ

ಕಾಂ. ಮುಗವಾಳಪ್ಪ ಹಾಗೂ ಕಾಂ. ರಾಮಭದ್ರಯ್ಯ ಕಾಂ. ರಾಮಾಂಜನೇಯ, ಕಾಂ. ಮುತ್ತನರಸಿಂಹಯ್ಯನವರ ನಾಯಕತ್ವದಲ್ಲಿ ರೈತರ ಬೃಹತ್ ಪ್ರದರ್ಶನವನ್ನು ಎಲ್ಲಾ ಬ್ಯಾಂಕ್‌ಗಳ ಮುಂದೆ ನಡೆಸಲಾಯಿತು. ಸುಮಾರು 20 ಹಳ್ಳಿಗಳಿಂದ ನೂರಾರು ರೈತರು, ಕಾರ್ಮಿಕರು ಈ ಪ್ರದರ್ಶನದಲ್ಲಿ ಭಾಗವಹಿಸಿದ್ದರು.

ತಾ। 6-8-90 ರಂದು ಪ್ರಾಂತ ರೈತ ಸಂಘವು ಸಭೆ. ಸೇರಿ ಸಂಘಟನಾತ್ಮಕ ವಿಷಯಗಳ ಬಗ್ಗೆ ಚರ್ಚೆ ನಡೆಸಿ, ಮಳೆ ಬೀಳದೇ ಬೆಳೆ ನಾಶವಾಗಿರುವುದರಿಂದ ದೊಡ್ಡ ಬಳ್ಳಾಪುರ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಬೇಕೆಂದು ಕರೆ ನೀಡಲಾಯಿತು. ಆಗಸ್ಟ್ ತಿಂಗಳಲ್ಲಿ ಸಹಿ ಸಂಗ್ರಹ ಚಳುವಳಿ ನಡೆಸಿ, ಸೆಪ್ಟೆಂಬರ್ ತಿಂಗಳ ಹೋರಾಟವನ್ನು ಯಶಸ್ವಿಗೊಳಿಸಲುತೀರ್ಮಾನಿಸಲಾಯಿತು. ಜಿಲ್ಲಾ ಸಮಿತಿಯಿಂದ ಕಾಂ. ಲಕ್ಕಣ್ಣನವರು ಭಾಗವಹಿಸಿ, ಮಾರ್ಗದರ್ಶನ ನೀಡಿದರು.

ಪಕ್ಷ ಕಟ್ಟಡದ ನಿಧಿ ಸಂಗ್ರಹ ಚಳುವಳಿ

ಆಗಸ್ಟ್ 5 ರಿಂದ 15 ರವರೆಗೆ ಪಕ್ಷದ ಕಟ್ಟಡ ನಿಧಿ ಹಾಗು ಈ ವರ್ಷದ ಪಕ್ಷದ ನಿಧಿಗಳನ್ನು ಸಂಗ್ರಹಿಸಲು ಪಕ್ಷದ ಎಲ್ಲಾ ಸದಸ್ಯರು ಕಾರ್ಯದರ್ಶಿ, ಕಾರ್ಯದರ್ಶಿ ಮಂಡಳಿ ಸದಸ್ಯರಿಂದ ಆರಂಭಿಸಿ ಪ್ರತಿ ಸದಸ್ಯರೂ ನಿಧಿ ಸಂಗ್ರಹಣೆಯಲ್ಲಿ ಭಾಗವಹಿಸಬೇಕೆಂದು ರಾಜ್ಯ ಸಮಿತಿ ನೀಡಿದ ಕರೆಗೆ ಉತ್ಸಾಹದ ಪ್ರತಿಕ್ರಿಯೆ ಬರಲಾರಂಭಿಸಿದೆ. ವಿವಿಧ ಜಿಲ್ಲೆಗಳಲ್ಲಿ ನಿಧಿ ಸಂಗ್ರಹದ ಬಗ್ಗೆ ಕಾರ್ಯ ಕ್ರಮವನ್ನು ಹಾಕಿಕೊಳ್ಳಲಾಗಿದೆ ವಿವಿಧೆಡೆಗಳಲ್ಲಿ ಕಾರ್ಯದರ್ಶಿ ಮಂಡಳಿ ಸದಸ್ಯರು ಬೀದಿ ಬೀದಿಗಳಲ್ಲಿ ಕಾರ್ಖಾನೆಗಳಲ್ಲಿ ಸುತ್ತಾಡಿ ಹಣ ಸಂಗ್ರಹದ ಕೆಲಸದಲ್ಲಿ ತೊಡಗಿದ್ದಾರೆ. ಹಣಸಂಗ್ರಹದ ವಿವರವನ್ನು 'ಐಕ್ಯರಂಗ'ದಲ್ಲಿ ಪ್ರತಿವಾರ ನೀಡಲಾಗುತ್ತದೆ.

1)	ಕಾಂ। ಬೆಂಗಳೂರು ಜಿಲ್ಲಾ ಸಮಿತಿ	20,000–00
2)	ಕಾಂ। ಎನ್.ವಿ. ಸುಬ್ಬಯ್ಯ	100-00
3)	ಕಾಂ। ಆನಂದ್ ಎಸ್.	500-00
4)	ಕಾಂ। ಸುರೇಂದ್ರರಾವ್	500-00
5)	ಕಾಂ। ರೊನಾಲ್ಡ್‌ವಾಸ್	1000-00
6)	ಕಾಂ। ಕಪನಿಪತಿ	500-00
7)	ಕಾಂ। ರಾಮಕೃಷ್ಣ	500-00
8)	ಕಾಂ। ವೆಂಕಟೇಶ್	200-00
9)	ಕಾಂ। ಸುವರ್ಣಭೂಷಣಸ್ವಾಮಿ	250-00
10)	ಕಾಂ। ನಾಗರಾಜ ಶ್ಯಾನಭೋಗ್	500-00
11)	ಕಾಂ। ಸಂಪತ್ ಕುಮಾರ್	100-00
12)	ಕಾಂ। ಎ.ಇ. ಸುಬ್ರಮಣ್ಯಂ	500-00
13)	ಕಾಂ। ಎಂ.ಆರ್. ಕೃಷ್ಣ	1000-00
14)	ಕಾಂ। ಬಿ. ಗಣೇಶನ್	1000-00
15)	ಕಾಂ। ಜಿ. ರಾಧಾಕೃಷ್ಣ	500-00
16)	ಕಾಂ। ಗಣೇಶ್ ಶೆಟ್ಟಿ	1000-00
	ಒಟ್ಟು	28150-00

ನಿಮ್ಮ ಪ್ರಶ್ನೆ – ನಮ್ಮ ಉತ್ತರ

ಕೆಲವು ಸಿನಿಮಾಗಳಲ್ಲಿ ಕಾರ್ಮಿಕರ ಹೆಸರಿನ ಮೇಲೆನಾಯಕ ಸಾಮಾನ್ಯ ಕಾರ್ಮಿಕ ಸಮಸ್ಯೆಗಳ ಬಗ್ಗೆ ಹೋರಾಡುವುದನ್ನು ಕಂಡಿದ್ದೆ. ಆದರೆ ಈಗ ಕಾರ್ಮಿಕ ನಾಯಕನ ಪಟ್ಟಕಟ್ಟಿಕೊಂಡು ಕಾರ್ಮಿಕರ ಸಮಸ್ಯೆಗಳಿಗಾಗಿ ಹೋರಾಟ ನಡೆಸುತ್ತೇವೆ. ಅವರೇ ನನ್ನ ಪ್ರಾಣ ಎಂದು ಹೇಳುತ್ತಾ ಅಧಿಕಾರ ಮತ್ತು ಅಶ್ಲೀಲ ಕೃತ್ಯಗಳನ್ನು ಮಾಡುವ ಸಿನಿಮಾಗಳನ್ನು ಕಂಡೆ. ಯಾಕೋ ನನಗೆ ಭಾರೀ ಬೇಸರ ವಾಯಿತು. ನಿಮ್ಮ ಅಭಿಪ್ರಾಯ ವೇನು? ಸ್ಥೂಲ ಉತ್ತರ ಕೊಡಬೇಡಿ. ದಯವಿಟ್ಟು ವಿಮರ್ಶೆ ಮಾಡಿ. ನಿಜ ಜೀವನದಲ್ಲೇ ಈ ರೀತಿ ಆದರೆ?

ಸುಬ್ಬಾರೆಡ್ಡಿ , ಬಾಗೇಪಲ್ಲಿ

ಸುಬ್ಬಾರೆಡ್ಡಿಯವರೇ!

ಕಾರ್ಮಿಕರ, ಕಾರ್ಮಿಕ ನಾಯಕರ ಬಗ್ಗೆ ಬರುವ ನೀವು ಹೇಳಿರುವ ಮೊದಲ ರೀತಿಯ ಸಿನಿಮಾಗಳ ಬಗ್ಗೆ ಸಮಾಧಾನ ಪಡುವುದರಲ್ಲಾಗಲಿ, ಎರಡನೆ ರೀತಿಯ ಸಿನಿಮಾಗಳನ್ನು ನೋಡಿ ಬೇಸರ ಪಡುವುದರಲ್ಲಿ, ಹೆಚ್ಚಿನ ಅರ್ಥವಿಲ್ಲ. ಎರಡು ರೀತಿಯ ಸಿನಿಮಾಗಳ ತಿರುಳು ಒಂದೇ. ಕಾರ್ಮಿಕ ಮತ್ತು ಕಾರ್ಖಾನೆ ಮಾಲಿಕರ ಹಿತಾಸಕ್ತಿಗಳ ನಡುವೆ ಮೂಲಭೂತ ವೈರುಧ್ಯವಿಲ್ಲ, ವಿವಾದವೂ ಸೃಷ್ಟಿ 'ಸಮಸ್ಯೆ'ಗಳಿದ್ದರೆ ಅದನ್ನು ಶಾಂತಿಯುತವಾಗಿ ಬಗೆಹರಿಸಬಹುದು. ಅದು ಕಾರ್ಮಿಕ ನಾಯಕ ಮಾಲಿಕನ ಮಗಳನ್ನು 'ಲವ್' ಮಾಡಿ ಮದುವೆ ಮಾಡಿಕೊಳ್ಳುವುದರಿಂದ ಆಗಬಹುದು. ಅಥವಾ ಕಾರ್ಮಿಕ ನಾಯಕ ಕಾರ್ಮಿಕರ ನಿಜವಾದ ಹಿತಾಸಕ್ತಿಗಳನ್ನು ಪ್ರತಿನಿಧಿಸದಿರುವುದರಿಂದ ಅವನನ್ನು ಕಿತ್ತುಬಿಸಾಕುವ ಮೂಲಕ ಆಗಬಹುದು. ಮಾಲಿಕ ಕ್ರೂರಿಯಾಗಿದ್ದರೆ ಅವನ 'ಹೃದಯ' ಬದಲಾಗಬಹುದು ಯಾವುದೇ ರೊಮಾರ್ನ್ಸ್‌ನಲ್ಲಿ ಈ ಸಿನಿಮಾಗಳು ಗುರಿಮುಟ್ಟಬೇಕಾದ ನೋಡುಗರು ನಗರದ ಕಾರ್ಮಿಕರಾಗಿರುವುದರಿಂದ 'ಕಾರ್ಮಿಕರ ಸಮಸ್ಯೆಗಳ' ಸ್ವಲ್ಪ ನೈಜ ಚಿತ್ರಣ ಇದ್ದೇ ತೀರಬೇಕು. ನಾಯಕರ, ಮಾಲಿಕ್ ಇತರ ಚಿತ್ರಗಳು ಹೇಗೆ ಇರಲಿ ಕಾರ್ಮಿಕರ ಚಿತ್ರಣ ಅನುಕಂಪದಿಂದ ಕೂಡಿರುತ್ತೆ. ಅವರು ನೋಡುಗರು ತಾನೇ. ಕಾರ್ಮಿಕರ ಸಾಮಾನ್ಯ ಪ್ರಜ್ಞೆಯ ಮಟ್ಟ ತೆಗೆದುಕೊಂಡು,ವರ್ಗಸಮಾಜದ ಬೂರ್ಜ್ವಾ ಮೌಲ್ಯಗಳನ್ನು ಗಟ್ಟಿಗೊಳಿಸುವಂತೆ ಚಿತ್ರಣ ಇರುತ್ತದೆ. ಕಾರ್ಮಿಕ ವರ್ಗದ ಸಂಘಟನೆಯನ್ನು 'ಶಾಂತಿಯುತ' ತೊಂದರೆ ರಹಿತ' ಮಾರ್ಗದಲ್ಲಿ ತೆಗೆದುಕೊಂಡು ಹೋಗಬಹುದು. ಮನುಷ್ಯರೂ ಬೂರ್ಜ್ವಾ ವ್ಯವಸ್ಥೆಯೊಳಗೆ ಬದುಕಲು ಮರೆಯಲು ಕಲಿತಿರುವ ಕಾರ್ಮಿಕ ನಾಯಕರ 'ಅಧಿಕಾರದಾಹ' 'ನ್ಯೂನತೆಗಳನ್ನು' ಅತಿಶಯವಾಗಿ ತೋರಿಸಿ, 'ಕಾರ್ಮಿಕ ನಾಯಕ'ರೇ ಕಾರ್ಮಿಕರ ಮೊದಲ ಶತ್ರು ಎಂದು ತೋರಬಹುದು. ಅತ್ಯಂತ ದಯಾಳು ಮಾನವೀಯ' ಕಾರ್ಮಿಕರಿಗೂ ಜತೆಯಾಗಿ ಕಾರ್ಮಿಕ ನಾಯಕ ಗೂಂಡಾಗಿರಿ ಮಾಡಬಹುದು. ಇಂತಹ ನಾಯಕರು 'ದಯಾಳು' ಮಾಲಿಕರು ನಿಜ ಜೀವನದಲ್ಲಿ ಇಲ್ಲವೆಂದಲ್ಲ. ಈ ಎಲ್ಲಾ ಸಿನಿಮಾಗಳ ಉದ್ದೇಶ ಕಾರ್ಮಿಕರು ನಿಜವಾದ ವಸ್ತುಸ್ಥಿತಿಯ ವಿಶ್ಲೇಷಣೆ ಮಾಡಬೇಕೆಂದಾಗಲಿ, ಸಮಾಜದ ಬೆಳವಣಿಗೆಯಲ್ಲಿ ಕಾರ್ಮಿಕರು ಒಂದು ವರ್ಗವಾಗಿ ಪಾತ್ರ ವಹಿಸಬೇಕೆಂದಾಗಲಿ ಅಲ್ಲ, ಕಾರ್ಮಿಕರ ಮೇಲೆ ಬೂರ್ಜ್ವಾ ವರ್ಗ ದೃಷ್ಟಿಕೋನವನ್ನು ಹೊರುವುದನ್ನು ಅದರ ಉದ್ದೇಶ.

ಇದು ಒಟ್ಟಾರೆಯಾಗಿ 'ಮುಖ್ಯಧಾರೆ'ಯ ಸಾಮಾಜಿಕ ಸಮಸ್ಯೆಗಳನ್ನೂ ವಸ್ತುವಾಗಿ ಹೊಂದಿರುವವರು ಎಲ್ಲಾ ಕಮರ್ಶಿಯಲ್ ಚಿತ್ರಗಳ ಬಗೆಗೂ ನಿಜ. ಇದರರ್ಥ ಬದಲಾವಣೆಗಳಾಗಲೇ ಇಲ್ಲವೆಂದಲ್ಲ. ಈ ಒಟ್ಟಾರೆ ತಿರುಳನ್ನು ಹೇಳುವ ರೂಪಗಳು, ಸಿನಿಮಾದ ಫಾರ್ಮುಲಾಗಳು, ಸಿನಿಮಾಗಳ ಮಸಾಲೆಯ ಮಟ್ಟ (ಆ ಕಾಲಕ್ಕೆ ತಕ್ಕಂತೆ), ಜನಮರಳು ರಾಜಕೀಯ ಆ ಸಂದರ್ಭದಲ್ಲಿ, ಎಡಕ್ಕೆ ವಾಲುತ್ತಿದೆಯೋ– ಇವೆಲ್ಲದರ ಪರಿಣಾಮವಾಗಿ ಬದಲಾವಣೆಗಳಾಗುತ್ತಿವೆ. ಆದರೆ ತಿರುಳು ಒಂದೇ.

ಕಾರ್ಮಿಕರ, ಕಾರ್ಮಿಕ ನಾಯಕರ ಸಮಸ್ಯೆಗಳ ನೋವುನಲಿವುಗಳ ನಿಜವಾದ ವಸ್ತುಸ್ಥಿತಿಯ ಚಿತ್ರಣ ನೀಡುವ ಸಿನಿಮಾಗಳು ಅಪರೂಪ. ಇಂತಹ ಅಪರೂಪದ ಚಿತ್ರಗಳಲ್ಲಿ ಒಂದು ಇತ್ತೀಚೆಗೆ ಬಂದಿರುವ ಗೋವಿಂದ ನಿಹಲಾನಿಯವರ ಹಿಂದೀ ಚಿತ್ರ 'ಆಘಾತಂ'.

?ಮೇ 1 ರಂದು ಬರುವ 'ಕಾರ್ಮಿಕರ ದಿನ' ಏಕಿದೆ?ಅದರ ಬಗ್ಗೆ ತಿಳಿಸಿ.

-ಶ್ರೀನಿವಾಸ, ಚಾಮರಾಜಪೇಟೆ, ಬೆಂಗಳೂರು.

ಮೇ1 ಅಮೇರಿಕದಲ್ಲಿರುವ ಚಿಕಾಗೋದ ಕಾರ್ಮಿಕರು ನೂರುವರ್ಷಗಳಿಗೂ ಹಿಂದೆ ಕಾರ್ಮಿಕರ ಸಾರ್ವತ್ರಿಕ ಬೇಡಿಕೆ 8 ಗಂಟೆ ಕೆಲಸ'ಯ ಘೋಷಣೆಯ ಮೇಲೆ ಚಳವಳಿ ಹೂಡಿ ಜಾಗತಿಕ ಕಾರ್ಮಿಕ ಚಳುವಳಿಗೆ ನಾಂದಿ ಹಾಡಿದ ದಿನ. ಆ ಚಳುವಳಿಯಲ್ಲೇ ಈಗ · ಕಾರ್ಮಿಕರ ನೆತ್ತರಿನ ಕೆಂಬಾವುಟ ಹುಟ್ಟಿದ್ದು. ಅದರ ಚರಿತ್ರೆ ಇತರ ವಿವರಗಳ ಬಗ್ಗೆ ಈಗಾಗಲೇ ಹಲವು ಬಾರಿ 'ಐಕ್ಯರಂಗ' ದ ಮೇದಿನದ ವಿಶೇಷಗಳಲ್ಲಿ. ಉಳಿದ ಅಂಕಗಳಲ್ಲೂ ಪ್ರಕಟವಾಗಿದೆ. ಅದನ್ನು ಓದಿ.

ವಾರ್ಷಿಕ ಸ್ಮರಣೆ



ಪಿ. ಮಾಧವನ್
ನಿಧನ 11-8-1989

ಕಲ್ಯಾಣಿಯಮ್ಮ
(ಮೃತರ ಪತ್ನಿ)
ಬಂಧು ಮಿತ್ರರು,
ಸಂಗಾತಿಗಳು

40 ವರ್ಷಗಳ ಕಾಲ ಪಕ್ಷದಲ್ಲಿ ಸಂಗಾತಿಗಳಾಗಿ ಹಿತೈಷಿಗಳಾಗಿದ್ದರು

ಮೀಸಲಾತಿ ಏಕೆ ?

ಮಂಡಲ್ ಆಯೋಗದ ಶಿಫಾರಸುಗಳನ್ನು ಕೇಂದ್ರ ಸರ್ಕಾರ ಅಂಗೀಕರಿಸಿ ಹಿಂದುಳಿದ ಜಾತಿಗಳಿಗೆ ಶೇ 27 ರಷ್ಟು ಮೀಸಲಾತಿಯನ್ನು ಸಾರಿದೆ.

ರಾಜ್ಯದ ಕಾಂಗ್ರೆಸ್ ಸರ್ಕಾರ ಚಿನ್ನಪ್ಪ ರೆಡ್ಡಿ ಆಯೋಗದ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ.

ಈ ಸಂದರ್ಭದಲ್ಲಿ ಮೀಸಲಾತಿ ಏಕೆ, ಏನು ಎತ್ತಗಳ ಬಗ್ಗೆ ಒಂದು ವಿವರಣೆ, ಎಸ್.ಎಫ್.ಐ. ತರಗತಿಯಲ್ಲಿ ಕಾಂ. ನಾಗರಾಜ್‌ರವರ ಉಪನ್ಯಾಸವನ್ನು ಕಾಂ. ಕೆ.ವಿ. ಲೇಖನ ರೂಪಕ್ಕಿಳಿಸಿದ್ದಾರೆ.

ಈಗ ಅನೇಕ ಕಡೆ ಅಂಬೇಡ್ಕರ್ ದಿನಾಚರಣೆ ನಡೆಯುವುದನ್ನು ಮುಖ್ಯ ಮಂತ್ರಿ ಮಾನ್ಯರುಗಳು ಅಂಬೇಡ್ಕರ್ ಪ್ರತಿಮೆಗೆ ಮಾಲೆ ಹಾಕಲು ಸ್ಪರ್ಧೆ ನಡೆಸುವುದನ್ನು ಅವರ ಹೆಸರಿನಲ್ಲಿ ಉದ್ದುದ್ದ ಭಾಷಣಗಳನ್ನು ಬಿಗಿಯುವುದನ್ನು 9 ಕೋಟಿ ಬೆಲೆಯ ಅಂಬೇಡ್ಕರ್ ಭವನವನ್ನು ಕಟ್ಟಿಸುವ ಆಶ್ವಾಸನೆಯನ್ನು ನೀಡುವುದನ್ನು ನೋಡುತ್ತಿದ್ದೇವೆ.

ಸಂವಿಧಾನದ ರಚನೆಮಾಡಿದ ನಾಲ್ಕು ದಶಕಗಳ ನಂತರ, ಅವರ ನಿಧನದ ಮೂರುವರೆ ದಶಕಗಳ ನಂತರವೇ ಏಕೆ ಇಂತಹ ಸಡಗರ ಕಂಡುಬರುತ್ತಿದೆ? ಕಾರಣವಿಷ್ಟೆ. ಅಂಬೇಡ್ಕರ್‌ರವರಿಗೂ ಮೀಸಲಾತಿಗೂ ಬಹಳ ಹತ್ತಿರದ ಸಂಬಂಧ ಮತ್ತು ಮೀಸಲಾತಿ ಈಗ ದೇಶದಲ್ಲಿ ಹಲವೆಡೆ ಒಂದು ಜ್ವಲಂತ ವಿಷಯ. 70 ರ ದಶಕದಿಂದೀಚೆಗೆ ಗುಜರಾತಿನಲ್ಲಿ ಮೀಸಲಾತಿ ಪರ-ವಿರೋಧ ಕಾಳಗ ವರ್ಷಗಟ್ಟಲೆ ನಡೆಯಿತು. ತಮಿಳು ನಾಡಿನಲ್ಲಿ ವಣ್ಣಿಯಾರ್‌ಗಳ ಮೀಸಲಾತಿ ಪರ ವಿರೋಧಿ ಚಳುವಳಿ ಚುನಾವಣೆಗಳ ಮೇಲೆ ದೊಡ್ಡ ಪ್ರಭಾವ ಬೀರಬಹುದೆಂಬಷ್ಟು ವ್ಯಾಪಕವಾಗಿ ನಡೆಯಿತು. ಆಂಧ್ರದಲ್ಲಿ ಎನ್.ಟಿ.ಆರ್. ಸರಕಾರದಿದ್ದಾಗ ಚಳುವಳಿ ನಡೆಯಿತು. ಕರ್ನಾಟಕದಲ್ಲಿ ವೆಂಕಟಸ್ವಾಮಿ ಆಯೋಗದ ಪರ-ವಿರೋಧ ಚಳುವಳಿ ನಡೆಯಿತು.

ಇತ್ತೀಚೆಗೆ ಕೇಂದ್ರ ಸರ್ಕಾರ ಸಂಸತ್ತು, ವಿಧಾನಸಭೆಗಳಿಗೆ ಮೀಸಲಾತಿಯನ್ನು ಮುಂದುವರಿಕೆಗೆ ತಿದ್ದುಪಡಿ ತಂದಾಗ ಅದನ್ನೇ ನೆಪ ಮಾಡಿ ಉದ್ಯೋಗದಲ್ಲಿ ಮೀಸಲಾತಿಯ ವಿರುದ್ಧ ಉತ್ತರ ಪ್ರದೇಶ, ಬಿಹಾರಗಳಲ್ಲಿ ಚಳುವಳಿ ಎಬ್ಬಿಸಲು ಪ್ರಯತ್ನಿಸಲಾಯಿತು. ರಾಷ್ಟ್ರೀಯ ರಂಗ ಸರ್ಕಾರ ಮಂಡಲ್ ಆಯೋಗದ ಜಾರಿ ಮಾಡುತ್ತೇವೆಂದು ಘೋಷಿಸಿದೆ. ನಮ್ಮ ರಾಜ್ಯದಲ್ಲಿ ಚಿನ್ನಪ್ಪ ರೆಡ್ಡಿ ಆಯೋಗದವರದಿ ಕಾಯುತ್ತಿದೆ. ಇವೆರಡೂ ವರದಿಗಳನ್ನು ಜಾರಿಗೆ ಸಂಬಂಧಪಟ್ಟು ಹಲವೆಡೆ ತೀವ್ರ ಸ್ವರೂಪದ ಚಳುವಳಿಗಳು ಏಳುವ ಸಂಭವಗಳು ಬಹಳ ಇವೆ.

ಏಕೆ? ಎಂಬುದನ್ನು ಪರಿಶೀಲಿಸುವಾಗ ಮೀಸಲಾತಿ ಪರ-ವಿರೋಧ ಚಳುವಳಿಗಳು ಎಪ್ಪತ್ತರ ದಶಕದ ಮಧ್ಯಭಾಗದ ನಂತರವೇ ತೀವ್ರ ಸ್ವರೂಪ ಪಡೆಯಿತು ಎಂಬುದಕ್ಕೂ ಅದೇ ಸಮಯದಲ್ಲಿಯೇ ಅಂಬೇಡ್ಕರರ ಜಯಂತಿಗಳು ಸಂಘಗಳು ವ್ಯಾಪಕವಾಗಿ ಸ್ಥಾಪಿತವಾದವು ಎಂಬುದಕ್ಕೂ ಹತ್ತಿರದ ಸಂಬಂಧವಿದೆ.

ಸ್ವಾತಂತ್ರ್ಯ ನಂತರದ ಮೊದಲ ದಶಕಗಳಲ್ಲಿ ಹರಿಜನರಿಗೆ ನೀಡಿದ ಮೀಸಲಾತಿ ಸಾರ್ವತ್ರಿಕ ವಿರೋಧದ ಸ್ವರೂಪವನ್ನು ಪಡೆಯಲಿಲ್ಲ. ಈ ಮುಂದೆ ಶಿಕ್ಷಣ ಪಡೆದು ನಮ್ಮ ಜೀತದಿಂದ ತಪ್ಪಿಸಿಗಿರಬೇಕಾದ ಪರಿಸ್ಥಿತಿಯಿತ್ತು. ಏಕೆಂದರೆ ಆಗ ಉದ್ದಿಮೆಗಳು, ಕಾರ್ಖಾನೆಗಳು ಸ್ಥಾಪನೆಗೊಳ್ಳುತ್ತಿದ್ದವು. ಉದ್ಯೋಗವಕಾಶಗಳು ವಿಸ್ತರಣೆಗೊಳ್ಳುತ್ತಿದ್ದವು. ಆದರೆ ಸ್ವತಂತ್ರ ಭಾರತದ ಆಳುವ ವರ್ಗಗಳ, ಕೇಂದ್ರ ಸರ್ಕಾರಗಳ ನೀತಿಗಳಿಂದಾಗಿ, ಅದು ಅನುಸರಿಸಿದ ಬಂಡವಾಳಶಾಹಿ ಮಾರ್ಗದಿಂದಾಗಿ ಉದ್ಯೋಗಾವಕಾಶಗಳು ಕಮ್ಮಿಯಾಗ ಲಾರಂಭಿಸಿದಾಗಲೇ ಉದ್ಯೋಗಕ್ಕಾಗಿ ತೀವ್ರ ಅಹಿತಕರ ಸ್ಪರ್ಧೆ ನಡೆಸಬೇಕಾದ ಹಗಲಿರುಳೂ ಅನವರತ ಶ್ರಮ ಪಡಬೇಕಾದ ಪರಿಸ್ಥಿತಿಯಲ್ಲಿ 'ಮೀಸಲಾತಿ' ಎಲ್ಲರ ಕಣ್ಣು ಚುಚ್ಚಲಾರಂಭಿಸಿತು. ಅದರ ವಿರುದ್ಧ ಮೇಲ್ವರ್ಗಗಳು ಕೊಟ್ಟಿಕರಿಗೆ ನಿರುದ್ಯೋಗದಿಂದ ಬಳಲಿಬೆಂಡಾದ ಸಾವಿರಾರು ಮೇಲ್ಜಾತಿಯ ಯುವಕರು ಸ್ಪಂದಿಸಿದರು. ಮೀಸಲಾತಿಯ ಪ್ರಶ್ನೆ ಹರಿಜನರಿಗೆ ಪರವಾದ, ಪಕ್ಷಪಾತದ ಪ್ರಶ್ನೆ ಎಂದು ಸಾಮಾನ್ಯವಾಗಿ ನೋಡಲಾಗುತ್ತಿದೆ. ಆದರೆ ನಮ್ಮ ದೇಶದಲ್ಲಿ ಮೀಸಲಾತಿಯ ಪ್ರಶ್ನೆ ಮೊದಲು ಎದ್ದಾಗ ಅದಕ್ಕೆ ನೇತೃತ್ವ ನೀಡಿದವರು ಬ್ರಾಹ್ಮಣರು ಎಂದು ಮೀಸಲಾತಿಯ ಇತಿಹಾಸ ನೋಡಿದಾಗ ತಿಳಿಯುತ್ತದೆ. ಮೀಸಲಾತಿ ಎಂದರೆ ಜೀವನ ನಡೆಸಲು ಸೆಣಸಾಟ ನಡೆಸಬೇಕಾದ ಪರಿಸರದಲ್ಲಿ ದುರ್ಬಲ ವಿಭಾಗಗಳಿಗೆ ರಕ್ಷಣೆಯ ನೀಡಿಕೆ. ಇದು ಯಾವುದೇ-ಪ್ರಜಾಪ್ರಭುತ್ವ ಸಮಾಜದ ಕರ್ತವ್ಯ. ಆದ್ದರಿಂದಲೇ 'ಮೀಸಲಾತಿ' ಒಂದು ಪ್ರಜಾಸತ್ತಾತ್ಮಕ ಬೇಡಿಕೆ.

ಉದ್ಯೋಗಾವಕಾಶ ಕಡಿಮೆಯಾದಂತೆ, ಒಂದೊಂದು ಜಾಹಿರಾತಿಗೂ ಸಾವಿರಾರು ಜನ ಅರ್ಜಿ ಹಾಕುವ ಪರಿಸ್ಥಿತಿಯಲ್ಲಿ ಕೆಲಸ ಪಡೆಯಲು ಲಂಚ, ವಶೀಲಿಗಳ ಮೊರೆ ಹೋಗುವುದು ಎಲ್ಲ ಕಡೆ ಕಾಣುವ ಪ್ರವೃತ್ತಿ. ಈ ವಶೀಲಿ ಎಂದರೇನು?

ವಶೀಲಿಯ ಮೀಮಾಂಸೆ ಮಾಡಿದಾಗ ನಮಗೆ ಕಾಣುವುದು ರಾಜಕೀಯ ಪ್ರಭಾವ ಮತ್ತು ಅಧಿಕಾರಿಶಾಹಿಯ

> ಚುನಾವಣೆಯ ಕೆಲವೇ ದಿನಗಳ ಮೊದಲು ಮೀಸಲಾತಿಯನ್ನು ಹೆಚ್ಚಿಸಿ ಮೀಸಲಾತಿಪರ-ವಿರೋಧಿ ಕಲಹವನ್ನು ತೀವ್ರಗೊಳಿಸಿ ಆರಿಸಿ ಬಂದ ಗುಜರಾತಿನ ಕಾಂಗ್ರೆ ತಂತ್ರವನ್ನು ನೆನಪಿಸಿಕೊಳ್ಳೋಣ.

ಮೀಸಲಾತಿಯ ಕುತೂಹಲಕಾರಿ ಇತಿಹಾಸ

ಇಂದಿನ ವಿರೋಧಿಗಳೇ - ಅಂದು ಮೀಸಲಾತಿಯ ನಾಯಕರು.

ಮೀಸಲಾತಿಯ ಬೇಡಿಕೆಯದ್ದು ನಮ್ಮ ದೇಶದಲ್ಲಿ ಒಂದು ಶತಮಾನಕ್ಕೂ ದೀರ್ಘವಾದ ಇತಿಹಾಸ. 19 ನೇ ಶತಮಾನದ ಮಧ್ಯಭಾಗದಲ್ಲಿ ಇದು ಕೇಳಬಂತು. ಉನ್ನತ ಸರ್ಕಾರಿ ಹುದ್ದೆಗಳಾದ ಐ.ಸಿ.ಎಸ್. ಮತ್ತು ಕೆಳಗಿನ ದೊಡ್ಡ ಹುದ್ದೆಗಳಿಗೆ ಭರ್ತಿ ಮಾಡಿಕೊಳ್ಳುವಾಗ ಯುರೋಪಿಯನ್ನರೇ ಸಿಂಹಪಾಲು ಪಡೆಯದಂತೆ ಮಾಡಲು ಭಾರತೀಯರಿಗೆ ಮೀಸಲಾತಿ ನೀಡಬೇಕೆಂಬ ಒತ್ತಾಯ ಬಂತು–ಇದು ಬಂದದ್ದು ಆಗಷ್ಟೇ. ಇಂಗ್ಲೀಷ್ ಶಿಕ್ಷಣ ಪಡೆದು ಯುರೋಪಿಯನ್ನರೊಂದಿಗೆ ಅಸಮಾನ ಸ್ಪರ್ಧೆ ಎದುರಿಸಬೇಕಾಗಿದ್ದ ಭಾರತೀಯರು ಹೀಗೆ ಇಂಗ್ಲೀಷ್ ಶಿಕ್ಷಣ ಪಡೆದವರಲ್ಲಿ ಬಹುಪಾಲು ಬ್ರಾಹ್ಮಣರಾಗಿದ್ದುದರಿಂದ ಈ ಚಳುವಳಿಯ ನೇತೃತ್ವವನ್ನು ಬ್ರಾಹ್ಮಣರೇ ವಹಿಸಿದ್ದರು. ಆಗಿನ ಸಂದರ್ಭದಲ್ಲಿ ಇದು ಒಂದು ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದ ಆರಂಭವಾಗಿತ್ತು.

ಮೈಸೂರು ಮಹಾರಾಜರ ಆಡಳಿತ ಯಂತ್ರದಲ್ಲಿ ಪ್ರಭಾವಿಗಳಾಗಿದ್ದವರು ಎಲ್ಲಿಡೆಯೂ ಅಧಿಕಾರದಲ್ಲಿದ್ದವರು ತಮಿಳು ನಾಡಿನ ಬ್ರಾಹ್ಮಣರು-ದಿವಾನ್ ಶ್ರೀಶೇಷಾದ್ರಿ ಅಯ್ಯರ್, ದಿವಾನ್ ರಂಗಾಚಾರ್ಲು ಮುಂತಾದವರು. ಈ ತಮಿಳು ಬ್ರಾಹ್ಮಣರ ಹಾಗೂ ಮೈಸೂರು ಬ್ರಾಹ್ಮಣರ ನಡುವೆ ಉದ್ಯೋಗಗಳಿಗಾಗಿ ಸ್ಪರ್ಧೆ ನಡೆಯಿತು. ಬ್ರಿಟಿಷರು ತಮಗೆ ಪೂರ್ಣ ಅಧೀನರಾಗಿದ್ದ ತಮಿಳು ಬ್ರಾಹ್ಮಣರನ್ನೇ ನೇಮಿಸಬಯಸುತ್ತಿದ್ದರು.ಅದರ ವಿರುದ್ಧ 880 ರಿಂದ 1910 ರವರೆಗೆ ಸುಮಾರು ಮೂರು ದಶಕಗಳ ಕಾಲ ನಡೆದ ಈ ಹೋರಾಟಕ್ಕೆ ಮೈಸೂರಿನ ವೆಂಕಟಕೃಷ್ಣಯ್ಯ ಎಂಬುವರು ಇದಕ್ಕೆ ನೇತೃತ್ವ ಕೊಟ್ಟವರು. ಮೈಸೂರು ಬ್ರಾಹ್ಮಣರಾದ ವಿಶ್ವೇಶ್ವರಯ್ಯನವರಿಗೆ ದಿವಾನಗಿರಿ ದೊರೆತ ಮೇಲೆಯೇ ಅದು ತಣ್ಣಗಾದದ್ದು! ಇದು ಈಗ ಹಾಸ್ಯಾಸ್ಪದವಾಗಿ ಕಾಣಬಹುದಾದರೂ ಇದು ಕೂಡ ಸಾಮ್ರಾಜ್ಯಶಾಹಿ ವಿರೋಧಿ ಭಾವನೆಗಳು ಸೇರಿದ್ದ ಜಾತಿಯ ಹೋರಾಟ ಎಂಬುದು ಗಮನಿಸಬೇಕಾದ ಅಂಶ. ಅದೇ ಸಮಯದಲ್ಲಿಯೇ ಮೈಸೂರು ಆಳರಸರು ತಮಗೆ ಹೆಚ್ಚಿನ ಅಧಿಕಾರ ನೀಡಬೇಕೆಂದು ಹೋರಾಟ ನಡೆಸಿದ್ದರು.

ಬ್ರಾಹ್ಮಣೇತರ ಜಾತಿಗಳಲ್ಲಿ ಶಿಕ್ಷಣ ಹರಡಿ ಹೊಸ ಬುದ್ಧಿಜೀವಿ ವರ್ಗ ಉದೀಯಮಾನ ಬಂಡವಾಳಶಾಹಿ ಮೌಲ್ಯಗಳಿಂದ ಪ್ರಭಾವಿತವಾಗಿದ್ದ ಬುದ್ಧಿಜೀವಿಗಳು ಉದಯವಾಗಲಾರಂಭಿಸಿದಂತೆ ಅಬ್ರಾಹ್ಮಣ ಚಳುವಳಿ ದೇಶದ ಹಲವು ಭಾಗಗಳಲ್ಲಿ ಕಾಣಲಾರಂಭಿಸಿತು. ಇದು ಈ ಹೊಸ ಬುದ್ಧಿಜೀವಿ ವರ್ಗದ ಪ್ರಜಾಸತ್ತಾತ್ಮಕ ಚಳುವಳಿಯಾಗಿತ್ತು. ಮಹಾರಾಷ್ಟ್ರದಲ್ಲಿ ಜ್ಯೋತಿ ಬಾಪುಲೆಯವರ ನೇತೃತ್ವದಲ್ಲಿ ಇದು ಆರಂಭವಾಯಿತು. ಅಂಬೇಡ್ಕರ್ ಮೇಲೆ ಪ್ರಭಾವ ಬೀರಿದ ಮಹಾನ್ ವ್ಯಕ್ತಿಯಿವರು. ಇದೇ ರೀತಿ ಕೇರಳದಲ್ಲಿ ನಾರಾಯಣಗುರು ನೇತೃತ್ವದಲ್ಲಿ ಒಂದು ಆಂದೋಲನ ಆರಂಭವಾಗಿ ವ್ಯಾಪಕವಾಗಿ ಹರಡಿತು. ತಮಿಳುನಾಡಿನಲ್ಲಿ ಜಸ್ಟಿಸ್ ಪಾರ್ಟಿಯೆಂಬ ರಾಜಕೀಯ ಪಕ್ಷವೇ ಹುಟ್ಟಿಕೊಂಡಿತು. ಹಾಗೂ ಹಿಂದುಳಿದವರಿಗೆ ಮೀಸಲಾತಿಯ ಬಗ್ಗೆದೊಡ್ಡ ಕೂಗೆದ್ದಿತು.

> ವಿವಿಧ ಜಾತಿಗಳ ಜನ ಆಧುನಿಕ ಶಿಕ್ಷಣ ಪಡೆದು ಉದ್ಯೋಗಕ್ಕೆ ಸಿದ್ಧರಾಗುತ್ತಿದ್ದಂತೆಯೇ, ಅವರು ಉದ್ಯೋಗದಲ್ಲಿ ಮೀಸಲಾತಿಯ ಪ್ರಶ್ನೆ ಎತ್ತುತ್ತಾರೆ. ಶ್ರೇಣಿ ಬದ್ಧವಾದ, ಮೇಲು ಕೀಳಿನ ಕ್ಲಿಷ್ಟ ಜಾತಿ ಪದ್ಧತಿಯ ಮೇಲೆ ಬಂಡವಾಳ ಪದ್ಧತಿಯನ್ನು ಹೇರಿದಾಗ ಉಂಟಾದ ಕಲಸು ಮೇಲೋಗರದ ಪರಿಸ್ಥಿತಿಯಿದು. ಮೊದಲು ಬ್ರಾಹ್ಮಣರು, ನಂತರ ಭೂಮಿ ಕಾಣಿ ಹೊಂದಿ ಶ್ರೀಮಂತರಾಗಿದ್ದ ಅಬ್ರಾಹ್ಮಣರು, ಹೀಗೇ ಒಬ್ಬೊಬ್ಬರಾಗಿ ಮೀಸಲಾತಿಯ ಪ್ರಶ್ನೆ ಎತ್ತಿದರು. ತಮಗಿಂತ ತಡವಾಗಿ ಶಿಕ್ಷಣದ ಅವಕಾಶ ದೊರೆತ ಜಾತಿಗಳು ಆ ಪ್ರಶ್ನೆ ಎತ್ತಿದಾಗ ಅದನ್ನು ವಿರೋಧಿಸಿದರು. ಇದು ಮೀಸಲಾತಿಯ ಸ್ಥೂಲ ಇತಿಹಾಸ.

ಕರ್ನಾಟಕದಲ್ಲೂ ಇದರ ಪ್ರತಿಧ್ವನಿ ಕೇಳಿ ಬಂತು. ದಕ್ಷಿಣದಲ್ಲಿ ಒಕ್ಕಲಿಗರು, ಉತ್ತರದಲ್ಲಿ ವೀರಶೈವರ ಜಾತಿ ಸಂಘಟನೆಗಳು, ಶಿಕ್ಷಣ ಸಂಸ್ಥೆಗಳು ಹುಟ್ಟಿದವು. ಮೈಸೂರು, ಬೆಂಗಳೂರು, ಧಾರವಾಡ, ಮಂಗಳೂರಿನಲ್ಲಿ ಕಾಲೇಜುಗಳ ಸ್ಥಾಪನೆಯೊಂದಿಗೆ ಹೊಸದೊಂದು ಇಂಗ್ಲೀಷ್ ಶಿಕ್ಷಣಪಡೆದ ವರ್ಗ ಮೂಡಲಾರಂಭಿಸಿತು. ಮದ್ರಾಸಿನಲ್ಲಿ ಜಸ್ಟಿಸ್ ಪಾರ್ಟಿ ಸ್ಥಾಪನೆಯಾದ ವರ್ಷವೇ ಮೈಸೂರಿನಲ್ಲಿ ಪ್ರಜಾಮಿತ್ರ ಮಂಡಳಿ ಎಂಬ ಸಂಸ್ಥೆ ಸ್ಥಾಪನೆಯಾಗಿ ಬ್ರಾಹ್ಮಣರಿಗೆ ಮೀಸಲಾತಿಯ ಪ್ರಶ್ನೆ ಎತ್ತಿತು. ಮುಖ್ಯವಾಗಿ ಒಕ್ಕಲಿಗರು, ವೀರಶೈವರು ಮತ್ತು ಮುಸ್ಲಿಮರು ಈ ಪ್ರಶ್ನೆಎತ್ತಿದರು. ಮೈಸೂರಿನ ಮಹಾರಾಜರಿಗೆ ಒಂದು ಮನವಿ ಅರ್ಪಿಸಲಾಯಿತು.

ಪುಟ 6 ಕ್ಕೆ

ವರ್ಗ ಶೋಷಣೆಯೋ ಜಾತಿ ಶೋಷಣೆಯೋ?

ಒಬ್ಬ ವಿದ್ಯಾರ್ಥಿಯಿಂದ ಬಂದ ಪ್ರಶ್ನೆ: ಮೀಸಲಾತಿ ಎಂಬುದು ಜಾತಿ ಶೋಷಣೆಗೆ ವಿರುದ್ಧ ರಕ್ಷಣೆಯೋ ಅಥವಾ ವರ್ಗ ಶೋಷಣೆಗೆ ವಿರುದ್ಧವಾದ ರಕ್ಷಣೆಯೋ? ಭಾರತದಲ್ಲಿ ಇಂದು ನಡೆಯುತ್ತಿರುವುದು ಜಾತಿ ಹೋರಾಟವೋ–ವರ್ಗ ಹೋರಾಟವೋ

ಇದು ಜನಸಾಮಾನ್ಯರಲ್ಲಿ ಇಂದು ಬಹಳ ಸಾಮಾನ್ಯವಾಗಿ ಕಾಣುವ ಪ್ರಶ್ನೆ. ಭಾರತದ ಸಮಾಜವಾದಿಗಳು ಭಾರತದಲ್ಲಿ ವರ್ಗ ಹೋರಾಟ ಸಾಧ್ಯವಿಲ್ಲ, ಮಾರ್ಕ್ಸ್‌ನ ಸಿದ್ಧಾಂತ ಇಲ್ಲಿನ ಪರಿಸ್ಥಿತಿಗೆ ಸೂಕ್ತವಲ್ಲ, ಇಲ್ಲಿ ಜಾತಿ ಹೋರಾಟವೇ ಸೂಕ್ತ ಎಂದು ಪ್ರತಿಪಾದಿಸುತ್ತಿರುವುದರ ಹಿನ್ನೆಲೆಯಲ್ಲಿ ಬಂದ ಪ್ರಶ್ನೆ.

ಇಂದು ಬೆಂಡಿಗೇರಿ, ಹುತ್ತೂರು ಪ್ರಕರಣಗಳು, ಇತ್ತೀಚೆಗೆ ಸೊರಟೂರಿನಲ್ಲಿ ಹರಿಜನರ ಮನೆಗಳಿಗೆ ಬೆಂಕಿ, ಇವೆಲ್ಲವುಗಳನ್ನು ನೋಡಿದರೆ ಇದು ಜಾತಿಗಳ ಹೋರಾಟವೇ, ಕೆಳ ಜಾತಿಗಳ ವಿರುದ್ಧ ಮೇಲ್ಜಾತಿಗಳ ಧಾಳಿಯೇ ಎಂದು ಮೇಲ್ನೋಟಕ್ಕೆ ಕಾಣಿಸುತ್ತದೆ. ಆದರೆ ಜಾತಿಯ ಹೊರಪದರವನ್ನು ಸರಿಸಿ ಒಳಹೊಕ್ಕು ನೋಡಿದರೆ ಈ ಸಂಘರ್ಷಗಳ ನಿಜ ರೂಪ ನಮಗೆ ಗೊತ್ತಾಗುತ್ತದೆ.

ಹಳ್ಳಿಗಳಲ್ಲಿರುವ ಹರಿಜನರು ಯಾರು? ಅವರು ಮಾಡುವ ಉದ್ಯೋಗವೇನು? ಅವರು ಹೊಟ್ಟೆ ಹೊರೆಯಲು ಕೂಲಿಕಾರರಾಗಿ, ಜೀತದಾಳುಗಳಾಗಿ ಕೆಲಸ ಮಾಡುತ್ತಿರುವವರಲ್ಲವೇ. ಇವರ ಮೇಲೆ ಮೇಲ್ ಜಾತಿಗಳಿಗೆ ಸೇರಿದ ಭೂಮಾಲಕರು ಧಾಳಿ ಮಾಡಿದರೆ ಇದು ವರ್ಗ ಸಂಘರ್ಷವೋ ಜಾತಿ ಸಂಘರ್ಷವೋ? ಭಾರತದಲ್ಲಿ ಎಲ್ಲಾ ಜಾತಿಗಳಲ್ಲಿಯೂ ವರ್ಗ ವಿಭಜನೆಯಾಗುತ್ತಿದೆ. ಆದರೆ ಈ ವಿಭಜನೆ ಏಕ ಪ್ರಕಾರವಾಗಿ ಎಲ್ಲಾ ಜಾತಿಗಳಿಗೂ ಸಮನಾಗಿ ನಡೆಯುತ್ತಿಲ್ಲ. ಕೆಲವು ಜಾತಿಗಳಲ್ಲಿ ಬಂಡವಾಳಶಾಹಿ ವರ್ಗ, ಭೂಮಾಲಕ ವರ್ಗ, ಮಧ್ಯಮ, ವರ್ಗ, ಕಾರ್ಮಿಕ ವರ್ಗ, ಕೃಷಿ ಕೂಲಿಕಾರ ವರ್ಗಗಳೆಲ್ಲವೂ ಬೇರೆ ಬೇರೆ ಪ್ರಮಾಣಗಳಲ್ಲಿ ಕಾಣಿಸಿದರೆ ಕೆಲವು ಜಾತಿಗಳ ಇಡೀಯಾಗಿ ಒಂದೇ ವರ್ಗದಲ್ಲಿ ಉದಾಹರಣೆಗೆ ಶೇ 90 ಕ್ಕಿಂತ ಹೆಚ್ಚು ಹರಿಜನರು ಕೃಷಿ ಕೂಲಿಕಾರ ವರ್ಗಕ್ಕೆ ಬರಬಹುದು. ಹೀಗಾಗಿ ವರ್ಗ ಹೋರಾಟಗಳು ಜಾತಿಯ ಮುಖವಾಡ ಹೊತ್ತು ಬರುತ್ತವೆ.

ಅಷ್ಟು ಮಾತ್ರ ಅಲ್ಲ ಈ ಸಂಘರ್ಷಗಳ ವರ್ಗಸ್ವಭಾವವನ್ನು ಮುಚ್ಚಿಡಲು ಆಳುವ ವರ್ಗಗಳು ಸಂಚು ಹೂಡುತ್ತವೆ. ಶೋಷಿತ ವರ್ಗಗಳ ನಡುವೆ ಕೃಷಿ ಕಾರ್ಮಿಕರ ನಡುವೆ, ಕೃಷಿಕಾರ್ಮಿಕರು-ರೈತರ ನಡುವೆ ಬೆಳೆಯುತ್ತಿರುವ ಒಗ್ಗಟ್ಟನ್ನೊಡೆಯುವ ಸಾಧನವಾಗಿ ನಡೆಯುವ ಎಲ್ಲಾ ಘಟನೆಗಳಿಗೂ ಜಾತಿಯ ಧರ್ಮದ ಬಣ್ಣ ಹಚ್ಚಲಾಗುತ್ತಿದೆ.

ಹರಿಜನರ ವಿರುದ್ಧ ಒಟ್ಟಾಗಿ,ಅವರನ್ನು ಬಲಿಹಾಕಬೇಕು" ಎಂಬ ಕೂಗು ಒಂದು ಹಳ್ಳಿಯಲ್ಲಿ ಕೇಳಿ ಬಂದರೆ ಆ ಹಳ್ಳಿಯ ಮೇಲ್ಜಾತಿಯ ಜನರನ್ನು ಒಗ್ಗೂಡಿಸಲು ಪ್ರಯತ್ನ ನಡೆದರೆ ಅದರ ಅಂತರಾರ್ಥ ಏನು? ಇಂತಹ ಕೂಗನ್ನು ಎಬ್ಬಿಸುವವರಾರು ಆಹಳ್ಳಿಯ ಅತ್ಯಂತ ಶ್ರೀಮಂತರು ಭೂಮಾಲಕರಲ್ಲವೇ? ಕೃಷಿ ಕಾರ್ಮಿಕರಾದ ಹರಿಜನರ ವಿರುದ್ಧ ಮೇಲ್ಜಾತಿಗಳಿಗೆ ಸೇರಿದ ಈ ಭೂಮಾಲಕರು ಇದೇ ಮೇಲ್ಜಾತಿಗಳಿಗೆ ಸೇರಿದ ಮಧ್ಯಮವರ್ಗದ ರೈತರು ಬಡರೈತರು,ಕೂಲಿಕಾರರು ಎಲ್ಲರನ್ನೂ ತಮ್ಮ ಹಿಂದೆ ಸೆಳೆದುಕೊಂಡು ಒಂದು ವಿಭಾಗದ ಕೂಲಿಕಾರರನ್ನು ಹಣ್ಣುಮಾಡುವ ಕೆಲಸ. ಜಾತಿಯತೆಯ ಪಾಳೆಯಗಾರಿ ಸಿದ್ಧಾಂತವನ್ನುಪಯೋಗಿಸಿಕೊಂಡುಒಂದು ಜಾತಿಯ ಕೂಲಿಕಾರರ ಮತ್ತೊಂದು ಜಾತಿಯ ಕೂಲಿಕಾರರನ್ನು ವಿರುದ್ಧ ಎತ್ತಿಕಟ್ಟುವ ತಂತ್ರ. ಪಾಳೆಯಗಾರಿ ವಿಚಾರಗಳನ್ನು ವರ್ಗ ಸಂಘರ್ಷವನ್ನು ಹತ್ತಿಕ್ಕಲು ಬಳಸುವ ಹೂಟ.

ಮೀಸಲಾತಿ ಎಂಬುದು ಈಗಾಗಲೇ (ಲೇಖನದಲ್ಲಿ) ಹೇಳಿದಂತೆ ಪಾಳೆಯಗಾರಿ ವರ್ಗದ ಶೋಷಣೆ ಹಿಂದಿನ ಮತ್ತು ಈಗಲೂ ಮುಂದುವರೆಯುತ್ತಿರುವ ದುಡಿಯುವ ಜನ ಜಾತಿಗಳ ನಡುವಣ ಅಸಮಾನತೆಯ ವಿರುದ್ಧ ರಕ್ಷಣೆ.

ಮೀಸಲಾತಿ ಬೇಕು

ಮೀಸಲಾತಿಬೇಕು ಎಂದು ಕೇಳುವ[illegible] ನಿಜವಾಗಿಯೂ ಕೇಳುತ್ತಿರುವುದೇನು?

ನಮಗೆ ಶಿಕ್ಷಣ ಬೇಕು - ಉದ್ಯೋ[illegible] ಒದಗಿಸುವ ಶಿಕ್ಷಣ ಬೇಕು - ನ[illegible] ಉದ್ಯೋಗ ಬೇಕು ಎಂದು.

ಮೀಸಲಾತಿ ಬೇಡ ಎಂದು ಹೇ[illegible]ವವರು ಕೂಡ ನಿಜವಾಗಿ ಕೇಳುತ್ತಿರು[illegible]ದೇನು? ನಮಗೆ ಶಿಕ್ಷಣದ ಸೌಲಭ್ಯ[illegible] ಬೇಕು ನಮಗೆ ಉದ್ಯೋಗಾವಕಾಶ[illegible] ಕಡಿಮೆಯಾಗುತ್ತಿವೆ - ನಮಗೆ ಉದ್ಯೋ[illegible] ಬೇಕು ಎಂದೇ

ಹಾಗಾದರೆ, ಬೇಕು ನಮಗೆಲ್ಲರಿ[illegible] ಶಿಕ್ಷಣ- ನಮಗೆಲ್ಲರಿಗೂ ಉದ್ಯೋಗಬೇ[illegible] ಎಂಬ ಬೃಹತ್ ಪ್ರಜಾಸತ್ತಾತ್ಮಕ ಚಳು[illegible]ಯಾಗಿ ಹೊರಹೊಮ್ಮಲು ಇರುವ [illegible] ಏನು?

ಭಾರತದ ಬಂಡವಾಳಶಾಹಿ ಆ[illegible] ವರ್ಗಗಳು ಮುಖ್ಯವಾಗಿ ಕಾಂಗ್ರೆಸ್[illegible] ಅದು ಇಂದಿರಾಗಾಂಧಿಯಿರಲಿ ದೇವರಾ[illegible] ಅರಸ್ ಇರಲಿ ಹರಿಜನರಲ್ಲಿ ಹಾ[illegible] ಹಿಂದುಳಿದ ಜಾತಿಗಳ ಜನರಲ್ಲಿ-ನಿ[illegible] ಮೀಸಲಾತಿ ಕೊಟ್ಟಿದ್ದೇವೆ. ಕೊಡು[illegible] ಹೆಚ್ಚಿಸುತ್ತೇವೆ. ನಿಮಗೆ ಉದ್ಯೋಗ ಸಿ[illegible] ಇನ್ನೇನೂ ಬೇಡ. ಇಷ್ಟು ಸಾಕು ನಿ[illegible] ಸ್ವರ್ಗವೇ ಸಿಗುತ್ತದೆ. ನಮಗೆ [illegible] ಹಾಕಿದರೆ ಸಾಕು--ಎಂಬ ಭ್ರಮೆ ಯ[illegible] ಹುಟ್ಟಿಸಿರುವುದರಿಂದ.

ಉದ್ಯೋಗಾವಕಾಶಗಳು ಕಡಿಮೆಯಾ[illegible]ದ್ದರೂ ನಮಗೆ ಉದ್ಯೋಗ ಸಿಕ್ಕಿ[illegible] ಸಿಕ್ಕುತ್ತದೆ ಮೀಸಲಾತಿಯೊಂದಿ[illegible] ಸಾಕು. ನಮಗೆ ಉದ್ಯೋಗ ಸಿಕ್ಕರೆ ಸಾ[illegible] ಉಳಿದವರ ಗೊಡವೆ ನಮಗೇನು? ಜಾತಿಗಳಲ್ಲಿಯೂ ವಿದ್ಯಾವಂತರಾದ[illegible]

ಪ್ರಭಾವ - ಇವುಗಳ ಮೇಲೆ ಆಳುವ ವರ್ಗಗಳ ಹಿಡಿತ. ಈ ಹಿಡಿತವನ್ನು ಭೂಮಾಲಕ ವರ್ಗದವರು ತಮ್ಮ ವರ್ಗದ ಅಧಿಪತ್ಯ ಮುಂದುವರಿಸುವ ಹಿನ್ನೆಲೆಯಲ್ಲಿ ಜಾತಿಯ ಪ್ರಭಾವವನ್ನು ಈ ಪಾಳೆಯಗಾರಿ ಸಮಾಜದ ಪಳೆಯುಳಿಕೆಯನ್ನು ಉಪಯೋಗಿಸುತ್ತಾರೆ. ಆದ್ದರಿಂದಲೇ ಮೇಲ್ಜಾತಿಗಳವರ ಪ್ರಮಾಣ ಶಿಕ್ಷಣದಲ್ಲಿ, ಉದ್ಯೋಗದಲ್ಲಿ ಹಾಗೆಯೇ ಮುಂದುವರಿದಿದೆ. ಆದರೆ ದುರ್ಬಲ ವರ್ಗದವರಿಗೆ, ಕೆಳ ಜಾತಿಗಳವರಿಗೆ ಈ ವಶೀಲಿ- ಶಿಫಾರಸುಗಳು ಎಷ್ಟು ಸಾಧ್ಯ.

ಇವೆಲ್ಲಕ್ಕಿಂತ ಹೆಚ್ಚಾಗಿ ನಮ್ಮ ದೇಶದ ಸಮಾಜ ಹಾಗೂ ಆರ್ಥಿಕತೆ ಊಳಿಗಮಾನ್ಯ ಪಳೆಯುಳಿಕೆಗಳ ಮೇಲೆಯೇ ಬಂಡವಾಳಶಾಹಿಯನ್ನು ಹೇರಿದ ವ್ಯವಸ್ಥೆ.

ಈ ವ್ಯವಸ್ಥೆಯಲ್ಲಿ ಹರಿಜನ ಗಿರಿಜನರ ಮೇಲೆ ಇತರ ದುರ್ಬಲ ಜನ ವಿಭಾಗಗಳ ಮೇಲೆ ಎರಡೆರಡು ಶೋಷಣೆಯ ಹೊರೆ ಹೇರಿ ಕುಳಿತಿದೆ. ಒಂದು ಎಲ್ಲ ಜನಸಾಮಾನ್ಯರೂ ಅನುಭವಿಸುತ್ತಿರುವ ಬಂಡವಾಳಶಾಹಿ ಶೋಷಣೆ. ಇದರೊಂದಿಗೆ ಸಾವಿರಾರು ವರ್ಷಗಳಿಂದ ನಿರಂತರವಾಗಿ ನಡೆಯುತ್ತಿರುವ ಈಗಲೂ ಸಾಗುತ್ತಿರುವ ಪಾಳೆಯಗಾರೀ ಶೋಷಣೆ. ಪಾಳೆಯಗಾರಿ ಶೋಷಣೆ ಭೂಮಿಯ ಕೇಂದ್ರೀಕರಣದ ಕೆಲವೇ ಭೂಮಾಲಕರು ಎಲ್ಲ ಭೂಮಿಯನ್ನು ಭಾರತದ ಪ್ರಧಾನ ಉತ್ಪಾದನಾ ಸಾಧನವನ್ನು ತಮ್ಮ ಮುಷ್ಟಿಯಲ್ಲಿ ಹಿಡಿದಿರುವುದರಿಂದ ಬಹಳ ಜನ ಕೆಳ ಜಾತಿಗಳವರು ಭೂಹೀನರಾಗಿ ಕೂಲಿಕಾರರಾಗಿ ಶಿಕ್ಷಣವೂ ಸಾಧ್ಯವಾಗದಿರುವ ಪರಿಸ್ಥಿತಿ-- ಜಾತಿಗಳ ನಡುವೆ ಸಾಮಾಜಿಕ ಅಸಮಾನತೆ ಅಸ್ಪೃಶ್ಯತೆಯ ಪರಿಸ್ಥಿತಿಗೆ ಕಾರಣವಾಗಿದೆ.

ಆದುದರಿಂದ ಮೀಸಲಾತಿಯ ಪ್ರಶ್ನೆಯೆಂದರೆ ದುರ್ಬಲ ವಿಭಾಗಗಳ ಮೇಲಿರುವ ವಿಶೇಷ ಶೋಷಣೆ--ಪಾಳೆಯಗಾರಿ ಶೋಷಣೆ ಸೃಷ್ಟಿಸಿದ ಅಸಮಾನತೆಯ ವಿರುದ್ಧ ಶಿಕ್ಷಣವಕಾಶದಲ್ಲಿ ಉದ್ಯೋಗಾವಕಾಶದಲ್ಲಿ ರಕ್ಷಣೆ ನೀಡುವ ಪ್ರಶ್ನೆ ಮಾತ್ರ. ಮೀಸಲಾತಿ ಎಂದರೆ ಬೇರೆಯವರ ಉದ್ಯೋಗವನ್ನು ಕಸಿದು ಕೆಳಜಾತಿಗಳವರಿಗೆ

ಪುಟ 8 ಕ್ಕೆ

ಮೀಸಲಾತಿ ಬೇಡ

ದ್ಯೋಗ ಸಿಕ್ಕರೆ ಸಾಕು ಕೂಲಿಕಾರ, ರಾಗಿರುವ ನಮ್ಮ ಬಂಧುಗಳ ಗೊಡವೆ ? ಎಂಬ ಅವಕಾಶವಾದೀ ಚಿಂತನೆ ಗೂ ಮೀಸಲಾತಿ ಬೇಕು, ನಮಗೂ ಸಲಾತಿಬೇಕು ಎಂದು ಕೇಳುತ್ತಿರುವ ಧ ಜಾತೀಯ ಸಂಘಗಳು ಹಾಗೂ ರ ನಾಯಕರಲ್ಲಿ ಮೊಳೆತಿರುವುದರಿಂದ.

ಅದೇ ನಾಣ್ಯದ ಇನ್ನೊಂದು ಮುಖ ಉದ್ಯೋಗಾವಕಾಶಗಳು ಕಡಮೆ ಗುತ್ತಿದೆ ಆದರೂ ಮೀಸಲಾತಿ ಇಂದಿಲ್ಲದಿದ್ದರೆ ನಮಗೆ ಉದ್ಯೋಗ ಕ್ಕುತ್ತಿತ್ತು ಎಂಬ ಭಾವನೆ--ರಾಜಕೀಯ ಅಧಿಕಾರಿ ವಲಯದಲ್ಲಿ ಹೆಚ್ಚು ಭಾವಶಾಲಿಗಳಾಗಿರುವ, ಮುಖ್ಯ ಹುದ್ದೆ ನ್ನು ಹಿಡಿದಿರುವ "ನಮ್ಮ", ವರನ್ನು ದು ನಾವು ಹೇಗೂ ಉದ್ಯೋಗ ಯುತ್ತಿದ್ದೆವು ಮೀಸಲಾತಿ ಯೊಂದೇ ಗೆ ಅಡ್ಡಿ ಎಂಬ ಮೇಲ್ಜಾತಿಯ ದ್ಯೋಗಿಗಳ ಭಾವನೆಯಿಂದ ಎಲ್ಲ ತ ಹೆಚ್ಚಾಗಿ ಭಾರತದ ಆಳುವ ವರ್ಗ --ಭೂಮಿ ಬೇಕು--ಉದ್ಯೋಗ ಬೇಕು ಬ ಕೂಗನ್ನು ತಪ್ಪಿಸಲು ಮೀಸಲಾತಿ ಆಟವಾಡುತ್ತಿರುವುದರಿಂದ ಸಾತ್ಮಕ ಚಳುವಳಿಯಾಗಿ ಬೆಳೆಯು ಕ್ಕೆ ಅಡ್ಡಿಯಾಗಿದೆ.

ಎರಡೂ ಜನ ವಿಭಾಗಗಳಿಗೂ ತಮ್ಮ ಡಿಕೆಯ ಹಿಂದಿನ ನಿಜವಾದ ಬೇಡಿಕೆ ದ್ಯೋಗ ಬೇಕು ಎಂಬ ಮೂಲ ಡಿಕೆಯ ಬಗ್ಗೆ ಅರಿವು ಮೂಡಿಸಲು-- ಳೆಯಗಾರಿ ಹಾಗೂ ಬಂಡವಾಳಶಾಹಿ ಳ ಹೊಡೆತಗಳನ್ನು ಹೊರಗೆಳೆಯಲು ಪ್ರಯತ್ನ ಮಾಡುತ್ತಾ ಹೋರಾಟ ಡೆ ಸಾಗಬೇಕು.

ಸೂರಿಯವರ "ಹೋರಾಟದ ಬದುಕು"

ಹಿಂದಿನ ಸಂಚಿಕೆಯಲ್ಲಿ

ಉದ್ಯೋಗಿಯಾಗಿದ್ದ ಕಾಂ. ಸೂರಿ "ಚಲೇಜಾವ್" ಚಳುವಳಿಯಲ್ಲಿ ಭಾಗವಹಿಸಿ ಕೆಲಸ ಕಳೆದುಕೊಂಡರು. ಮತ್ತೆ ಕೆಲಸಕ್ಕೆ ಸೇರಿದ ನಂತರವೇ ಮನೆಗೆ ಬರುತ್ತೇನೆ ಎಂದು ಹಠ ತೊಟ್ಟು ಎಚ್.ಎ.ಎಲ್. ನಲ್ಲಿ ಕೆಲಸಕ್ಕೆ ಸೇರಿಯೇ ಮನೆಗೆ ಹೋದರು.

ಎಂಎಸ್.ಕೃಷ್ಣನ್ ರವರ ಗೆಳೆತನದ ದೆಸೆಯಿಂದಾಗಿ ಮತ್ತೆ ವಿದ್ಯಾರ್ಥಿ ಚಳುವಳಿಗೆ ಧುಮುಕಿದರು. ಅದಕ್ಕಾಗಿ ಎನ್ನೆಲ್ ರವರ ಅಪೇಕ್ಷೆಯ ಮೇರೆಗೆ ಕೆಲಸಕ್ಕೆ ರಾಜಿನಾಮೆ ನೀಡಿ. ಕಾಮರ್ಸ್ ವಿದ್ಯಾರ್ಥಿಯಾದರು. ಅವರ ಜೀವನದಲ್ಲಿ ಮತ್ತೊಂದು ತಿರುವು ಆರಂಭವಾಯಿತು.

ದಿವಾನರ ಮಗ ಭಾಷಣ ಮಾಡಲು ಬಿಡಲಿಲ್ಲ

ಅಂದು ಬೆಂಗಳೂರಿನಲ್ಲಿ ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳ ಸಂಘವಿತ್ತು. ಬೆಂಗಳೂರು ವಿದ್ಯಾರ್ಥಿ ಫೆಡರೇಷನ್‌ನಿಂದ ಈ ಸಂಘದ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿದ್ದೆವು. ಸಂಘದ ಪ್ರಧಾನಕಾರ್ಯದರ್ಶಿ ಸ್ಥಾನವನ್ನೂ ಗೆದ್ದು ಕೊಂಡಿದ್ದೆವು. 1946ರ ಚುನಾವಣೆಯಲ್ಲಿ ಕೂಡಾ ಸ್ಪರ್ಧಿಸಿದೆವು. ಆಗ ವಿದ್ಯಾರ್ಥಿ ಫೆಡರೇಷನ್‌ನವರು ಕಮ್ಯುನಿಸ್ಟರೆಂದು ಅಪಪ್ರಚಾರ ಕಮ್ಯುನಿಸ್ಟರೆಂದರೆ ದೇಶದ್ರೋಹಿಗಳೆಂದು ಅಪಪ್ರಚಾರ. ಕಮ್ಯುನಿಸ್ಟರೆಂದರೆ ದೇಶ ದ್ರೋಹಿಗಳೆಂದು ಅಪಪ್ರಚಾರ. ಇವುಗಳ ಮಧ್ಯೆ ದಯಾನಂದ ಸಾಗರ್ (ಮುಂದೆ ಎರಡು ಬಾರಿ ಎಂ.ಎಲ್‌ಎ. ಆಗಿದ್ದವರು ಬೆಂಗಳೂರಿನಲ್ಲಿ ಹಲವು ಖಾಸಗಿ ಶಿಕ್ಷಣ ಸಂಸ್ಥೆಗಳನ್ನು. ಕಲ್ಯಾಣಮಂಟಪಗಳನ್ನು ಸ್ಥಾಪಿಸಿದವರು) ಗೆ ವಿಜಯ.

ದಯಾನಂದ ಸಾಗರ್ ಕಾರ್ಯದರ್ಶಿಯಾಗಿದ್ದ ಈ ಸಂಘದ ಸಮಾರೋಪ ಭಾಷಣಕ್ಕೆ ಆಗ ದಿವಾನರಾಗಿದ್ದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರ ಮಗನನ್ನು ಆಹ್ವಾನಿಸಬೇಕೆಂದು ತೀರ್ಮಾನಿಸಿದರು. ದಿವಾನ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಟ್ರಾವಂಕೂರ್ ಸಂಸ್ಥಾನದ ದಿವಾನನಾಗಿದ್ದವರು. ಅಲ್ಲಿ ಜನರು ಅವನ ವಿರುದ್ಧ ತಿರುಗಿ ಬಿದ್ದು ಚಳುವಳಿ ಮಾಡಿದ್ದರು. ಬ್ರಿಟಿಷರ ಗುಲಾಮನಂತೆ ವರ್ತಿಸುತ್ತಿದ್ದವನು. ಟ್ರಾವಂಕೂರ್ ರಾಜರಿಗೆ ಸ್ವಾತಂತ್ರ್ಯದ ಸಮಯದಲ್ಲಿ 'ಭಾರತಕ್ಕೆ ಸೇರಬೇಡಿ' ಎಂದು ಬೋಧಿಸಿದವನು

(ಮೈಸೂರು ಸಂಸ್ಥಾನದಲ್ಲಿಯೂ ಚಳುವಳಿಯಾಯಿತು ಅದನ್ನು ಮುಂದೆ ಓದಿ)

ಸ್ವಾತಂತ್ರ್ಯ ಚಳುವಳಿಯ ಉತ್ತುಂಗದ ಆ ಸಮಯದಲ್ಲಿ ಇವನ ಮಗ ವಿದ್ಯಾರ್ಥಿ ಸಂಘದ ಸಮಾರೋಪ ಭಾಷಣ ಮಾಡುವುದೆಂದರೆ! ನಾವು ಇದಕ್ಕೆ ಅವಕಾಶ ಕೊಡಬಾರದೆಂದು ತೀರ್ಮಾನಿಸಿದೆವು. ವಿದ್ಯಾರ್ಥಿಗಳನ್ನು ಮೆರವಣಿಗೆಯಲ್ಲಿ ಒಯ್ದೆವು. ಪೋಲೀಸರು ನಮಗೆ ಅಡ್ಡ ಕಟ್ಟಿದ್ದರು. ನಮ್ಮನ್ನು ಬಂಧಿಸಿದರು. 'ಸೂರಿಯನ್ನು ಬಿಡುಗಡೆ ಮಾಡಿ ಎಂದು ವಿದ್ಯಾರ್ಥಿಗಳ ಹುಯಿಲು ಆರಂಭವಾಯಿತು. ಅನಿವಾರ್ಯವಾಗಿ ಪೋಲೀಸರು ಬಿಡುಗಡೆಮಾಡಬೇಕಾಯಿತು. ಬಿಡುಗಡೆ ಮಾಡಿದರೆಂದು ಸುಮ್ಮನಿರಲು ಸಾಧ್ಯವೇ? ಸಭೆ ನಡೆಯುವಲ್ಲಿ ನುಗ್ಗಿ ಸಭೆ ನಡೆಸಲು ಬಿಡಲಿಲ್ಲ. ದಯಾನಂದ್ ಸಾಗರ್ ಹಾಗೂ ಅವರ ಹಿಂಬಾಲಕರಿಂದ ಒಕ್ಕಲಿಗರ ಸಂಘದ ವಿದ್ಯಾರ್ಥಿಗಳಿಂದ ನಮ್ಮ ಮೇಲೆ ಧಾಳಿ ನಮ್ಮ ಬಟ್ಟೆಗಳನ್ನು ಹರಿದರು ಮೇಲೆ ಬಿದ್ದು ಹೊಡೆದರು.

ಅಂದು ಅನೇಕ ಜನ ಅಧ್ಯಾಪಕರು ಸಿ.ಡಿ. ನರಸಿಂಹಯ್ಯನವರಂತಹ ಪ್ರಾಧ್ಯಾಪಕರು, ಆರ್ಕಾಟ್‌ನ ಕಡೆ. ಆದರೆ ಪ್ರಿನ್ಸಿಪಾಲ್ ಶಿಕ್ಷಣ ಸಂಸ್ಥೆಯೊಳಕ್ಕೆ ಪೋಲಿಸನ್ನು ಬಿಡುವುದಿಲ್ಲವೆಂದ ದೃಢ ನಿರ್ಧಾರ ತೆಗೆದುಕೊಂಡರು. ಕೊನೆಗೂ ಸಭೆ ನಡೆಯಲಿಲ್ಲ. ಆದರೆ ಜನ ವಿದ್ಯಾರ್ಥಿಗಳಿಗೆ ಶಿಕ್ಷಣ ಮುಂದುವರೆಸುವುದರಿಂದ ಬರ್ತರ್ಫ್ ಮಾಡುವ ರಸ್ಟಿಕೇಷನ್ (Rustication) ಆಜ್ಞೆ. ಅದರಲ್ಲಿ ನನ್ನ ಜತೆ ಕೆ.ಸಿ. ರೆಡ್ಡಿ (ಮುಂದೆ ಮೈಸೂರು ಸಂಸ್ಥಾನದ ಪ್ರಥಮ ಮುಖ್ಯ ಮಂತ್ರಿಯಾದವರು ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ ಹಾಗೂ ಕಾರ್ಮಿಕ ಚಳುವಳಿಯ ನಾಯಕರಲ್ಲೊಬ್ಬರು) ಯವರ ಸಂಬಂಧಿ ರಾಮಕೃಷ್ಣ ಪ್ರಸಾದ್ ಎಂಬ ವಿದ್ಯಾರ್ಥಿಯೂ ಇದ್ದ) ಮುಂದೆ ಸ್ವಾತಂತ್ರ್ಯ ಬಂದ ಮೇಲೆಯೇ.

ಬಡ ವಿದ್ಯಾರ್ಥಿಗಳಿಗಾಗಿ

ಎರಡನೇ ಮಹಾಯುದ್ಧ ಹಾಗೂ ನಂತರದ ದಿನಗಳಲ್ಲಿ ಬೆಲೆಯೇರಿಕೆ ಹಣದುಬ್ಬರಗಳಿಂದ ಜನರ ಬದುಕು ಅಸಹನೀಯವಾಗಿತ್ತು. ಅನೇಕರು ವಿದ್ಯಾಭ್ಯಾಸ ಮುಂದುವರೆಸಲು ಬಹಳ ಕಷ್ಟಪಡುತ್ತಿದ್ದರು. ಈ ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದು ನಮ್ಮ ಚಟುವಟಿಕೆಯ ಪ್ರಮುಖ ಭಾಗವಾಗಿತ್ತು. ಒಂದು ಕಡೆ ಸ್ವಾತಂತ್ರ್ಯ ಹೋರಾಟ ಕಾರ್ಮಿಕರ, ಇತರ ಬಡಜನರ ಅನೇಕ ಹೋರಾಟಗಳಿಗೆ ಸಹಾಯ ಸೌಹಾರ್ದ ಬೆಂಬಲ ಇವುಗಳ ಜೊತೆಗೆ ವಿದ್ಯಾರ್ಥಿಗಳ ಆರ್ಥಿಕ, ಸಾಂಸ್ಕೃತಿಕ, ಕ್ರೀಡಾ ಜೀವನದ ಅವಿಭಾಜ್ಯ ಅಂಗವಾಗಿತ್ತು ವಿದ್ಯಾರ್ಥಿ ಫೆಡರೇಶನ್.

Students Aid Society (ಸ್ಟೂಡೆಂಟ್ಸ್ ಎಡ್ ಸೊಸೈಟಿ)

ವಿದ್ಯಾರ್ಥಿಗಳಿಗೆ ಸಹಾಯ ಮಾಡಲು ಅಂದು ನಾವು ಹಾಸ್ಟೆಲ್‌ಗಳನ್ನೇ ನಡೆಸುತ್ತಿದ್ದೆವು. ವಿದ್ಯಾರ್ಥಿಗಳಿಗಾಗಿ 40 ಜನರಿಗೆ ಪ್ರವೇಶವಿದ್ದ ವಿದ್ಯಾರ್ಥಿನಿಲಯವೊಂದನ್ನು ಸ್ಟುಡೆಂಟ್ಸ್ ಏಡ್ಸ್ ಸೊಸೈಟಿ (ವಿದ್ಯಾರ್ಥಿ ಸಹಾಯ ಸಂಘ) ಎಂಬ ಹೆಸರಿನ ಸಂಸ್ಥೆಯಿಂದ ನಡೆಸುತ್ತಿದ್ದೆವು. ನಾನು ಈ ಸಂಘಕ್ಕೆ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೆ. ಅನೇಕ ಪ್ರಮುಖರು, ಪ್ರತಿಭಾನ್ವಿತರು ಕಾಂಗ್ರೆಸ್ ಮುಖಂಡರು. ಶ್ರೀಮಂತರು ಈ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿ ನಿಲಯದ ವಾರ್ಡನಗಳಾಗಿ ಕೆಲಸಮಾಡಿದರು. ಬೆಂಗಾಲ್ ಲ್ಯಾಂಪ್ಸ್‌ನ ಎಚ್ ಆಚಾರ್ಯ ಈ ಸಂಘಕ್ಕೆ ಒಮ್ಮೆ ಅಧ್ಯಕ್ಷನಾಗಿದ್ದರೆ ಕಲ್ಲಂ ಶ್ರೀನಿವಾಸ ಶೆಟ್ಟಿಯವರೊಮ್ಮೆ ಖಜಾಂಚಿಯಾಗಿದ್ದರು. ಕಾಂಗ್ರೆಸ್ ನಾಯಕ ಗೋಪಾಲ ಸ್ವಾಮಿಅಯ್ಯಂಗಾರ್, ಆನಂದಭವನ್ ಹೋಟೇಲ್ ಮಾಲೀಕ ಈಶ್ವರಿ ಪ್ರಸಾದ್ ಈ ಕೆಲಸದಲ್ಲಿ ನಮ್ಮೊಡನಿದ್ದರು. ಬೆಂಗಳೂರಿನ ಜಿಲ್ಲಾಧಿಕಾರಿಗಳು ಮಲ್ಲೇಶ್ವರಂನ ಹತ್ತಿರವಿರುವ ಲಿಂಕ್ ರಸ್ತೆಯಲ್ಲಿ ಒಂದು ಮನೆಯನ್ನು ತಮ್ಮ ವಿಶೇಷಾಧಿಕಾರವನ್ನುಪಯೋಗಿಸಿ (Commander) ಮಾಡಿ ನಮಗೆ ಕೊಡಿಸಿದ್ದರು. ನಾವು ನಡೆಸುವ ವಿದ್ಯಾರ್ಥಿ ನಿಲಯ ದಕ್ಷತೆಯಲ್ಲಿ ಏನೂ ಕಡಿಮೆ ಇರಲಿಲ್ಲ. ಸೆಂಟ್ರಲ್ ಕಾಲೇಜು ವಿದ್ಯಾರ್ಥಿ ನಿಲಯದ ಜೊತೆ ಸ್ಪರ್ಧಿಸುತ್ತಿತ್ತು. ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ಕೋರಿ ನೂರಾರು ಅರ್ಜಿಗಳು ಬರುತ್ತಿದ್ದವು.

ಹೀಗೆ ವಿದ್ಯಾರ್ಥಿ ನಿಲಯಕ್ಕಾಗಿ, ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಸಹಾಯಕ್ಕಾಗಿ, ಹಣಸಂಗ್ರಹಿಸುತ್ತಿದ್ದವು.

ಅಂದಿನ ದುಬಾರಿ ದಿನಗಳಲ್ಲಿ ಬಡವಿದ್ಯಾರ್ಥಿಗಳನೇಕರು ವರ್ಷವೆಲ್ಲಾ ಕಷ್ಟಪಟ್ಟು ವ್ಯಾಸಂಗ ನಡೆಸಿದರೂ ಪರೀಕ್ಷಾ ಶುಲ್ಕ ಕಟ್ಟಲಾಗದೆ ಪರದಾಡುತ್ತಿದ್ದರು. ಕೊನೆಗೆ ಪರೀಕ್ಷೆಗೇ ಕುಳಿತುಕೊಳ್ಳಲಾಗದೆ ಹೋಗುವ ಪ್ರಸಂಗಗಳೂ ಅನೇಕ. ಇಂತಹ ಸಂದರ್ಭದಲ್ಲಿ ಈ ಸಂಘದ ವತಿಯಿಂದ ನೂರಾರು ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕವನ್ನು ನೀಡುತ್ತಿದ್ದೆವು.

ಪುರಭವನದಲ್ಲಿ ಸಂಗೀತೋತ್ಸವ

ಈ ಎಲ್ಲಾ ಸಹಾಯಗಳಿಗಾಗಿ ದೊಡ್ಡ ಪ್ರಮಾಣದ ಹಣ ಅಗತ್ಯವಾಗಿತ್ತು. ಇದಕ್ಕಾಗಿ ಒಂದು ದೊಡ್ಡ ಸಂಗೀತೋತ್ಸವವನ್ನು ಏರ್ಪಡಿಸಿದ್ದೆವು. ಪ್ರಸಿದ್ಧ ವಿದುಷಿಯರಾದ ವಸಂತ ಕೋಕಿಲ, ಡಿ.ಕೆ. ಪಟ್ಟಮ್ಮಾಳ್, ಬಾಂಬೆ ಸಹೋದರಿಯರು ಮೊದಲಾದ ಅನೇಕರನ್ನು ಒಳಗೊಂಡಂತೆ ಒಂದು ವಾರ ಕಾಲ ಪುರಭವನದಲ್ಲಿ (Townhall) ಸಂಗೀತೋತ್ಸವ. ಈ ಉತ್ಸವಮೊಂದರಿಂದಲೇ 15-20,000 ರೂ (ಅಂದಿನ ರೂಪಾಯಿ) ಸಂಗ್ರಹಿಸಿದ್ದೆವು.

ಒಮ್ಮೆ ಫುಟ್ ಬಾಲ್ ಪಂದ್ಯಗಳನ್ನು ಏರ್ಪಡಿಸಿ ಹಣ ಸಂಗ್ರಹಿಸಿದ್ದೆವು. ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶಸಿಗದ ವಿದ್ಯಾರ್ಥಿಗಳಿಗೆ ಹೋಟೇಲ್‌ಗಳಲ್ಲಿ ಊಟದ ಏರ್ಪಾಡು ಮಾಡಿದ್ದೆವು.

ಕ್ರೀಡಾ ಸ್ಪರ್ಧೆಗಳ ವಿಚಾರ ಸಂಕಿರಣಗಳು

ವಿದ್ಯಾರ್ಥಿಗಳ ಪ್ರತಿಭೆ - ಕ್ರೀಡಾ ಪ್ರತಿಭೆ ಬೌದ್ಧಿಕ ಪ್ರತಿಭೆ ಅರಳಲು ಅವರ ವಿದ್ಯಾರ್ಥಿ ಜೀವನ ಶ್ರೀಮಂತಗೊಳ್ಳಲು ಕಾರ್ಯಕ್ರಮಗಳನ್ನು ಮಾಡುತ್ತಿದ್ದೆವು. ವಿಚಾರ ಸಂಕಿರಣ ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನ ನೀಡುತ್ತಿದ್ದೆವು.

ಅಥ್ಲೆಟಿಕ್ಸ್ (ಓಟ ನೆಗೆತ ಇತ್ಯಾದಿ) ಸ್ಪರ್ಧೆಗಳನ್ನು ಏರ್ಪಡಿಸುತ್ತಿದ್ದೆವು. ಈ ಸ್ಪರ್ಧೆಗಳು ವಿದ್ಯಾರ್ಥಿಗಳಿಂದ ಶಿಕ್ಷಣ ಸಂಸ್ಥೆಗಳಿಂದ ಮಾನ್ಯತೆ ಪಡೆದಿದ್ದುವು. ಒಮ್ಮೆ ಈ ಸ್ಪರ್ಧೆಗಳಲ್ಲಿ ಸೈಂಟ್ ಜೋಸೆಫ್ ಕಾಲೇಜಿನ ವಿದ್ಯಾರ್ಥಿಗಳು ಶೀಲ್ಡ್ ಗೆದ್ದಾಗ ವಿಜಯೋತ್ಸವವನ್ನು ಆಚರಿಸಲು ಆ ಸಂಸ್ಥೆ ಕಾಲೇಜಿಗೆ ರಜೆ ಘೋಷಿಸಿತು.

ಕಾರ್ಮಿಕರೊಡನೆ

ಈ ಎಲ್ಲಾ ಚಟುವಟಿಕೆಗಳೊಂದಿಗೆ ಕಾರ್ಮಿಕರೊಡನೆ ಒಡನಾಟವೂ ಆರಂಭವಾಯಿತು. 1946ರಲ್ಲೊಮ್ಮೆ ಅಂಚೆ ನೌಕರರ ಮುಷ್ಕರದ ಕರೆ. ಆದರೆ ಈ ಅಖಿಲ ಭಾರತ ಕರೆಗೆ ಮದ್ರಾಸ್ ಪ್ರಾದೇಶಿಕ ವಿಭಾಗದ ಸಂಘಟನೆಯ ವಿರೋಧ. ಈ ಮುಷ್ಕರವನ್ನು ಬೆಂಬಲಿಸಿ ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ನಿಂದ ಕರ ಪತ್ರ. ಈ ಕರ ಪತ್ರ ತೆಗೆದುಕೊಂಡು ಅಂಚೆಯಣ್ಣದಿರನ್ನು ಭೇಟಿ ಮಾಡಲಾರಂಭಿಸಿದೆವು. ಮನ ಒಲಿಸಿದೆವು. ಪರಿಣಾಮ ಮದ್ರಾಸ್ ಪ್ರಾದೇಶಿಕ ವಿಭಾಗಕ್ಕೆ ಸೇರಿದ ಬೆಂಗಳೂರಿನಲ್ಲಿ ಅಂಚೆ ಮುಷ್ಕರ ಯಶಸ್ವಿಯಾಯಿತು. 1945-47ರ ಅವಧಿಯಲ್ಲಿ ಅನೇಕ ಕಾರ್ಮಿಕ ಚಳುವಳಿಗಳು. ಅಂದು ಕೃಷ್ಣ ಮಿಲ್ಸ್, ಟ್ಯಾನರಿ. ಪೌರಕಾರ್ಮಿಕರು ಮೊದಲಾದೆಡೆ ಕೆಂಬಾವುಟದ ಸಂಘಟನೆಗಳು. ಡಿ.ಎನ್ ಶ್ರೀರಾಮಲು. ಮರಿದಾಸ್, ಎಂ.ಎಸ್. ರಾಮರಾವ್. ಎಂ.ಎಸ್. ಕೃಷ್ಣನ್ ಈ ಕೆಂಬಾವುಟ ಸಂಘಗಳ ನಾಯಕರು. ಅನೇಕ ಕಾರ್ಮಿಕ ಹೋರಾಟಗಳಲ್ಲಿ ವಿದ್ಯಾರ್ಥಿಗಳು ಸೌಹಾರ್ದ ಬೆಂಬಲ ನೀಡಿ ಭಾಗವಹಿಸುತ್ತಿದ್ದೆವು. ಮುಷ್ಕರ ಮೆರವಣಿಗೆಗಳನ್ನು ಯಶಸ್ವಿಗೊಳಿಸಲು ಶ್ರಮಿಸುತ್ತಿದ್ದೆವು.

ಆರ್ಕಾಟ್ ಬಾಯ್ಕಾಟ್

ಆಗಸ್ಟ್ 15 ಬನಪ್ಪಾ ಪಾರ್ಕಿನಲ್ಲಿ (ಈಗಿನ ಚಿಕ್ಕ ಲಾಲ್ ಬಾಗ್) ನಲ್ಲಿ ಬೃಹತ್ ಬಹಿರಂಗ ಸಭೆ ನಡೆಯಿತು. ಆಗ ಎ.ಐ.ಎಸ್.ಎಫ್. ನಿಂದ ಸಂವಿಧಾನ ರಚನೆಯ ಬಗ್ಗೆ ಚರ್ಚಿಸಲು ಒಂದು ಸಭೆ. ಅದಕ್ಕೆ ಕೆಂಗಲ್ ಹನುಮಂತಯ್ಯನವರಿಗೆ ಆಹ್ವಾನ (ಅವರನ್ನು ಆಗ ಕಮ್ಯುನಿಸ್ಟ್ ಎಂದು ಕರೆಯುತ್ತಿದ್ದರು ಮೈಸೂರಿನ ರಾಜ ಸತ್ತೆಯನ್ನು ತೀವ್ರವಾಗಿ ಟೀಕಿಸುತ್ತಿದ್ದುದಕ್ಕಾಗಿ.

ಸ್ವಾತಂತ್ರ್ಯ ಬಂದರೂ ಮೈಸೂರು ಸಂಸ್ಥಾನದಲ್ಲಿ ಪ್ರಜಾಸತ್ತೆ ಬರಲಿಲ್ಲ. ಆಗ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ಆರಂಭವಾಯಿತು. ಆಗ ವಿದ್ಯಾರ್ಥಿ ಸಭೆಗಳನ್ನು ಮೆರವಣಿಗೆಗಳನ್ನು ನಡೆಸಿ ಈ ಹೋರಾಟವನ್ನು ಬೆಂಬಲಿಸಿದವು. ಆಗಲೂ ಆರ್ಕಾಟ್ ರಾಮಸ್ವಾಮಿಯೇ ದಿವಾನ ಅಂದಿನ ಘೋಷಣೆಗಳೇ "ಆರ್ಕಾಟ್ ಬಾಯ್ಕಾಟ್"?!, "ತಂಬೂಚೆಟ್ಟಿ ಚಟ್ಟ ಕಟ್ಟ"!!

ಈ ಮಧ್ಯೆ ಬಂಗಾಲದಲ್ಲಿ ತೀವ್ರವಾಗಿದ್ದ ಬರಗಾಲ ಪರಿಹಾರಕ್ಕಾಗಿ ನಿಧಿಕೂಡಿಸಿ ಕಳುಹಿಸಿದೆವು. ಸ್ವಾತಂತ್ರ್ಯದ ಹಿಂದೆಯೇ ಹಿಂದೂ ಮುಸ್ಲಿಂ ಗಲಭೆಗಳು ಆರಂಭವಾದಾಗ ಕೋಮು ಸೌಹಾರ್ದತೆ ಕಾಪಾಡಲು ಶ್ರಮಿಸಿದೆವು. ಶಾಂತಿ ಸಮಿತಿಯಲ್ಲಿ ನಮ್ಮನ್ನೂ ಸದಸ್ಯರನ್ನಾಗಿ ಮಾಡಿಕೊಂಡಿದ್ದರು. ಆಗ ಹಿಂದೂ - ಮುಸ್ಲಿಂ ಗಲಭೆಗಳು ತಲೆ ದೋರಬಹುದಾದ ಎಡೆಗಳಲ್ಲೆಲ್ಲಾ ವ್ಯಾಪಕ ಪ್ರಚಾರ ಮಾಡಿದ್ದೆವು.

ಪಕ್ಷದ ಸದಸ್ಯ:

ಇಷ್ಟೆಲ್ಲಾ ಚಟುವಟಿಕೆಗಳಲ್ಲಿ ಹೋರಾಟಗಳಲ್ಲಿ ಭಾಗವಹಿಸಿದ್ದರೂ ನಾನು ಪಕ್ಷದ ಸದಸ್ಯನಾಗಿರಲಿಲ್ಲ. ಕಾಂ. ಎನ್ನೆಲ್ ಎಂ.ಎಸ್ ಕೃಷ್ಣನ್ ಮೊದಲಾದವರೂ

ಪುಟ 8 ಕ್ಕೆ

"Self made Soori"

ಕಾಂ. ಸೂರಿಯವರು ತಮ್ಮ ಸ್ವಂತ ಪ್ರಯತ್ನದಿಂದ ತಮ್ಮನ್ನು ತಾವೇ ರೂಪಿಸಿ ಕೊಂಡವರು. ಹುಟ್ಟಿದ್ದು ಹಾಸನ ಜಿಲ್ಲೆಯ ಅರಕಲಗೂಡು. 1924 ರಲ್ಲಿ. ತಾತ ಅಮಲ್ದಾರ. ತಂದೆ ಕೈಗಾರಿಕೋದ್ಯಮಿ. ಮಹಾರಾಷ್ಟ್ರದ ವಿವಿಧ ಹತ್ತಿ ಗಿರಣಿಗಳಲ್ಲಿ ಜನರಲ್ ಮ್ಯಾನೇಜರ್ ಕೂಡ ಆಗಿದ್ದರು.

ಆಗೆಲ್ಲಾ ಸೂರಿ ತಾತನ ಮನೆಯಲ್ಲಿ ಅರಕಲ ಗೂಡಿನಲ್ಲಿಯೇ. ಅಲ್ಲಿಯೇ ಪ್ರಾಥಮಿಕ ವಿದ್ಯಾಭ್ಯಾಸ. ಸುಮಾರು 8-9 ನೆಯ ವಯಸ್ಸಿನಲ್ಲಿ ಬೆಂಗಳೂರಿಗೆ ಬಂದರು. ತಂದೆ ತಮ್ಮ ಉದ್ಯೋಗವನ್ನು ತೊರೆದು ಬೆಂಗಳೂರಿನಲ್ಲಿ ತಾವೇ ಉದ್ದಿಮೆಯನ್ನು ಆರಂಭಿಸಲು ಬಂದರು. ಈ ಪ್ರಯತ್ನದಲ್ಲಿಯೇ ಕಷ್ಟಗಳನ್ನೆದುರಿಸಿ ಹಳ ದಿಂದ ಕೆಲಸ ಮಾಡುತ್ತಾ 1933 ರಲ್ಲಿ ಮಡಿದರು. ಸೂರಿಯವರಿಗೆ ಆಗ ಕೇವಲ 9 ವರ್ಷ ವಯಸ್ಸು.

ಇಂತಹ ಪರಿಸ್ಥಿತಿಯಲ್ಲಿ ಪ್ರತಿ ಬೇಸಗೆಯಲ್ಲಿ ಕೆಲಸ ಮಾಡುತ್ತಾ ಅದರಿಂದಲೇ ತಮ್ಮ ಶಿಕ್ಷಣದ ವೆಚ್ಚವನ್ನೂ ಭರಿಸಿಕೊಳ್ಳುತ್ತಾ ಸಾಗಿದರು. ಹೀಗೆ ಒಂದು ವರ್ಷ ವ್ಯಾನ್ ಡೈಕ್ ಸ್ಟುಡಿಯೋದಲ್ಲಿ ಛಾಯಾಚಿತ್ರ ಗ್ರಾಹಕರ ಸಹಾಯಕನಾಗಿ, ಮತ್ತೊಂದು ವರ್ಷ ಕಾಕ್ಸ್‌ಟನ್ ಮುದ್ರಣಾಲಯದಲ್ಲಿ "ಪ್ರೂಫ್ ರೀಡರ್" ಆಗಿ ಮಗುದೊಂದು ವರ್ಷ ಚಂದ್ರಾ ಸ್ಪಿನ್ನಿಂಗ್ ಮತ್ತು ವೀವಿಂಗ್ ಗಿರಣಿಯಲ್ಲಿ ಹೀಗೆ ವಿಭಿನ್ನ ರೀತಿಯ ಕಷ್ಟಗಳೊಡನೆ ವೈವಿಧ್ಯಮಯ ಜೀವನಾನುಭವ ಗಳಿಸುತ್ತಾ ಸಾಗಿದರು.

ಬೆಂಗಳೂರಿನ ಫೋರ್ಟ್ ಹೈಸ್ಕೂಲಿನ ವಿದ್ಯಾರ್ಥಿಯಾದ ಇವರು, ಎಂ.ಎಸ್. ಕೃಷ್ಣನ್ ಮತ್ತು ನರಸಿಂಹನ್ ಎಸ್.ಎಸ್.ಎಲ್.ಸಿ.ಯಲ್ಲಿ ಜೊತೆಗೂಡಿ Joint Study ಮಾಡುತ್ತಾ ಇದ್ದವರು. ಎಸ್.ಎಸ್.ಎಲ್.ಸಿ.ಯಲ್ಲಿ ಫೇಲಾದಾಗ ಎಚ್.ಎ.ಎಲ್.ನಲ್ಲಿ ಕೆಲಸಕ್ಕೆ ಸೇರಿದರು.

ಆಂಧ್ರ: ಕಾರ್ಖಾನೆ ಪುನರಾರಂಭಕ್ಕೆ ತೀವ್ರ ಹೋರಾಟ



ಅಲ್ಲದೆ, ಜಿಲ್ಲಾಧಿಕಾರಿ ಕಚೇರಿಗೆ ಬೃಹತ್ ಮೆರವಣಿಗೆಯಲ್ಲಿ ತೆರಳಿ ರಾಜ್ಯಸರಕಾರ ಕಾರ್ಮಿಕ ವಿರೋಧಿ ಕ್ರಮ ಕೈಬಿಡುವಂತೆ ಆಗ್ರಹಿಸಿದರು. ಅದೇ ವೇಳೆ ಸಿ.ಐ.ಟಿ. ಯು, ಕಿಸಾನ್ ಸಭಾ, ವಿಮಾ ನೌಕರರ ಸಂಘ, ಐ.ಟಿ.ಆರ್, ಅಧ್ಯಾಪಕರ ಸಂಘಟನೆ, ಯುವಜನ ಫೆಡರೇಶನ್, ಮಹಿಳಾಸಂಘ, ವೈದ್ಯಕೀಯ ಪ್ರತಿನಿಧಿಗಳ ಸಂಘ ಮೊದಲಾದ ಸಂಘಟನೆಗಳು ಕೂಡ ಟಾಡಾ ತೆಗೆದುಹಾಕುವಂತೆ ಮನವಿ ಅರ್ಪಿಸಿದವು. ಅನಂತರ ನಡೆದ ಸಭೆಯನ್ನುದ್ದೇಶಿಸಿ ವಿವಿಧ ಸಂಘಟನೆಗಳ ಮುಖಂಡರು ಮಾತನಾಡಿದರು. ವಿವಿಧ ಸಂಘಟನೆಗಳ ಮುಖಂಡರು ಮುಂಬಯಿಯಲ್ಲಿ ವಿಧಾನಸಭೆ ಎದುರು ಬೃಹತ್ ಪ್ರದರ್ಶನ ನಡೆಸಿ 'ಟಾಡಾ' ಹಿಂತೆಗೆತಕ್ಕೆ ಒತ್ತಾಯಿಸಿತು.

ಯುನಿವರ್ಸಲ್ ಲಗೇಜ್ ಕಾರ್ಮಿಕರ ವಿರುದ್ಧ ಟಾಡಾ ಅನ್ವಯ ಮಾಡಿರುವುದನ್ನು ವಿರೋಧಿಸಿ ಜಾಲನಾದಲ್ಲಿಯೂ ವಿವಿಧ ಸಂಘಟನೆಗಳ ಕ್ರಿಯಾಸಮಿತಿ ಬಹಿರಂಗ ಸಭೆ ನಡೆಯಿತು. ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಕೂಡ ಹಲವಾರು ರೀತಿಯ ಪ್ರತಿಭಟನಾ ಕಾರ್ಯಕ್ರಮಗಳು ನಡೆಯುತ್ತಿವೆ.

ಯಶಸ್ವೀ ಹೋರಾಟ

ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ಮಂಡಳಿಯ ತಪ್ಪು ಧೋರಣೆಗಳ ವಿರುದ್ಧ ಅಮರಾವತಿ ಜಿಲ್ಲಾ ಡಿ.ವೈ.ಎಫ್.ಐ. ಮತ್ತು ಹಂಗಾಮಿ ಲಿಪಿಕರ ಕ್ರಿಯಾ ಸಮಿತಿ ನಡೆಸಿದ ಹೋರಾಟವೊಂದು ಯಶಸ್ವಿಯಾಗಿದೆ.

ಸಮಿತಿ ಚಳವಳಿ ನಡೆಸಿದ ಫಲವಾಗಿ ನಾಲ್ವರು ಯುವಕರನ್ನು ಅಮರಾವತಿಯ ಪಠ್ಯಪುಸ್ತಕ ಉಪಭಂಡಾರದಲ್ಲಿ ಮತ್ತೆ ಕೆಲಸಕ್ಕೆ ಸೇರಿಸಿಕೊಳ್ಳಲಾಗಿದೆ.

ರ್‍ಯಾಲಿಯಲ್ಲಿ ಉಲ್ಲಸಿತ ವಾತಾವರಣ ಉಂಟಾಯಿತು.

ಸಂಘಟನೆಯ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯೆ ಜಗಮತಿ, ಸಹಕಾರ್ಯದರ್ಶಿ ಬೃಂದಾ ಕಾರಟ್, ರಾಜಸ್ತಾನ ಘಟಕದ ಅಧ್ಯಕ್ಷೆ ಮಧು ಸೇಠಿಯೂ ಅವರೂ ರ್‍ಯಾಲಿಯಲ್ಲಿ ಮಾತನಾಡಿದರು.

ಮಧು ಸೇಠಿಯಾ ಅವರು ಪ್ರತಿನಿಧಿ ಸಮ್ಮೇಳನವನ್ನು ಉದ್ಘಾಟಿಸಿದರು. 6856 ಸದಸ್ಯರನ್ನು ಪ್ರತಿನಿಧಿಸಿ 135 ಜನರು ಭಾಗವಹಿಸಿದ್ದರು. ಬೃಂದಾ ಕಾರಟ್ ಸಮಾರೋಪ ಭಾಷಣ ಮಾಡಿದರು.

ಮಹಾರಾಷ್ಟ್ರದಲ್ಲಿ ಟಾಡಾ ವಿರುದ್ಧ ವ್ಯಾಪಕ ಚಳವಳಿ

ಮುಖ್ಯವಾಗಿ ಪಂಜಾಬ್ ಮತ್ತಿತರ ಕಡೆ ಪ್ರತ್ಯೇಕತಾವಾದಿ ಶಕ್ತಿಗಳವಿರುದ್ಧ ಬಳಸಲಾಗುವುದೆಂದು ಮೊದಲು ಭರವಸೆ ನೀಡಲಾಗಿದ್ದ ಭಯೋತ್ಪಾದನೆ ಮತ್ತು ವಿಚ್ಛಿದ್ರಕಾರಿ ಚಟುವಟಿಕೆ ತಡೆಕಾನೂನನ್ನು (ಟಿ.ಎ.ಡಿ.ಎ) ಕಾಂಗ್ರೆಸ್(ಐ) ಸರಕಾರಗಳು ಹಿಂದೆ ದೇಶಾದ್ಯಂತ ಬಗ್ಗುಬಡಿಯಲು ದುರುಪಯೋಗಪಡಿಸಿ ಕೊಂಡ ಹಲವಾರು ಉದಾಹರಣೆಗಳು ಸಿಗುತ್ತವೆ.

ಅದಕ್ಕೆ ಇತ್ತೀಚಿನ ಒಂದು ದೃಷ್ಟಾಂತ ಮಹಾರಾಷ್ಟ್ರದ್ದು. ಷೈರ ಣ್‌ನಲ್ಲಿನ ಯುನಿವರ್ಸಲ್ ಲಗೇಜ್ ಕಂಪೆನಿಯ 600 ಕಾರ್ಮಿಕರ ವಿರುದ್ಧ ರಾಜ್ಯ ಸರಕಾರ 'ಟಾಡಾ' ದನ್ವಯ ಮೊಕದ್ದಮೆ ಹೂಡಿದೆ. ಅದನ್ನು ವಿರೋಧಿಸಿ ನಾಸಿಕದ ಸುಮಾರು 2000 ಕಾರ್ಮಿಕರು ಇತ್ತೀಚೆಗೆ ಕಪ್ಪು ಬ್ಯಾಡ್ಜ್ ಧರಿಸಿ 'ಪ್ರತಿಭಟನಾದಿನ' ಆಚರಿಸಿದರು.

ವಸಾಹತು ಶಾಹಿಗಳ ವಿರುದ್ಧ ಹೋರಾಡಿದ ಭಾರತೀಯ ರಾಷ್ಟ್ರೀಯ ಸೇನೆಯ (ಐ.ಎನ್.ಐ) ರಾಣಿಲಕ್ಷ್ಮಿಬಾ ರೆಜಿಮೆಂಟ್‌ನ ಕ್ಯಾಪ್ಟನ್ ಕಾಮ್ರೇಡ್ ಡಾಲಕ್ಷ್ಮಿ ಸೈಗಲ್ ಸಂದರ್ಭ: ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ (ಎ.ಐ.ಡಿ.ಡಬ್ಲ್ಯೂ.ಎ)ನ ಹರ್ಯಾಣ ಘಟಕದ ಜನವಾದಿ ಮಹಿಳಾ ಸಮಿತಿ- ಪ್ರಥಮ ರಾಜ್ಯ ಸಮ್ಮೇಳನದ ಅಂಗವಾಗಿ ಜುಲೈ 14 ರಂದು ರೋಹ್ಟಕ್‌ನಲ್ಲಿ ನಡೆದ ಬೃಹತ್ ಬಹಿರಂಗ ಸಭೆ. 14 ಮತ್ತು 15 ರಂದು ನಡೆದ ಸಮ್ಮೇಳನದ ಭಾಗವಾಗಿದ್ದ

ಈ ಮೊದಲ ದಿನದ ಸಮಾವೇಶದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಸಾವಿರಾರು ಮಹಿಳೆಯರು ಭಾಗವಹಿಸಿದ್ದರು.

ಬಟ್ಟೆ ಬರೆ, ಟೋಪ್ಪಿ ಮತ್ತು ಹೆಸರುಗಳು ಮಾತ್ರ ಬದಲಾದರೆ ಸಾಕಾಗದು. ಸರಕಾರದ ಮೂಲ ನೀತಿಗಳಲ್ಲಿ ತುರ್ತಾಗಿ ಬದಲಾವಣೆ ಆಗಬೇಕಾಗಿರುವುದು ಮುಖ್ಯ ಎಂದು ಎ.ಐ.ಡಿ.ಡಬ್ಲ್ಯೂ.ಎ.ಯ ಉಪಾಧ್ಯಕ್ಷರೂ ಆಗಿರುವ ಹಿರಿಯ ಸ್ವಾತಂತ್ರ್ಯ ಸೇನಾನಿ ಲಕ್ಷ್ಮಿ ಮಾರ್ಮಿಕವಾಗಿ ಪ್ರತಿಪಾದಿಸಿದರು. ಸರಕಾರ ತನ್ನ ನೀತಿಗಳನ್ನು ಬದಲಾಯಿ ಸುವಂತೆ ಒತ್ತಡ ಹೇರಲು ಮಹಿಳೆಯರು ಇತರ ವಿಭಾಗಗಳೊಂದಿಗೆ ಸೇರಿ ಸಾಧ್ಯವಾದಷ್ಟು ಗರಿಷ್ಠ ಪ್ರಯತ್ನಗಳನ್ನುಮಾಡಬೇಕೆಂದು ಅವರು ಮಹಿಳೆಯರಿಗೆ ಕರೆ ನೀಡಿದರು. ಆರ್ಥಿಕ ಸ್ವಾತಂತ್ರ್ಯ ಸಾಧನೆ ಈ ಹೋರಾಟದ ಅಂತಿಮ ಗುರಿಯಾಗಬೇಕು ಎಂದರು.

ಸ್ವಾತಂತ್ರ್ಯ ಸಮರದಲ್ಲಿ ಸ್ಫೂರ್ತಿಯ ಚಿಲುಮೆಗಳಲ್ಲಿ ಒಬ್ಬರಾಗಿದ್ದ ಕ್ಯಾಪ್ಟನ್ ಲಕ್ಷ್ಮಿಯವರಿಗೆ ಹಾರ್ದಿಕ ಸ್ವಾಗತಕೋರಲು ಅನೇಕ ಐ.ಎನ್.ಐ. ಯೋಧರು ಮತ್ತು ಸ್ವಾತಂತ್ರ್ಯ ಹೋರಾಟಗಾರರೂ ರ್‍ಯಾಲಿಗೆ ಬಂದಿದ್ದರು. ತಾವು ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಮಾಡಿದ ತ್ಯಾಗಗಳ ಅವರ ವರ್ಣನೆಯಿಂದ

1000 ಕಾರ್ಮಿಕರಿದ್ದು 5 ವರ್ಷಗಳಿಂದ ಮುಚ್ಚಲಾಗಿದೆ. ದುರಾಡಳಿತ, ವಂಚನೆ ಮತ್ತಿತರ ಅಂಶಗಳೇ ಅದಕ್ಕೆ ಕಾರಣ.

ಈ ಎರಡೂ ಕಾರ್ಖಾನೆಗಳ ಆಡಳಿತ ಪ್ರಭಾವಶಾಲಿ ಕಾಂಗ್ರೆಸ್(ಐ) ಗುಂಪುಗಳ ಕೈಯಲ್ಲಿದ್ದು ಅವುಗಳ ಮೇಲೆ ಕ್ರಮಕ್ಕೆ ಗೊಳ್ಳಲು ಆಂಧ್ರಪ್ರದೇಶದ ಕಾಂಗ್ರೆ ಸರಕಾರ ಹಿಂಜರಿಯುತ್ತಿದೆ.

ಒಂದು ಲಕ್ಷ ಸಹಿ

ಪಿಕೆಟಿಂಗ್ ನಡೆದ ಮರುದಿನ ಸಿ.ಐ.ಟಿ.ಯು ನಿಯೋಗವೊಂದು ಅರ್ಪಿಸಿತು. ಅಲ್ಲದೆ ಕರ್ನೂಲಿನ ಒಂದು ಲಕ್ಷ ಕಾರ್ಮಿಕರು ಮತ್ತು ನಾಗರಿಕ ಸಹಿಯುಳ್ಳ ಪ್ರತ್ಯೇಕ ಮನವಿಯನ್ನೂ ಅರ್ಪಿಸಿತು.

ಸ್ವಾತಂತ್ರ್ಯವೀರರ ಕನಸುಗಳ ಭಂಜಕರು......

ದೇಶವನ್ನು ಆಳುತ್ತಿರುವವರು ಸ್ವಾತಂತ್ರ್ಯ ಹೋರಾಟಗಾರರ ಸ್ವತಂತ್ರಭಾರತ ಭವಿಷ್ಯದ ಕುರಿತ ಕನಸುಗಳನ್ನು ನುಚ್ಚು ನೂರುಮಾಡುತ್ತಿದ್ದಾರೆ. ಆ ಕನಸುಗಳು ಲಕ್ಷಾಂತರ, ಕೋಟ್ಯಾಂತರ ಜನರು ಗಲ್ಲು ಶಿಕ್ಷೆಯೂ ಸೇರಿದಂತೆ ಬರ್ಬರ ಹಿಂಸೆಗಳನ್ನು ಧೀರತನದಿಂದ ಎದುರಿಸಲು ಸ್ಫೂರ್ತಿ ನೀಡಿದ್ದವು.......

ಎಲ್ಲಾ ಸಮುದಾಯಗಳ ಜನರೂ ದೇಶದ ಸ್ವಾತಂತ್ರ್ಯಕ್ಕಾಗಿ ಒಗ್ಗಟ್ಟಿನಿಂದ ಹೋರಾಡಿದ್ದರು. ಆ ಒಗ್ಗಟ್ಟು ಇಂದು ಒಡೆದು ಹೋಗುತ್ತಿದೆ; ಕೋಮು ಸೌಹಾರ್ದತೆ ಮತ್ತು ದೇಶದ ಸಮಗ್ರತೆಗೆ ಅಪಾಯ ಎದುರಾಗುತ್ತಿದೆ......

ಹೀಗೆಂದು ಸ್ವಾತಂತ್ರ್ಯ ಸಮರದ ದಿನಗಳನ್ನು ನೆನಪಿಸಿದವರು, ಇಂದಿನ ಸ್ಥಿತಿಗಾಗಿ ಮರುಗಿದವರು ಬ್ರಿಟಿಷ್

ಆಂಧ್ರ ಪ್ರದೇಶದಲ್ಲಿ ಮುಚ್ಚಿರುವ ಕಾರ್ಖಾನೆಗಳನ್ನು, ಅದರಲ್ಲೂ ಮುಖ್ಯವಾಗಿ ಕರ್ನೂಲ್‌ನಲ್ಲಿನ ಎ.ಪಿ. ಕಾರ್ಬೈಡ್ಸ್ ಮತ್ತು ಶ್ರೀ ರಾಯಲಸೀಮಾ ಪೇಪರ್ ಮಿಲ್ಸ್‌ನ್ನು ತೆರೆಯುವಂತೆ ಆಗ್ರಹಿಸಿ ರಾಜ್ಯದ ವಿವಿಧ ಭಾಗಗಳಿಂದ ಬಂದ 2000 ಕ್ಕೂ ಹೆಚ್ಚು ಕಾರ್ಮಿಕರು ಜುಲೈ 30 ರಂದು ರಾಜ್ಯಸರಕಾರದ ಸಚಿವಾಲಯ ಕಚೇರಿಗಳಿಗೆ ಮುತ್ತಿಗೆ ಹಾಕಿದರು. ಸಿ.ಪಿ.ಟಿ.ಯು. ಆಂಧ್ರ ಪ್ರದೇಶ ರಾಜ್ಯ ಸಮಿತಿಯ ಕರೆಯ ಮೇರೆಗೆ ನಡೆದ ಈ ಸ್ಫೂರ್ತಿದಾಯಕ ತೀಕ್ಷ್ಣ ಚಳುವಳಿಯಲ್ಲಿ 300 ಕ್ಕೂ ಹೆಚ್ಚು ಮಹಿಳೆಯರೂ ಪಾಲ್ಗೊಂಡಿದ್ದರು.

ಪಿಕೆಟಿಂಗ್ ನಿರತ ಮಹಿಳಾ ಕಾರ್ಮಿಕರನ್ನು ಬಲವಂತವಾಗಿ ಪೋಲೀಸ್ ವ್ಯಾನಿಗೆ ತಳ್ಳುವ ಸಂದರ್ಭಗಳಲ್ಲಿ ಬಲ ವಂತ ಕೆಲವು ಮಹಿಳೆಯರ ಬಟ್ಟೆಗಳೂ ಜಾರಿ ಹೋಗಲು ಕಾರಣವಾದ ಪೋಲೀಸ್ ಕೃತ್ಯವನ್ನು ಸ್ಥಳೀಯ ಪತ್ರಿಕೆಗಳು ಪ್ರಾಮುಖ್ಯತೆ ನೀಡಿ ಪ್ರಕಟಿಸಿದವು.

ಪಿಕೆಟಿಂಗ್ ವೇಳೆ ಮುಖ್ಯ ರಸ್ತೆಯಲ್ಲಿ ವಾಹನ ಸಂಚಾರ ಸುಗಮ ಗೊಳಿಸಲಿಕ್ಕಾಗಿ ಪೋಲೀಸರು ಹಲವಾರು ಸಲಲಾಠಿ ಪ್ರಹಾರ ನಡೆಸಿದರು. 550 ಜನರನ್ನು ಬಂಧಿಸಿ ಅನಂತರ ಬಿಡುಗಡೆಗೊಳಿಸಲಾಯಿತು.

ಸತತ ಚಳವಳಿ:

ಜುಲೈ 30 ರಂದು ನಡೆದ ಈ ಚಳವಳಿ ಕಳೆದ ಎರಡು ವರ್ಷಗಳಿಂದ ಮುಂದುವರಿಸಿಕೊಂಡು ಬಂದಿರುವ ಹೋರಾಟದ ಭಾಗವಾಗಿದೆ. ಎ.ಪಿ. ಕಾರ್ಬೈಡ್ಸ್ ಮತ್ತು ವಿಶಾಖಪಟ್ಟಣದಲ್ಲಿರುವ ಆಂಧ್ರ ಸ್ಟೀಲ್ಸ್ ಮತ್ತು ಮುಚ್ಚಿದ ಇತರ ಕಾರ್ಖಾನೆಗಳನ್ನು ಪುನರಾರಂಭಿಸಬೇಕೆಂದು ಸಿ.ಐ.ಟಿ.ಯು ಕಳೆದೆರಡು ವರ್ಷಗಳಿಂದ ವ್ಯಾಪಕ ಚಳವಳಿ ನಡೆಸುತ್ತಿದೆ. ಕಾರ್ಬೈಡ್ಸ್ ಮತ್ತು ಸ್ಟೀಲ್ಸ್‌ನಲ್ಲಿ ತಲಾ

ಮೀಸಲಾತಿ ಇತಿಹಾಸ...

ಪುಟ 4 ರಿಂದ

ಮಹಾರಾಜರು ಈ ಪ್ರಶ್ನೆ ಪರಿಶೀಲಿಸಲು ಮಿಲ್ಲರ್ ಸಮಿತಿ ನೇಮಿಸಿದರು.

ಮಿಲ್ಲರ್ ಸಮಿತಿ ಮೇಲ್ಮಟ್ಟದ ಹುದ್ದೆಗಳಲ್ಲಿ 50% ಹಾಗೂ ಕೆಳಮಟ್ಟದ ಹುದ್ದೆಗಳಲ್ಲಿ 2/3 ರಷ್ಟು ಅಬ್ರಾಹ್ಮಣರಿಗೆ ಮೀಸಲಾತಿ ಇಡಬೇಕೆಂದು ಶಿಫಾರಸು ಮಾಡಿತು. ಇದನ್ನು ಏಳು ವರ್ಷದೊಳಗೆ ಸಾಧಿಸಬೇಕು ಎಂದೂ ಅದು ಹೇಳಿತು. 1920 ರಲ್ಲಿ ಬಂದ ಈ ವರದಿಯನ್ನು ಬೇಗನೇ ಜ್ಯಾರಿಗೆ ತರಬೇಕೆಂದು ಮಹಾರಾಜರು ಬಯಸಿದರೆ ದಿವಾನರಾಗಿದ್ದ ವಿಶ್ವೇಶ್ವರಯ್ಯನವರು ಮೆಂಟ್ ಅಥವಾ ಯೋಗ್ಯತೆಯ ಪ್ರಶ್ನೆ ಎತ್ತಿ ಅದನ್ನು ವಿರೋಧಿಸಿದರು. ಆದರೂ 1921 ರಲ್ಲಿ ಮಿಲ್ಲರ್ ವರದಿ ಜ್ಯಾರಿಗೆ ಬಂತು. ವಿಶ್ವೇಶ್ವರಯ್ಯ ರಾಜೀನಾಮೆ ನೀಡಿದರು. ಹಾಸ್ಟೆಲುಗಳು ಇತ್ಯಾದಿ ಸೌಲಭ್ಯಗಳ ಮೂಲಕ ಬ್ರಾಹ್ಮಣೇತರರಿಗೆ ಹೆಚ್ಚೆಚ್ಚು ವಿದ್ಯಾವಕಾಶ, ಉದ್ಯೋಗಾವಕಾಶಗಳು ದೊರೆತವು. ಆದರೂ ಮಿಲ್ಲರ್ ಸಮಿತಿ ಹೇಳಿದ ಪ್ರಮಾಣದಲ್ಲಿ, ಅದು ಹೇಳಿದ ಅವಧಿಯೊಳಗೆ ಅಂದರೆ 1928 ರೊಳಗೆ ಈ ಮೀಸಲಾತಿಯ ಗುರಿ ಈಡೇರಲಿಲ್ಲ.

ಸುಮಾರು ಈ ಹೊತ್ತಿಗೆ ಪ್ರಜಾಪಕ್ಷ ವೆಂಬ ರಾಜಕೀಯ ಸಂಘಟನೆಯೂ ಆರಂಭವಾಯಿತು. ಅದು ಮೀಸಲಾತಿಯ ಹೋರಾಟವನ್ನು ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾಗಿದ್ದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮುಂದುವರೆಸಿತು.

ವಿವಿಧ ಜಾತಿಗಳ ಜನ ಆಧುನಿಕ ಶಿಕ್ಷಣ ಪಡೆದು ಉದ್ಯೋಗಕ್ಕೆ ಸಿದ್ಧರಾಗುತ್ತಿದ್ದಂತೆಯೇ, ಅವರು ಉದ್ಯೋಗದಲ್ಲಿ ಮೀಸಲಾತಿಯ ಪ್ರಶ್ನೆ ಎತ್ತುತ್ತಾರೆ. ಶ್ರೇಣಿ ಬದ್ಧವಾದ, ಮೇಲು ಕೀಳಿನ ಕ್ಲಿಷ್ಟ ಜಾತಿ ಪದ್ಧತಿಯ ಮೇಲೆ ಬಂಡವಾಳ ಪದ್ಧತಿಯನ್ನು ಹೇರಿದಾಗ ಉಂಟಾದ ಕಲಸು ಮೇಲೋಗರದ ಪರಿಸ್ಥಿತಿಯಿದು. ಮೊದಲು ಬ್ರಾಹ್ಮಣರು, ನಂತರ ಭೂಮಿ ಕಾಣಿ ಹೊಂದಿ ಶ್ರೀಮಂತರಾಗಿದ್ದ ಅಬ್ರಾಹ್ಮಣರು, ಹೀಗೇ ಒಬ್ಬೊಬ್ಬರಾಗಿ ಮೀಸಲಾತಿಯ ಪ್ರಶ್ನೆ ಎತ್ತಿದರು. ತಮಗಿಂತ ತಡವಾಗಿ ಶಿಕ್ಷಣದ ಅವಕಾಶ ದೊರೆತ ಜಾತಿಗಳು ಆ ಪ್ರಶ್ನೆ ಎತ್ತಿದಾಗ ಅದನ್ನು ವಿರೋಧಿಸಿದರು. ಇದು ಮೀಸಲಾತಿಯ ಸ್ಥೂಲ ಇತಿಹಾಸ.

ಭಾರತದಲ್ಲಿ ಪ್ರಜಾಸತ್ತಾತ್ಮಕ ಚಳುವಳಿಯ ಅಲೆ ಬಲವಾಗುತ್ತಿದ್ದಂತೆ- ಜಾತಿ ಭಾವನೆಗಳನ್ನು ಮೀರಿದ, ಬ್ರಿಟಿಷರ ಕಾಲ್ತುಳಿತಕ್ಕೆ ಈಡಾದ ನಾವೆಲ್ಲ ಒಂದೇ. ಎಂಬ ಹೊಸ ಕಾಣ್ಕೆ ಜನಸಾಮಾನ್ಯರನ್ನು ಒಗ್ಗೂಡಿಸುತ್ತಿದ್ದಂತೆ, ಬ್ರಿಟಿಷರು ಮೀಸಲಾತಿಯ ಚಳುವಳಿಯನ್ನು ಒಡೆದು ಆಳುವ ತಮ್ಮ ನೀತಿಯ ಒಂದು ಭಾಗವಾಗಿಸಲು ಪ್ರಯತ್ನಿಸಿದರು.

1920 ರ ಅಸಹಕಾರ ಚಳುವಳಿಯ ಹಿಂದೆಯೇ ಹಿಂದು ಮುಸ್ಲಿಂ ಗಲಭೆಗಳು ಆರಂಭವಾದಂತೆ ಬ್ರಿಟಿಷರು ಹಿಂದೂ . ಮುಸ್ಲಿಂ ಒಗ್ಗಟ್ಟನ್ನು ಒಡೆಯಲು ಪ್ರಯತ್ನಿಸಿದರು. ಅದರಲ್ಲಿ ಯಶಸ್ವಿಯೂ ಆದರು. ಅಂತೆಯೇ 1930ರ ಕರ ನಿರಾಕರಣೆ(ಉಪ್ಪಿನ ಸತ್ಯಾಗ್ರಹ)ದ ನಂತರ ಮುಸ್ಲಿಮರಿಗೆ, ಹರಿಜನರಿಗೆ ಪ್ರತ್ಯೇಕ ಕ್ಷೇತ್ರಗಳು ಎಂಬ ಬ್ರಿಟಿಷ್ ತಂತ್ರ ಅದರ ವಿರುದ್ಧ ಗಾಂಧಿಯವರ 24 ದಿನಗಳ ದೀರ್ಘ ಉಪವಾಸ ನಂತರ ಗಾಂಧಿ-ಅಂಬೇಡ್ಕರ್ ಒಪ್ಪಂದ ಇವು ಇದಕ್ಕೆ ಜ್ವಲಂತ ಉದಾಹರಣೆಗಳು. ಇವು ಸ್ವಾತಂತ್ರ್ಯ ಚಳುವಳಿಯನ್ನು ದುರ್ಬಲಗೊಳಿಸುವುದರಲ್ಲಿ ಬ್ರಿಟಿಷ್‌ರಿಗೆ ಸಾಕಷ್ಟು ನೆರವಾದುವು.

ಇಂದು ಕೂಡ ಭಾರತದ ಆಳುವ ವರ್ಗ ತನ್ನಹಿಂದಿದ್ದ ಜನತೆ ದೂರಸರಿಯುತ್ತಿದ್ದಂತೆ ಅವರ ಬೇಡಿಕೆ ಗಳನ್ನು ಪೂರೈಸಲು ವಿಫಲವಾಗುತ್ತಿದ್ದಂತೆ, ಭಾರತದಲ್ಲಿ ಏಳುತ್ತಿರುವ ಅಸಮಾಧಾನದ ದಳ್ಳುರಿಯನ್ನು ಎದುರಿಸಲಾರದೆ ಕೊಳಲುವಾಗೆಲ್ಲ ಮೀಸಲಾತಿಯನ್ನು ಜನರ ಐಕ್ಯತೆಯನ್ನೊಡೆಯಲು ಬಳಸುತ್ತಿದೆ.

ಇದರ ನಂತರ ಕರ್ನಾಟಕದಲ್ಲಿ 1979 ರಲ್ಲಿ ನೇಮಕಗೊಂಡ ಹಾವನೂರು ಆಯೋಗ ಇಂತಹ ಎರಡನೇ ಆಯೋಗವೆನ್ನಬಹುದು. ಆದರೆ ಸ್ವಾತಂತ್ರ್ಯ ದೊರೆತ ನಂತರದ ಮೊದಲ ಆಯೋಗ ಇದು. ರಾಜಕೀಯದ ಮೇಲೆ ಒಕ್ಕಲಿಗರು ಮತ್ತು ವೀರಶೈವರ ಪ್ರಭಾವ ಮಾತ್ರವೇ ಇದ್ದು, ಇವೆರಡು ಜಾತಿಗಳಲ್ಲೊಂದಕ್ಕೆ ಸೇರಿದವರು ಮಾತ್ರವೇ ರಾಜ್ಯದ ಮುಖ್ಯಮಂತ್ರಿಯಾಗಬಹುದಾದ ಸನ್ನಿವೇಶದಲ್ಲಿ ದೇವರಾಜ ಅರಸರು ಈ ಎರಡು ಪ್ರಬಲ ಬ್ರಾಹ್ಮಣೇತರ ಜಾತಿಗಳನ್ನು ಬಿಟ್ಟುಳಿದ ಹಿಂದುಳಿದ ಜಾತಿಗಳ ರಾಜಕೀಯ ಬೆಂಬಲಗಳಿಸಿ ಮುಖ್ಯಮಂತ್ರಿಗಳಾದಾಗ ಈ ಆಯೋಗ ನೇಮಕಗೊಂಡಿತು.

ಹಾವನೂರು ಆಯೋಗ 65% ಮೀಸಲಾತಿಯ ಶಿಫಾರಸು ಮಾಡಿ ವೀರಶೈವರನ್ನು ಮೀಸಲಾತಿ ಪಟ್ಟಿಯಿಂದ ಕೈಬಿಡಬೇಕೆಂದು ಸಲಹೆ ಮಾಡಿತು. ವೀರಶೈವ ಮಹಾಸಭೆಯ ಹೆಸರಿನಲ್ಲಿ ಇದರ ವಿರುದ್ಧ ಚಳುವಳಿ ಎಬ್ಬಿಸಲು ಪ್ರಯತ್ನ ನಡೆಯಿತು. ಅದು ಅಷ್ಟೊಂದು ಯಶಸ್ಸು ಕಾಣದಾದಾಗ ಕೋರ್ಟುಗಳ ಮೂಲಕ ಈ ಪ್ರಯತ್ನ ಮುಂದುವರಿಸಲಾಯಿತು. ಪರಿಣಾಮ ವಾಗಿ ಸುಪ್ರೀಂ ಕೋರ್ಟಿನ ತೀರ್ಪೊಂದು ಬಂತು. ಅದು ಹಾವನೂರ ಆಯೋಗ ಹೇಳಿದ್ದು ಸರಿಯೆಂದು ಹೇಳಿದರೂ ಹಿಂದುಳಿದ ಜಾತಿಗಳ ಪಟ್ಟಿಯ ಪುನರ್‌ಪರಿಶೀಲನೆ ಮಾಡಬೇಕು--ಇದಕ್ಕಾಗಿ ಮತ್ತೊಂದು ಆಯೋಗ ನೇಮಿಸಬೇಕೆಂದು ಸಲಹೆ ಮಾಡಿತು. ಈ ನಡುವೆ ಗುಂಡೂರಾಯರ ಕಾಂಗ್ರೆಸರ್ಕಾರ ಹೋಗಿ ಅಧಿಕಾರಕ್ಕೆ ಬಂದಿದ್ದ ರಾಮಕೃಷ್ಣ ಹೆಗ್ಡೆಯವರ ಜನತಾ ಸರ್ಕಾರ ವೆಂಕಟಸ್ವಾಮಿ ಆಯೋಗವನ್ನು ನೇಮಕಮಾಡಿತು. 1987ರಲ್ಲಿ ತನ್ನ ವರದಿ ಸಲ್ಲಿಸಿದ ಈ ಆಯೋಗ ವೀರಶೈವರೊಡನೆ ಒಕ್ಕಲಿಗರನ್ನು ಮೀಸಲಾತಿ ಪಟ್ಟಿಯಿಂದ ಕೈಬಿಡಬೇಕೆಂದು ಶಿಫಾರಸು ಮಾಡಿತು. ಇದರ ವಿರುದ್ಧ ಹಳೆಯ ಮೈಸೂರು ಪ್ರದೇಶದಲ್ಲಿ ವ್ಯಾಪಕ ಚಳುವಳಿ ನಡೆಯಿತು. ಶಿಕ್ಷಣ ರಂಗದಲ್ಲಿ ಖಾಸಗಿ ಜಾತಿಯ ಸಂಸ್ಥೆಗಳೇ ಹೆಚ್ಚಿರುವ ಸನ್ನಿವೇಶದಲ್ಲಿ ಜಾತಿಯ ಪ್ರಶ್ನೆ ಬಂದಾಗ ಜಾತಿ ಉದ್ಯೋಗ ಹೆಚ್ಚಿಸಲು ವ್ಯಾಪಕ ಬಳಕೆಯಾಗುತ್ತಿವೆ. ನಿರುದ್ಯೋಗ ಹೆಚ್ಚುತ್ತಿರುವಾಗ ಮೀಸಲಾತಿ-ವಿರೋಧಿ ಭಾವನೆ ಹರಡುವುದರಲ್ಲಿಯೂ ಇವು ಹೆಚ್ಚು ಹೆಚ್ಚು ಪಾತ್ರವಹಿಸುತ್ತವೆ. ವೆಂಕಟಸ್ವಾಮಿ ಆಯೋಗದ ವರದಿಯನ್ನು ಜನತಾ ಸರ್ಕಾರ ಅಂಗೀಕರಿಸದೆ ತಾನೇ ಒಂದು ಆಜ್ಞೆಯನ್ನು ಹೊರಡಿಸಿತು. ಇದು ಶೇ 98% ಜನರಿಗೆ ಶೇ 58% ಮೀಸಲಾತಿಯನ್ನು ನೀಡಿತು. ಮತ್ತು ಮತ್ತೊಂದು ಆಯೋಗವನ್ನು ನೇಮಿಸಿತು.

ಇತ್ತೀಚೆಗಷ್ಟೆ ವರದಿ ನೀಡಿರುವ ಈ ಚಿನ್ನಪ್ಪ ರೆಡ್ಡಿ ಆಯೋಗ ಮೀಸಲಾತಿ ಪ್ರಮಾಣವನ್ನೇ ಕಡಿಮೆ ಮಾಡಿದೆ. ಮೀಸಲಾತಿಗೆ ಮುಖ್ಯವಾಗಿ ಎರಡು ಆಧಾರಗಳನ್ನು ಅದು ಪರಿಗಣಿಸಿದೆ. ಸರ್ಕಾರಿ ಹುದ್ದೆಗಳಲ್ಲಿ ಪ್ರಮಾಣ ಮತ್ತು ಶಿಕ್ಷಣ ಪಡೆದವರ ಪ್ರಮಾಣ. ಮೂರನೆಯದಾಗಿ ಭೂಮಿ ಒಡೆತನದ ಪ್ರಮಾಣವನ್ನು ಕೂಡಾ ಅದು ಪರಿಗಣಿಸಿದೆ.

ಮೀಸಲಾತಿ ಪರ ಹೋರಾಟ ಪ್ರಜಾಸತ್ತಾತ್ಮಕ ಚಳುವಳಿಯ ಭಾಗವಾಗಿ ಪಾಳೆಯಗಾರಿ ಶೋಷಣೆಯ ವಿರುದ್ಧದ ಹೋರಾಟವಾಗಿರುವಾಗಲೇ ಜನರನ್ನು

ಇರಾಕ್ - ಕುವೈತ್ ಯುದ್ಧ

ಪುಟ 1 ರಿಂದ

ಯಾವ ಇತರ ದೇಶಗಳು ಮಧ್ಯಪ್ರವೇಶಿಸ ಬಾರದು ಎಂದೂ ಹೇಳಿದೆ. ಚೀನಾ ಭಾರತ ಸಹ ಸುಮಾರು ಇದೇ ಆಶಯವನ್ನು ವ್ಯಕ್ತಪಡಿಸಿವೆ.. ಅರಬ್ ದೇಶಗಳೇ ಇರಾಕ್ ಕ್ರಮದ ಬಗ್ಗೆ ಹೆಚ್ಚು ಕಡಿಮೆ ಮೌನ ತಾಳಿದೆ. ಈ ವಿಷಯದ ಮೇಲೆ ಕರೆಬಿದ್ದ ಅರಬ್ ದೇಶಗಳ ಶೃಂಗಸಭೆ, ಕುವೈತ್‌ನ್ನು ಯಾರು ಪ್ರತಿನಿಧಿಸಬೇಕು ಎಂಬ ಭಿನ್ನಾಭಿಪ್ರಾಯದಿಂದಾಗಿ ಮತ್ತು ಇರಾಕ್ ಸೈನ್ಯ ಹಿಂತೆಗೆಯುವ ಹೇಳಿಕೆ ಕೊಟ್ಟಿರುವುದರಿಂದ ಮುಂದೂಡಲಾಗಿದೆ. ವಿಶ್ವ ಸಂಸ್ಥೆಯ ಭದ್ರತಾ ಸಭೆ ಸಹ ಇರಾಕ್ ಕ್ರಮವನ್ನು ಖಂಡಿಸಿದೆ.

ಇರಾಕ್‌ನ ಈ ಕ್ರಮ ಅಮೆರಿಕಕ್ಕೆ ತನ್ನ ತೋಳೇರಿಸಲು ಅವಕಾಶ ಮಾಡಿ ಕೊಟ್ಟಿದೆ. ಈಗಾಗಲೇ ಮೂರು ಭಾರೀ ಅಮೆರಿಕನ್ ಯುದ್ಧಹಡಗುಗಳು, ಕೊಲ್ಲಿಯ ಹತ್ತಿರಕ್ಕೆ ಹೋಗುತ್ತಿವೆ. ಅಮೆರಿಕದ ಯುದ್ಧತಯಾರಿಗೆ ಸೌದಿ ಅರೇಬಿಯಾ, UAE ಮೇಲೆ ಇರಾಕ್ ಇಂತಹುದೇ ಕ್ರಮ ಕೈಗೊಳ್ಳಬೇಕೆಂಬ 'ಭಯ' ನೆಪವಾಗಿದೆ. ಅಮೆರಿಕನ್ ಬ್ಯಾಂಕುಗಳಲ್ಲಿ ಇರಾಕ್‌ನ ಹಣವನ್ನು ಸ್ಥಗಿತಗೊಳಿಸಲಾಗಿದೆ. ಇಂತಹುದೇ ಕ್ರಮವನ್ನು ಪಾಶ್ಚಿಮಾತ್ಯ ದೇಶದ ಇತರ ದೇಶಗಳೂ ಕೈಗೊಂಡಿವೆ. ಇತ್ತೀಚೆಗೆ ತೈಲದ ಬೆಲೆ ಜಾಸ್ತಿಯಾಗಿದ್ದು ಈ ದೇಶಗಳು ತೈಲವನ್ನು ಆಮದು ಮಾಡಿಕೊಳ್ಳುವುದರಿಂದ ಅವುಗಳ ಆರ್ಥಿಕ ಹಿತಾಸಕ್ತಿಗೆ ಏಟು ಬಿದ್ದಿದೆ. ಅಲ್ಲದೆ ಇರಾಕ್ ಅರಬ್ ದೇಶಗಳ ಸಾಮ್ರಾಜ್ಯಶಾಹಿ - ವಿರೋಧಿ ಆಶಯಗಳ ನಾಯಕನಾಗಿ ರೂಪುಗೊಳ್ಳುತ್ತಿದ್ದು, ಅದು ಅವುಗಳಿಗೆ ಕಣ್ಣುರಿ ತಂದಿದೆ. ಪಾಶ್ಚಿಮಾತ್ಯ ದೇಶಗಳ ಆರ್ಥಿಕ ದಿಗ್ಬಂಧನಕ್ಕೆ ಪ್ರತೀಕಾರವಾಗಿ ಇರಾಕ್ ಪ್ರದೇಶಗಳಿಗೆ ಸಾಲಮರುಪಾವತಿನಿಲ್ಲಿಸಿದೆ.

ಇರಾಕ್ ಈ ಕ್ರಮದ ಸಾಮ್ರಾಜ್ಯಶಾಹಿ-ವಿರೋಧದ ಆಧಾರದ ಮೇಲೆ ಬೆಳೆಯುತ್ತಿರುವ ಅರಬ್ ಐಕ್ಯತೆಗೆ ಪೂರಕವಾಗುತ್ತದೋ ಕುತ್ತಾಗುವುದೋ ನೋಡಬೇಕಾಗಿದೆ. ಸದ್ಯಕ್ಕಂತೂ ಅಮೆರಿಕ ಇರಾಕ್‌ನ ಈ ಕ್ರಮವನ್ನು ಅರಬ್ ಐಕ್ಯತೆಮುರಿಯಲು ಮಧ್ಯೆ ಮೂಗುತೂರಿಸಲು ಬಳಸಿಕೊಳ್ಳುವ ಎಲ್ಲಾ ಲಕ್ಷಣಗಳುಕಾಣುತ್ತಿವೆ.

ಕೊಲ್ಲಿ ಬಿಕ್ಕಟ್ಟು ಉಲ್ಬಣಗೊಂಡು, ಇರಾಕ್ ಸೈನ್ಯ ಕುವೈಟನ್ನು ಪ್ರವೇಶಿಸುವವರೆಗೆ ಹೋಗಿದೆ. ಕುವೈಟ್ ಸರ್ಕಾರ ಬಿದ್ದು ಅಲ್ಲಿನ 'ಅಮೀರರು' ಸೌದಿ ಅರೇಬಿಯಾಕ್ಕೆ ಓಡಿಹೋಗಿದ್ದಾರೆ. ಅಮೆರಿಕಾ ತನ್ನ ಮಿಲಿಟರಿ ತೋಳೇರಿಸುವುದರ ಜತೆ ಮಧ್ಯಪ್ರವೇಶಕ್ಕೆ ತಯಾರಿ ನಡೆಸಿದಂತೆ ಈ ಬಿಕ್ಕಟ್ಟು ಅಂತರಾಷ್ಟ್ರೀಯವಾಗುವ ಸೂಚನೆಗಳಿವೆ. 40 ವರ್ಷಗಳ ಭೂಗತ ಅಸ್ತಿತ್ವದ ನಂತರ ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷ ಅದರ ಮೇಲಿನ ನಿಷೇಧ ತೆಗೆದ ನಂತರ, ತನ್ನ ಅಸ್ತಿತ್ವ ಘೋಷಿಸಿಕೊಂಡಿದೆ. ಸೋವಿಯತ್ ಒಕ್ಕೂಟ ರೈಲಿನಿಂದ ಎಸೆಯಬಹುದಾದ ಕ್ಷಿಪಣಿಗಳ ಉತ್ಪಾದನೆ ನಿಲ್ಲಿಸುವ ಘೋಷಣೆಮಾಡುತ್ತಿದ್ದಂತೆ ಬುಶ್ ಇನ್ನೂ ಶಸ್ತ್ರಾಸ್ತ್ರಗಳ ಆಧುನೀಕರಣ ಅಗತ್ಯವೆಂದಿದ್ದಾರೆ.

ಲೋಕ ಸಂಚಾರ

ದ. ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಉದಯ

40 ವರ್ಷಗಳು ಭೂಗತವಾಗಿ ಕೆಲಸ ಮಾಡುತ್ತಿದ್ದ, ದ. ಆಫ್ರಿಕಾದ ಕಮ್ಯುನಿಸ್ಟ್ ಪಕ್ಷ ಕಾನೂನುಬದ್ಧ ರಾಜಕೀಯ ಪಕ್ಷವಾಗಿ ಬಹಿರಂಗವಾಗಿ ಕೆಲಸ ಮಾಡಲಾರಂಭಿಸಿದೆ. ಪಕ್ಷದ ಈ ಹೊಸ ರೂಪವನ್ನು ಜೋಹಾನ್ಸ್‌ಬರ್ಗ್‌ನಲ್ಲಿ ಭಾರೀ ರ್‍ಯಾಲಿಯೊಂದರಲ್ಲಿ ಘೋಷಿಸಲಾಯಿತು. 50 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದ ಈ ರ್‍ಯಾಲಿ ಈ ಘೋಷಣೆಯನ್ನು ಭಾರೀ ಹರ್ಷೋದ್ಗಾರಗಳೊಂದಿಗೆ ಸ್ವಾಗತಿಸಿತು. ಕಮ್ಯುನಿಸ್ಟ್ ಪಕ್ಷದ ಹೆಚ್ಚಿನ ಉನ್ನತ ನಾಯಕರು ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್‌ನ ಪ್ರಮುಖ ನಾಯಕರೂ ಕೂಡಾ. ಕಮ್ಯುನಿಸ್ಟ್ ಪಕ್ಷದ ಸದಸ್ಯರೇ ANC ಬೆನ್ನೆಲುಬು. ವರ್ಣಬೇಧ ವಿರೋಧಿ ಚಳುವಳಿಯಲ್ಲಿ ಪ್ರಮುಖ ಪಾತ್ರ ಗೌರವ ಸಂಪಾದಿಸಿರುವ ಕಮ್ಯುನಿಸ್ಟರು ವರ್ಣಬೇಧ ನಿರ್ಮೂಲನ ಮಾಡಿದ ನಂತರ ಬರುವ ರಾಜಕೀಯ ವ್ಯವಸ್ಥೆಯಲ್ಲಿ ದೊಡ್ಡ ಪಾತ್ರವಹಿಸುವುದರಲ್ಲಿ ಸಂಶಯವಿಲ್ಲ. ಇದರಿಂದ ಗಾಬರಿಗೊಂಡಿರುವ ಬಿಳಿಯ ಸರ್ಕಾರ ANC ಮತ್ತು ಕಮ್ಯುನಿಸ್ಟ್ ಪಕ್ಷಗಳ ನಡುವೆ ಬಿಕ್ಕಟ್ಟು ಸೃಷ್ಟಿಸಲು ಈ ನಡುವೆ ಪ್ರಯತ್ನಿಸಿ ಸೋತಿದೆ. ಕಮ್ಯುನಿಸ್ಟ್ ಪಕ್ಷದ ಇತ್ತೀಚಿನ ಪಾಲಿಟ್‌ಬ್ಯುರೋದ ಸಭೆಯಲ್ಲಿ ANC ಯ ಶಾಂತಿಯುತ ಮಾತುಕತೆಗಳನ್ನು ವಿಫಲಗೊಳಿಸಿ, ಸಶಸ್ತ್ರದಂಗೆಯ ಮೂಲಕ ಅಧಿಕಾರ ಗಳಿಸಲು ಪಕ್ಷ ನಿರ್ಧರಿಸಿದೆ ಎಂದು ಬಿಳಿಯ ಸರ್ಕಾರ ಆಪಾದಿಸಿತು. ಈ ಬಗ್ಗೆ ಭಾರೀ ಅಪಪ್ರಚಾರ ಮಾಡಿತು. ಈ ಆಪಾದನೆ ಮೇಲೆ ಪಕ್ಷದ ವರಿಷ್ಠ ನಾಯಕ ಮ್ಯಾಕ್ ಮಹಾರಾಜರನ್ನು ಪುನಃ ಬಂಧಿಸಲಾಯಿತು. ಅವರು ಇತ್ತೀಚೆಗೆ ತಾನೆ 25 ವರ್ಷಗಳ ನಂತರ ಬಿಡುಗಡೆ ಮಾಡಲಾಗಿತ್ತು, ಅಲ್ಲದೆ ಸರಕಾರದ ಜತೆ ಮಾತುಕತೆ ಮಾಡುವ ANCಯ ನಿಯೋಗದಲ್ಲಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಜೋಸ್ಲೋವೋ ಇರಬಾರದು ಎಂಬ ಬಿಳಿಯ ಸರ್ಕಾರದ ಶರತ್ತನ್ನು ANC ತಿರಸ್ಕರಿಸಿದೆ. ಹಾಗಿದ್ದರೆ ANC ನಿಯೋಗ ಮಾತುಕತೆಗಳಲ್ಲಿ ಭಾಗವಹಿಸುವುದಿಲ್ಲ, ಎಂದು ಬೆದರಿಕೆ ಹಾಕಿದೆ. ಮಹಾರಾಜರನ್ನು ಬಿಡುಗಡೆಯ ಶರತ್ತನ್ನೂ ANC ಹಾಕಿದೆ.

ಕಮ್ಯುನಿಸ್ಟ್ ಪಕ್ಷದ ರ್‍ಯಾಲಿಯಲ್ಲಿ ಮಾತನಾಡಿದ ನೆಲ್ಸನ್ ಮಂಡೇಲಾ ಬಿಳಿಯ ಸರ್ಕಾರದ ಈ ಅಪಪ್ರಚಾರ ಕ್ರಮಗಳು 'ಶಾಂತಿಯುತ ಮಾತುಕತೆಗಳ ಪ್ರಕ್ರಿಯೆಗೆ ಅಪಾಯಕಾರಿ' ಎಂದು ... ಪ್ರಮುಖ ಎಂದುಖಂಡಿಸಿದ್ದಾರೆ. ಒಡೆದು ಆಳುವ ಈ ನೀತಿ ಫಲಕಾರಿಯಾಗುವುದಿಲ್ಲ, ಎಂದು ಎಚ್ಚರಿಸಿದ್ದಾರೆ.

ಪುಟ 8 ಕ್ಕೆ

'ಆರ್ಥಿಕ ಸಹಾಯ ಬೇಕೆ? - ಅಮೆರಿಕದ ಜತೆ ಕೈಎತ್ತಿ'

ಇದು ಅಧ್ಯಕ್ಷ ಬುಶ್‌ರಿಗೆ ಆರ್ಥಿಕ ಸಹಾಯವನ್ನು ಅಮೇರಿಕದ ಜತೆ ವಿಶ್ವ ಸಂಸ್ಥೆಯಲ್ಲಿ ಮತ ಚಲಾಯಿಸುವುದರ ಆಧಾರದ ಮೇಲೆ ನೀಡಬೇಕೆಂದು 'ಹೇರಿಟೇಜ್ ಫೌಂಡೇಶನ್' ಎಂಬ ಬಲಪಂಥೀಯ 'ಸಂಶೋಧನಾ' ಸಂಸ್ಥೆಯ ಸಲಹೆ. ಇತ್ತೀಚಿನ ವರ್ಷಗಳಲ್ಲಿ ವಿಶ್ವ ಸಂಸ್ಥೆಯ ಸದಸ್ಯ ದೇಶಗಳು ಅಮೆರಿಕದ, ಸೋವಿಯತ್ ಒಕ್ಕೂಟದ ಪ್ರಸ್ತಾಪಗಳಿಗೆ ತುಲನಾತ್ಮಕವಾಗಿ ಹೇಗೆ ಬೆಂಬಲ ನೀಡಿದ್ದಾರೆಂದು ಈ ಸಂಸ್ಥೆ ವಿಶ್ಲೇಷಿಸುತ್ತಿದೆ. ಅದರ ವರದಿ ಅತ್ಯಂತ ಹೆಚ್ಚಿನ ಅಮೆರಿಕನ್ ಧನಸಹಾಯ ಪಡೆಯುವ ಮೊದಲ 50 ದೇಶಗಳು (ಸುಮಾರು ಮಿಲಿಯ 10.5 ಡಾಲರುಗಳಷ್ಟು) ಅಮೆರಿಕ ಪರ ಶೇಕಡಾ 15 ರಷ್ಟು ಮತ ನೀಡಿದರೆ, ಸೋವಿಯತ್ ಜತೆ ಶೇಕಡಾ 97 ರಷ್ಟು ಮತ ನೀಡಿದೆ! ಕಳೆದ ವರ್ಷ ಎಲ್ಲಾ ವಿಶ್ವ ಸಂಸ್ಥೆಯ ಸದಸ್ಯ ಶೇಕಡಾವಾರು 7 ವರ್ಷಗಳಲ್ಲಿ ಎರಡನೆಯ ಅತ್ಯಂತ ಕಡಿಮೆ ಸಂಖ್ಯೆ (ಅಮೆರಿಕಾದ ವಿದೇಶ ನೀತಿ ಜಗತ್ತಿನ ಬಹುಪಾಲು ದೇಶಗಳ ಹಿಸಾಸಕ್ತಿಗೆ ಎಷ್ಟು ವಿರುದ್ಧವಾಗಿದೆ ಎಂಬುದಕ್ಕೆ ಇನ್ನೂ ಹೆಚ್ಚಿನ ಪುರಾವೆ ಬೇಕೆ?) ಅಮೆರಿಕ ವಿರುದ್ಧ ಮತ ನೀಡಿಕೆಯಲ್ಲಿ ಅಂಗೋಲಕ್ಕೆ ಪ್ರಥಮ ಸ್ಥಾನವಾದರೆ, ಭಾರತಕ್ಕೆ ಎರಡನೇ ಸ್ಥಾನ (ಭಲೆ! ನಾವು ಸಾಮ್ರಾಜ್ಯಶಾಹಿ - ವಿರೋಧದಲ್ಲಿ ಬೆಳ್ಳಿ ಪದಕ ಪಡೆದಿದ್ದೇವೆ!) ನಿರ್ಲಿಪ್ತ ದೇಶಗಳು ಅಮೆರಿಕನ್ ಪರ ಶೇಕಡಾ 11.6 ರಷ್ಟಾದರೆ, ಸೋವಿಯತ್ ಪರ ಮತ್ತು 98.9 ಶೇಕಡಾ ! (ಸೋವಿಯತ್ ನಿರ್ಲಿಪ್ತ ದೇಶಗಳ 'ಸ್ವಾಭಾವಿಕ ಸಹಚರ' ಎಂಬುದನ್ನು ಅಲ್ಲಗಳೆಯಲು ಸಾಧ್ಯವೇ?)

ಶಸ್ತ್ರಾಸ್ತ್ರ ನಿಯಂತ್ರಣ - ಎರಡು ಶೈಲಿ

ರೈಲಿನಿಂದ ಸಾಗಿಸಲು ಸಾಧ್ಯವಿರುವ, ಹಾಗೂ ರೈಲಿನಿಂದಲೇ ಎಸೆಯಲು ಸಾಧ್ಯವಿರುವ ಅಣುಸಜ್ಜಿತ ಖಂಡಾಂತರ ಕ್ಷಿಪಣಿಗಳ ಉತ್ಪಾದನೆಯನ್ನು ನಿಲ್ಲಿಸಲು ಸೋವಿಯತ್ ಒಕ್ಕೂಟ ನಿರ್ಧರಿಸಿದೆ. ಆದರೆ ಬ್ರಿಟನ್ ಮತ್ತು ಅಮೇರಿಕ ತಮ್ಮ ಸೈನ್ಯದ ಬಲವನ್ನು ಸುಮಾರು ಶೇಕಡಾ 25 ರಷ್ಟು ಕಡಿತಗೊಳಿಸಲು ನಿರ್ಧರಿಸಿವೆ. ಆದರೆ 'ರಕ್ಷಣೆ'ಯು ಪರಿಣಾಮಕಾರಿಯಾಗಿರುತ್ತದೆ ಇನ್ನೂ ಹೆಚ್ಚಿನ ಸಾಮರ್ಥ್ಯದ, ಆಧುನೀಕರಿಸಿದ ಶಸ್ತ್ರಾಸ್ತ್ರಗಳು ಅಗತ್ಯ ಎಂದಿದೆ. ಅಮೆರಿಕಾದ ಕಾಂಗ್ರೆಸ್ (ಪಾರ್ಲಿಮೆಂಟು) ಹೊಸ ವರ್ಗದ ಶಸ್ತ್ರಾಸ್ತ್ರಗಳನ್ನು ಅಭಿವೃದ್ಧಿಗೊಳಿಸುವ, ಉತ್ಪಾದಿಸುವ ಬಗ್ಗೆ ನಿರ್ಬಂಧ ಹೇರಲು ಪ್ರಯತ್ನಿಸುತ್ತಿದ್ದು, ಅಧ್ಯಕ್ಷ ಬುಶ್ ಅದನ್ನು ಬಲವಾಗಿ ವಿರೋಧಿಸುತ್ತಿದ್ದಾರೆ. ಸ್ಟೆಲ್ತ್ ಬಾಂಬರ್ ವಿಮಾನಗಳು, 'ತಾರಾಸಮರ'ದ ಕ್ಷಿಪಣಿ - ವಿರೋಧಿ ಸಮುಚ್ಛಯ, ಮಿಜೆಟ್‌ಮನ್ ಕ್ಷಿಪಣಿ, ರೈಲಿನಿಂದ ಎಸೆಯುವ MX ಕ್ಷಿಪಣಿ ಅಧ್ಯಕ್ಷ ಬುಶ್ ಮುಂದುವರಿಸಬೇಕೆಂದಿರುವ, ಕಾಂಗ್ರೆಸ್ ಕಡಿತಗೊಳಿಸಬೇಕೆಂದಿರುವ ಹೊಸ ಶಸ್ತ್ರಾಸ್ತ್ರಗಳು.

ಭಾರತದ ಪ್ರಧಾನಿಯ ಸೋವಿಯತ್ ಭೇಟಿ

ಇನ್ನೊಂದು ಮೈಲಿಗಲ್ಲು

ಹರಿಕಿಶನ್ ಸಿಂಗ್ ಸುರ್ಜಿತ್

ಮಾಸ್ಕೋದಲ್ಲಿ ಭಾರತದ ಪ್ರಧಾನ ಮಂತ್ರಿ ವಿ.ಪಿ. ಸಿಂಗ್ ಮತ್ತು ಸೋವಿಯತ್ ಅಧ್ಯಕ್ಷ ಮಿಖ್ಯಾಲ್ ಗೋರ್ಬಚೆವ್ ನಡುವೆ ನಡೆದ ಶೃಂಗ ಸಭೆ ಭಾರತ - ಸೋವಿಯತ್ ಸಂಬಂಧಗಳ ಇತಿಹಾಸದಲ್ಲಿ ಇನ್ನೊಂದು ಮೈಲಿಗಲ್ಲು. ಜುಲೈ 23 ರಿಂದ 26 ರವರೆಗೆ ವಿ.ಪಿ.ಸಿಂಗ್‌ರ ಸೋವಿಯತ್ ಭೇಟಿಯ ಮಹತ್ವಪೂರ್ಣ ಫಲಿತಾಂಶಗಳನ್ನು ಎರಡೂ ದೇಶಗಳ ಜನತೆ ಬಹುವಾಗಿ ಹರ್ಷ ವ್ಯಕ್ತಪಡಿಸುತ್ತಿದ್ದಾರೆ.

ಇದೊಂದು ಮಹತ್ವ ಪೂರ್ಣ ಭೇಟಿ. ಏಕೆಂದರೆ ಸೋವಿಯತ್ ಒಕ್ಕೂಟ ಮತ್ತು ಭಾರತದಲ್ಲಿನ ಬದಲಾವಣೆಗಳ ಹಿನ್ನೆಲೆಯಲ್ಲಿ ಈ ಭೇಟಿನಡೆದಿತ್ತು. ಪಾಶ್ಚಿಮಾತ್ಯದೊಂದಿಗೆ ಹೆಚ್ಚೆಚ್ಚು ನಿಕಟ ಆರ್ಥಿಕ ಸಂಬಂಧ ಕುದುರಿಸಲು ಪ್ರಯತ್ನಿಸುತ್ತಿರುವ ಸೋವಿಯತ್ ಒಕ್ಕೂಟಕ್ಕೆ ಹಲವಾರು ಸಂದರ್ಭಗಳಲ್ಲಿ ಭಾರತ ಸಾಮ್ರಾಜ್ಯಶಾಹಿ ಒತ್ತಡಗಳನ್ನು ಆರ್ಥಿಕವಾಗಿಯೂ, ರಾಜಕೀಯವಾಗಿಯೂ ಎದುರಿಸಲು ನೆರವಾದ ಸಂಬಂಧಗಳನ್ನು ಹಿಂದಿನ ಮಟ್ಟದಲ್ಲೇ ಮುಂದುವರಿಸಲು ಆಸಕ್ತಿಯಿರಲಿಕ್ಕಿಲ್ಲ ಎಂದು ಊಹಿಸಲಾಗಿತ್ತು.

ಇತ್ತ ಭಾರತದಲ್ಲೂ ಸರಕಾರದ ಬದಲಾವಣೆಯಾಗಿರುವುದರಿಂದ ಅದು ಅಮೆರಿಕಾಕ್ಕೆ ನಿಕಟ ಬರಬಹುದು, ತನ್ನ ವಿದೇಶಾಂಗ ನಿಲುವುಗಳನ್ನು ಬದಲಿಸಬಹುದು ಎಂದು ಶಂಕಿಸಲಾಗಿತ್ತು.

ಈ ಎಲ್ಲಾ ಊಹೆ, ಶಂಕೆ, ನಿರೀಕ್ಷೆಗಳು ಈ ಭೇಟಿಯ ನಂತರ ಹುಸಿಗೊಂಡಿವೆ. ಸೋವಿಯತ್ ಒಕ್ಕೂಟದ, ಭಾರತದ ಮತ್ತು ವಿಶ್ವ ಶಾಂತಿಯ ಹಿತಾಸಕ್ತಿಗಳು ಬದಲಾಗಿಲ್ಲ ಎಂಬುದು ಈಗ ಸ್ಪಷ್ಟವಾಗಿದೆ. ಎರಡು ದೇಶಗಳ ನಡುವಿನ ಸಂಬಂಧಗಳು ಮತ್ತಷ್ಟು ಬಲಗೊಂಡಿವೆ.

1986 ರಲ್ಲಿ ಸಹಿ ಮಾಡಿದ ದೆಹಲಿ ಘೋಷಣೆಯನ್ನು ಅನುಮೋದಿಸಿರುವ 1990ರ ಮಾಸ್ಕೋ ಘೋಷಣೆ (ಗೊರ್ಬಚೆವ್ ಮತ್ತು ವಿ.ಪಿ. ಸಿಂಗ್ ಸಹಿ ಮಾಡಿದ ಜಂಟಿ ಹೇಳಿಕೆ) ದೇಶಗಳ, ಜನಗಳ ನಡುವೆ ಸಹಕಾರ, ಸೋದರತ್ವದ ಅಭೂತ ಪೂರ್ವ ಅವಕಾಶಗಳು ಕಾಣಬರುತ್ತಿವೆ ಎಂದು ಹೇಳುತ್ತಾ ಈ ಗುರಿ ಸಾಧನೆಗೆ ತಮ್ಮೆರಡು ದೇಶಗಳು ದ್ವಿಪಕ್ಷೀಯ ವ್ಯವಹಾರಗಳಲ್ಲಿ, ಅಂತರ ರಾಷ್ಟ್ರೀಯ ವ್ಯವಹಾರಗಳಲ್ಲಿ, ಸಾಧಿಸಿರುವ ಬಹುಮುಖೀ ಸಹಕಾರದ ಸಾಮರ್ಥ್ಯವನ್ನು ಬಳಸುವುದಾಗಿ, ವಿಶ್ವ ಮತ್ತು ಜಗತ್ತಿನಲ್ಲಿ ಶಾಂತಿ, ಸ್ಥಿರತೆ ಪ್ರಚೋದಿಸುವ ಒಂದು ಶಕ್ತಿಶಾಲೀ ಸಾಧನವಾಗಿ ಅದನ್ನು ಬಳಸುವುದಾಗಿ ಘೋಷಿಸಿದೆ.

ಮುಂದಿನ ವರ್ಷ ಅವಧಿ ಮುಗಿಯಲಿರುವ ಇಪ್ಪತ್ತು ವರ್ಷಗಳ ಭಾರತ ಸೋವಿಯತ್ ಶಾಂತಿ, ಮೈತ್ರಿ ಮತ್ತು ಸಹಕಾರ ಕಾಲವನ್ನು ವಿಸ್ತರಿಸಲು ಆ ಸಂದರ್ಭದಲ್ಲಿ ಪರಸ್ಪರ ಸಹಕಾರದ ಹೊಸ ಸ್ವರೂಪಗಳನ್ನು ಉದ್ಘಾಟಿಸುವ ಬಗ್ಗೆ ಮಾತುಕತೆ ನಡೆಯಿತು. ಮಿಖ್ಯಾಲ್ ಗೊರ್ಬಚೆವ್ ಆ ಸಂದರ್ಭದಲ್ಲಿ ಭಾರತಕ್ಕೆ ಆಗಮಿಸಿ ಸಮಗ್ರ ಆರ್ಥಿಕ ಒಪ್ಪಂದಕ್ಕೆ ಸಹಿ ಹಾಕಲಾಗುವುದು.

ಇಬ್ಬರೂ ಮುಖಂಡರು ಅಫ್‌ಘಾನಿಸ್ತಾನದ ಸಮಸ್ಯೆ ಬಗ್ಗೆ ಸಮಾನ ಅಭಿಪ್ರಾಯ ವ್ಯಕ್ತಪಡಿಸಿದರು. ಜಮ್ಮು-ಕಾಶ್ಮೀರದ ಉಲ್ಬಣ ಸ್ಥಿತಿಯ ಬಗ್ಗೆ ಗೊರ್ಬಚೆವ್ ಭಾರತದ ಪ್ರಧಾನಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು.

ಭಾರತಕ್ಕೆ ಸೋವಿಯತ್ ಒಕ್ಕೂಟದೊಂದಿಗೆ ತನ್ನ ಸ್ನೇಹದಿಂದಾಗಿ ಬಹಳ ಪ್ರಯೋಜನವಾಗಿದೆ-ರಾಜಕೀಯವಾಗಿಯೂ, ಆರ್ಥಿಕವಾಗಿಯೂ. ಭಾರತ ಇಂದು ಗಳಿಸಿರುವ ರಾಜಕೀಯ, ಆರ್ಥಿಕ ಶಕ್ತಿಗೆ ಭಾರತ - ಸೋವಿಯತ್ ಸಂಬಂಧಗಳು ಕಾರಣ. ಅದೇ ರೀತಿ ಶಾಂತಿಯ ಪ್ರಯತ್ನದಲ್ಲಿ ಸೋವಿಯತ್ ಒಕ್ಕೂಟ ಭಾರತದ ಬೆಂಬಲವನ್ನು ನೆಚ್ಚಿಕೊಳ್ಳಲು ಯಾವಾಗಲೂ ಸಾಧ್ಯವಾಗಿದೆ. ಏಕೆಂದರೆ ಭಾರತ ಅಲಿಪ್ತ ಆಂದೋಲನದಲ್ಲಿ, 77 ದೇಶಗಳ ಗುಂಪಿನಲ್ಲಿ, ಮತ್ತಿತರ ಹಲವು ವಲಯಗಳಲ್ಲಿ ಒಂದು ಅತ್ಯಂತ ಮಹತ್ವದ ಪಾತ್ರ ವಹಿಸುತ್ತಿದೆ.

ಆರ್ಥಿಕ ರಂಗದಲ್ಲಿ ನಡೆದ ಮಾತುಕತೆಗಳ ಪರಿಣಾಮವಾಗಿ ಸೋವಿಯತ್ ಒಕ್ಕೂಟ 1995 ರವರೆಗೆ ರೂಪಾಯಿ ವಾಣಿಜ್ಯ ಮುಂದುವರೆಸಲು ಒಪ್ಪಿದೆ. ಅಂದರೆ ಭಾರತ ಸೋವಿಯತ್ ಒಕ್ಕೂಟದಿಂದ ಆಮದು ಮಾಡುವ ವಸ್ತುಗಳಿಗೆ ರೂಪಾಯಿಯಲ್ಲೇ ಬೆಲೆ ತೆರಬಹುದು. ಸೋವಿಯತ್ ಒಕ್ಕೂಟದಲ್ಲಿ ಬದಲಾಗಿರುವ ಸನ್ನಿವೇಶದ ಹಿನ್ನೆಲೆಯಲ್ಲಿ ಇದು ಭಾರತಕ್ಕೆ ಅತ್ಯಂತ ಮಹತ್ವದ ಪ್ರಶ್ನೆಯಾಗಿತ್ತು.

ವಾಣಿಜ್ಯ ಸಮತೋಲನ ಸೋವಿಯತ್ ಒಕ್ಕೂಟದಪರವಾಗಿಲ್ಲವಾದ್ದರಿಂದ ಭಾರತಕ್ಕೆ ವಿಮಾನ ಮತ್ತು ಹೆಲಿಕಾಪ್ಟರ್ ತಂತ್ರಜ್ಞಾನವನ್ನೂ ಮಾಡುವ ಸಲಹೆಯನ್ನು ಸೋವಿಯತ್‌ಒಕ್ಕೂಟ ಮುಂದಿಟ್ಟಿತು. ಎರಡು ದೇಶಗಳ ನಡುವೆ ವ್ಯಾಪಾರ ಸಂಬಂಧಗಳನ್ನು ವ್ಯಾಪಕಗೊಳಿಸುವ ವಿಧಾನದ ಬಗ್ಗೆ ನಿರ್ಣಯಕ್ಕೆ ಬರಲಾಯಿತು.

ಮೇಲೆ ಹೇಳಿದ ಸಹಕಾರದ ಹೊಸ ವಿಧಾನಗಳ ಬಗ್ಗೆ, ಬ್ಯಾಂಕುಗಳ ಮತ್ತು ಇತರ ಹಣಕಾಸು ಸಂಸ್ಥೆಗಳ ಚಟುವಟಿಕೆಗಳನ್ನು ತೀವ್ರಗೊಳಿಸುವ ಬಗ್ಗೆ, ಸಾಗಾಣಿಕೆ ವ್ಯವಸ್ಥೆಯನ್ನು ಪರಿಪೂರ್ಣಗೊಳಿಸುವ ಬಗ್ಗೆ, ಇವೆಲ್ಲದರಲ್ಲಿ ಜಂಟಿ ಉದ್ದಿಮೆಗಳು, ಸಹಕಾರದ ಬಗ್ಗೆಯೂ ನಿರ್ಣಯ ಕೈಗೊಳ್ಳಲಾಯಿತು. ಆರ್ಥಿಕ, ವೈಜ್ಞಾನಿಕ ಹಾಗೂ ತಾಂತ್ರಿಕ ರಂಗದಲ್ಲಿ ಸಹಕಾರಕ್ಕಾಗಿ ಒಂದು ಉಚ್ಚ ಮಟ್ಟದ ಸಮಿತಿ ರಚಿಸಲು ನಿರ್ಧರಿಸಲಾಯಿತು.

ಸೋವಿಯತ್ ಒಕ್ಕೂಟ ಮತ್ತು ಚೀನಾ ಹಾಗೂ ಭಾರತ ಚೀನಾದ ನಡುವೆ ಸಂಬಂಧಗಳಲ್ಲಿ ಸುಧಾರಣೆ ಬಗ್ಗೆ ಹರ್ಷ ವ್ಯಕ್ತಪಡಿಸಿದ ಇಬ್ಬರೂ ಮುಖಂಡರು ಈ ಮೂರು ದೇಶಗಳ ನಡುವೆ ಸಹಕಾರ ಈ ಪ್ರದೇಶದಲ್ಲಿ ಶಾಂತಿ ಮತ್ತು ಆರ್ಥಿಕ ಸಹಕಾರದ ದೃಷ್ಟಿಯಿಂದ ಸುಧಾರಣೆ ತರುವಲ್ಲಿ ತುಂಬಾ ನೆರವಾಗಬಲ್ಲದು ಎಂದು ಅಭಿಪ್ರಾಯಪಟ್ಟರು.

ನಮ್ಮೆರಡು ದೇಶಗಳ ನಡುವಿನ ಸ್ನೇಹ ಮತ್ತಷ್ಟು ಬಲಗೊಂಡಲ್ಲಿ ಅದು ವಿಶ್ವ ಶಾಂತಿ ರಕ್ಷಿಸುವಲ್ಲಿ ಇನ್ನಷ್ಟು ಮಹತ್ವದ ಪಾತ್ರ ವಹಿಸಬಲ್ಲದು. ಈ ದೃಷ್ಟಿಯಿಂದಲೇ ವಿ.ಪಿ.ಸಿಂಗ್‌ರ ಸೋವಿಯತ್ ಭೇಟಿ ಭಾರತ ಸೋವಿಯತ್ ಸಂಬಂಧಗಳಲ್ಲಿ, ಅಂತರಾಷ್ಟ್ರೀಯ ರಾಜತಾಂತ್ರಿಕ ಚಟುವಟಿಕೆಗಳಲ್ಲಿ ಇನ್ನೊಂದು ಮೈಲಿಗಲ್ಲು.

> "ಸೋವಿಯತ್ ಒಕ್ಕೂಟ ಅತ್ಯಂತ ಗಂಭೀರ ಸನ್ನಿವೇಶಗಳಲ್ಲಿ ನಮ್ಮ ಅಚಲ ಬೆಂಬಲಕ್ಕೆ ನಿಂತಿದೆ. ಆದ್ದರಿಂದ ಸೋವಿಯತ್ ಜನತೆಯೊಂದಿಗೆ ಗೆಳೆತನ ಪ್ರತಿಯೊಬ್ಬ ಭಾರತೀಯನ ಮನದ ಒಂದು ಭಾಗವೇ ಆಗಿದೆ. ಆದ್ದರಿಂದ ಅದು ದೇಶದ ರಾಜಧಾನಿಯಿಂದ ಅತ್ಯಂತ ಮೂಲೆಯಲ್ಲಿರುವ ಹಳ್ಳಿಯವರೆಗೂ ವಿಸ್ತರಿಸಿರುವ ಒಂದು ವಾಸ್ತವತೆ.... ಯಾವುದೇ ಸರಕಾರ, ಧೋರಣೆ ಬದಲಾದರೂ ಇದರಲ್ಲಿ ಒಡಕು ಬರುವುದಿಲ್ಲ."
>
> – ವಿ.ಪಿ. ಸಿಂಗ್

> "ನಮ್ಮ ಗೆಳೆತನ ದಶಕಗಳಿಂದ ಬೆಳೆದ ಗೆಳೆತನ. ಅದರ ಶಕ್ತಿಯ ಮೂಲ ನಮ್ಮೆರಡು ದೇಶಗಳ ಜನಗಳ ಪರಸ್ಪರ ದೀರ್ಘಕಾಲದ ಪ್ರೀತಿ ಮತ್ತು ಪರಸ್ಪರದ ಬಗ್ಗೆ ಎಂದೂ ಕುಂದದ ಆಸಕ್ತಿ"
>
> – ಮಿಖ್ಯಾಲ್ ಗೊರ್ಬಚೆವ್

KRNM/BGS-312 MAG (2) PRB DECR 319-78/79

ತುರ್ತಾಗಿ ಸರ್ವ ಪಕ್ಷಗಳ ಸಭೆ ಕರೆಯಿರಿ

ಕಾರ್ಯಕರ್ತರನ್ನು ಬಂಧಿಸಿ, ಗಡಿದಾಟಿ ಬರುವ ಶಸ್ತ್ರಧಾರಿ ಭಯೋತ್ಪಾದಕರನ್ನು ತಡೆದು, ಪ್ರತ್ಯೇಕತಾ ವಾದಿಗಳ ಒತ್ತಡಕ್ಕೆ ಮಣಿಯದೆ ಇದ್ದ ಜನರಿಗೆ ಸೂಕ್ತ ರಕ್ಷಣೆ ನೀಡುವಂತಹ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಕೇಂದ್ರಸರಕಾರವನ್ನು ಪೊಲಿಟ್ ಬ್ಯೂರೋ ಒತ್ತಾಯಿಸಿದೆ.

ಪಾಲಿಟ್ ಬ್ಯೂರೋ - ಅಸ್ಸಾಮ್

ಅಸ್ಸಾಮಿನಲ್ಲಿ ಯು.ಎಲ್.ಎಫ್.ಎ. ಭಯೋತ್ಪಾದಕರುನಿರ್ಭಯವಾಗಿ ಕಾನೂನು ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ವ್ಯಾಪಾರಸ್ತರು, ವಾಣಿಜ್ಯೋದ್ಯಮಿಗಳಿಂದ ಹಣಲೂಟಿ, ಅಪಹರಣ, ಕೊಲೆ ಮೊದಲಾದ ಅಕೃತ್ಯಗಳನ್ನು ಎದುರಿಸುವಲ್ಲಿ ಅಸ್ಸಾಮ್ ಗಣ ಸಂಗ್ರಾಮ ಪರಿಷತ್ ಸರಕಾರವು ತನ್ನ ಅಸಾಮರ್ಥ್ಯವನ್ನು ತೋರಿದೆ.

ರಾಮಜನ್ಮಭೂಮಿ - ಬಾಬರಿ ಮಸೀದಿ ವಿವಾದ

ಆರ್.ಎಸ್.ಎಸ್. ಮತ್ತು ಬಿ.ಜೆ.ಪಿ.ಗಳ ಬೆಂಬಲ ಪಡೆದು ವಿಶ್ವ ಹಿಂದು ಪರಿಷತ್ ಅಕ್ಟೋಬರ್ 30 ರಿಂದ ರಾಮ ದೇವಾಲಯವನ್ನು ಕಟ್ಟಲು ಉದ್ಯುಕ್ತವಾಗಿರುವುದು, ಮತ್ತು ಅದಕ್ಕಾಗಿ ವಿಸ್ತಾರವಾದ ಪ್ರಚಾರದಲ್ಲಿ ತೊಡಗಿರುವುದು ಭಾವನಾತ್ಮಕತೆಯನ್ನು ಕೆಣಕುವ ಅಪಾಯಕಾರಿ ಚಟುವಟಿಕೆ ಎನ್ನುವುದನ್ನು ಪೊಲಿಟ್ ಬ್ಯೂರೋ ಗಂಭೀರವಾಗಿ ಗಮನಿಸಿದೆ. ವಿಶ್ವ ಹಿಂದೂ ಪರಿಷತ್ ಸೌಹಾರ್ದಯುತ ಪರಿಹಾರವನ್ನು ಒಪ್ಪಿಕೊಳ್ಳುವ ಕೋರಿಕೆ ಅಥವಾ ಉಚ್ಚ ನ್ಯಾಯಾಲವು ಕೊಡುವ ತೀರ್ಮಾನ ಈ ಎರಡನ್ನು ತಿರಸ್ಕರಿಸಿದೆ. ಕಾಶ್ಮೀರ ಮತ್ತು ಪಂಜಾಬ್ ಸಮಸ್ಯೆಗಳ ಬೆಂಕಿಗೆ ಇದು ತುಪ್ಪವನ್ನು ಸುರಿಸುವಂತಹ ಬೇಜವಾಬ್ದಾರಿ ಧೋರಣೆಯಾಗಿದೆ. ಎಲ್ಲ ದೇಶಭಕ್ತ ಮತ್ತು ಜಾತ್ಯಾತೀತ ಶಕ್ತಿಗಳನ್ನು ಒಗ್ಗೂಡಿಸಿ, ವಿಶ್ವಹಿಂದೂ ಪರಿಷತ್‌ನ ವಿಚ್ಛಿದ್ರಕಾರಿ ಪ್ರವೃತ್ತಿಯು ಸಫಲತೆ ಪಡೆಯದ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ಕೇಂದ್ರ ಸರಕಾರ ಮತ್ತು ಉತ್ತರ ಪ್ರದೇಶ ರಾಜ್ಯ ಸರಕಾರದ ಮೇಲಿದೆ ಎಂದು ಅಭಿಪ್ರಾಯ ಪಟ್ಟಿರುವ ಪಿ.ಬಿ. ಉತ್ತರ ಪ್ರದೇಶದಲ್ಲಿ ಜುಲೈ 15 ರಂದು 'ಕೋಮುವಾದ ವಿರೋಧಿ ಸಮಾವೇಶ' ಯಶಸ್ವಿಯಾಗಿ ನಡೆದುದನ್ನುಶ್ಲಾಘಿಸಿದೆ.

ತ್ರಿಪುರಾದ ಮೇಲೆ ಸೇಮಿ - ಫ್ಯಾಸಿಸ್ಟ್ ದಬ್ಬಾಳಿಕೆ

ಜುಲೈ 8ರಂದು ತ್ರಿಪುರಾದಲ್ಲಿ ನಡೆದ ತ್ರಿಪುರಾ ಉಪಜಾತಿ ಸ್ವಾಯತ್ತ ಜಿಲ್ಲಾ ಮಂಡಳಿಯ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್(ಐ)–ಟಿ.ಯು ಜೆ.ಎಸ್. ಮೈತ್ರಿಕೂಟ ಮಾಡಿರುವ ಭಯೋತ್ಪಾದಕ ಮತ್ತು ಹಿಂಸಾತ್ಮಕ ಕಾರ್ಯತಂತ್ರಗಳಿಂದ ಆಹಿತಕರ ಘಟನೆಗಳು ಸಂಪೂರ್ಣವಾಗಿ ಸಾಬೀತಾಗಿದೆ ಎಂಭತ್ತು ವರ್ಷ ವಯಸ್ಸಿನ ಸಿ.ಪಿ.ಐ.(ಎಂ) ಸದಸ್ಯೆ ನಳಿನಿ ಚಕ್ರವರ್ತಿ, ಸಿ.ಪಿ.ಐ.(ಎಂ) ಪೋಲಿಂಗ್ ಏಜೆಂಟ್ ಅರುಣ್‌ದೇಬ್ ಕೂಡಿದಂತೆ ಹಲವು ಪಕ್ಷ ಸದಸ್ಯರು ಸಾವು ನೋವುಗಳೀಡಾದರು. ಲಕ್ಷಗಟ್ಟಲೆ ಸಿ.ಪಿ.ಐ(ಎಂ) ಬೆಂಬಲಿಗರನ್ನು ಮತನೀಡದ ಹಾಗೆ ಓಡಿಸಲಾಯಿತು; ಮಹಿಳೆಯರ ಮೇಲೆ ಅತ್ಯಾಚಾರವೆಸಗಲಾಯಿತು.

ಎಲ್ಲ ನಾಗರಿಕ ತತ್ವಗಳನ್ನು ಗಾಳಿಗೆ ತೂರಿದ ಕಾಂಗ್ರೆಸ್(ಐ)–ಟಿ.ಯು.ಜೆ.ಎಸ್. ಸರಕಾರವು ಆಳುವ ನೈತಿಕ ಹಕ್ಕನ್ನು ಕಳೆದುಕೊಂಡಿದೆ. ಈ ಮೈತ್ರಿಕೂಟದ ಹಿಂಸಾತ್ಮಕ ದಬ್ಬಾಳಿಕೆಯನ್ನು ವಿರೋಧಿಸಿ ಆಗಸ್ಟ್ 17 ರಂದು ಅಖಿಲ ಭಾರತ ಮಟ್ಟದಲ್ಲಿ ಪಕ್ಷದ ಎಲ್ಲ ಘಟಕಗಳು 'ಪ್ರತಿಭಟನಾ ದಿನ'ವನ್ನಾಗಿ ಆಚರಿಸಬೇಕೆಂದು ಪೊಲಿಟ್ ಬ್ಯೂರೋ ಕರೆಕೊಟ್ಟಿದೆ.

ಆರ್ಥಿಕ ಪರಿಸ್ಥಿತಿ

ರಾಷ್ಟ್ರೀಯ ರಂಗವು ಪಾರ್ಲಿಮೆಂಟಿನಲ್ಲಿ ಮಂಡಿಸಿದ ಕೈಗಾರಿಕಾ ಧೋರಣೆಯನ್ನು ಹಿಂದಿನ ರಾಜೀವ್ ಸರಕಾರದ ಕೈಗಾರಿಕಾ ರಂಗದಲ್ಲಿ ಖಾಸಗೀಕರಣ ಮತ್ತು ಉದಾರ ನೀತಿಯ ಹಾದಿ ಹಿಡಿಯುವ ಲಕ್ಷಣವನ್ನು ತೋರಿಸುತ್ತದೆ. ಸ್ವಾವಲಂಬನೆಯ ತತ್ವವನ್ನು ಬದಿಗೊತ್ತಿ, ಸಾರ್ವಜನಿಕ ರಂಗವನ್ನು ಕುಂಠಿ ತಗೊಳಿಸುವ ಈ ಕೈಗಾರಿಕಾ ಧೋರಣೆ ದೇಶದ ಸಾರ್ವಭೌಮತೆಗೆ ಅಪಾಯವನ್ನುಂಟು ಮಾಡುತ್ತದೆ. ಈ ಧೋರಣೆಯು ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್. ಮೊದಲಾದ ಜಾಗತಿಕ ಹಣಕಾಸು ಸಂಸ್ಥೆಗಳ ಒತ್ತಡಕ್ಕೆ ರಾಷ್ಟ್ರೀಯ ರಂಗ ಸರಕಾರವು ಮಣಿದಿರುವುದು ಸ್ಪಷ್ಟವಾಗಿ ಪುನರ್ ವಿಮರ್ಶಿಸಬೇಕೆಂದು ಪೊಲಿಟ್‌ಬ್ಯೂರೋ ನಿರೀಕ್ಷಿಸಿದೆ.

ವಿಪರೀತ ಬೆಲೆಯೇರಿಕೆ

ತಡೆಯಿಲ್ಲದ ಬೆಲೆ ಏರಿಕೆಯಿಂದ ಜನರು ತತ್ತರಿಸುತ್ತಿದ್ದಾರೆ. ಅಗತ್ಯ ವಸ್ತುಗಳ ಬೆಲೆಗಳು ಅಡೆ ತಡೆ ಇಲ್ಲದೆ ಗಗನಕ್ಕೆ ಏರುತ್ತಲೇ ಇವೆ. ಇತ್ತೀಚಿನ ವಾರಗಳಲ್ಲಿ ಖಾದ್ಯ ತೈಲಗಳ ಬೆಲೆಗಳು ಏರುಮುಖವಾಗಿದೆ. ಚಹಾ, ಬೇಳೆಕಾಳು, ಸಕ್ಕರೆ, ತರಕಾರಿ, ಸಿಮೆಂಟ್ ದರಗಳೂ ಏರುತ್ತಲೇ ಇದೆ. ಸರಕಾರವು ಮಂಡಿಸಿದ ಬಜೆಟ್ ಧೋರಣೆ ಜನರು ಬೆಲೆಯೇರಿಕೆಯಿಂದ ತಮ್ಮ ಜೀವನ ಮಟ್ಟವನ್ನು ಕುಂಠಿತಗೊಳಿಸುವಂತೆ ಮಾಡಿದೆ. ಸರಕಾರವು ಬೆಲೆ ಏರಿಕೆಯನ್ನು ತಡೆಯುತ್ತೇವೆ ಎನ್ನುತ್ತ ಜನರನ್ನು ಮೋಸಗೊಳಿಸುವುದನ್ನು ನಿಲ್ಲಿಸಿ, ಸಾರ್ವಜನಿಕ ವಿತರಣಾ ಪದ್ಧತಿಯನ್ನು ಬಲಗೊಳಿಸುವುದು ಈ ಸಮಸ್ಯೆಯನ್ನು ನಿವಾರಿಸಲು ಉಳಿದಿರುವ ಒಂದೇ ಮಾರ್ಗೋಪಾಯ. ಆದರೆ ರಾಷ್ಟ್ರೀಯ ರಂಗ ಸರಕಾರವು ಜನರು ಎದುರಿಸುತ್ತಿರುವ ಈ ಸಮಸ್ಯೆಗಳ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ ಎನ್ನುವುದು ಕಂಡು ಬರುತ್ತಿದೆ. ಸರಕಾರವು ಈ ಸಮಸ್ಯೆಯ ಪರಿಹಾರಕ್ಕೆ ಕಾರ್ಯಪ್ರವೃತ್ತವಾಗುವಂತೆ ಬೆಲೆಯೇರಿಕೆಯಿಂದ ಬಾಧಿತ ಜನಸಾಮಾನ್ಯರ ರಕ್ಷಣೆಗೆ ಆಗಸ್ಟ್ 20 ರಿಂದ 25 ರವರೆಗೆ "ಪ್ರತಿಭಟನಾ ಸಪ್ತಾಹವನ್ನು" ಆಚರಿಸುವಂತೆ ಪೊಲಿಟ್ ಬ್ಯೂರೋ ಇಡೀ ಪಕ್ಷಕ್ಕೆ ಕರೆಯಿತ್ತಿದೆ.

ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ಸಿಗೆ ರಾಯಭಾರಿ ಗೌರವ

ಭಾರತ ಸರಕಾರವು ಆಫ್ರಿಕನ್‌ನ್ಯಾಶನಲ್ ಕಾಂಗ್ರೆಸಿಗೆ ರಾಯಭಾರಿ ಸ್ಥಾನವನ್ನು ಪ್ರಧಾನ ಮಾಡಿದ್ದನ್ನು ಪೊಲಿಟ್ ಬ್ಯೂರೋ ಸ್ವಾಗತಿಸುತ್ತದೆ. ಆಫ್ರಿಕಾದ ಜನರ ವರ್ಣ ಬೇಧ ನೀತಿಯನ್ನು ಅನುಸರಿಸುತ್ತಿರುವ ಸರಕಾರದ ವಿರುದ್ಧದಹೋರಾಟಕ್ಕೆ ಭಾರತದ ಸಂಪೂರ್ಣ ಬೆಂಬಲದ ಈ ಬದ್ಧತೆಯನ್ನು ಪೊಲಿಟ್‌ಬ್ಯೂರೋ ಮನಗಂಡಿದೆ.

ಈ ವಾರ...

★ ರಾಜಕೀಯ ಇಚ್ಛಾಶಕ್ತಿಯಿದ್ದರೆ 50 ಕೋಟಿ ಭಾರತೀಯ ನಿರಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುವುದು ಕಷ್ಟವಲ್ಲ ಎಂಬುದನ್ನು ಕೇರಳದ ಪ್ರಯತ್ನಗಳು ತೋರಿಸುತ್ತವೆ.

– 'ಟೈಮ್ಸ್ ಆಫ್ ಇಂಡಿಯಾ' ಲೇಖನದಲ್ಲಿ ಜಾರ್ಜ್ ಮ್ಯಾಥ್ಯೂ ಆ 6

★ ಅಧಿಕಾರಕ್ಕೆ ಬಂದ ಎಂಟು ತಿಂಗಳೊಳಗಾಗಿ ಪ್ರಧಾನ ಮಂತ್ರಿ ವಿ.ಪಿ. ಸಿಂಗ್ ಸರಕಾರದಲ್ಲಿ ಇಷ್ಟೊಂದು ರಂಪಾ ಆಗಲೇ ಆರಂಭವಾದದ್ದು ನಿಜಕ್ಕೂ ಶೋಚನೀಯ

– ಎಸ್.ಜಿ. ಮೈಸೂರು ಮಠ 'ಸಂಯುಕ್ತ ಕರ್ನಾಟಕ' ಲೇಖನ ಆ 7

★ ಗುರುವಾರ ಲೂಧಿಯಾನದಲ್ಲಿ ಅಕಾಲಿದಳ (ಮಾನ್) ಕಾರ್ಯಕರ್ತರು ತಮ್ಮ ಪಕ್ಷದ ಅಧ್ಯಕ್ಷ ಸಿಮ್ರಾನ್ ಜಿತ್ ಸಿಂಗ್ ಮಾನ್‌ರನ್ನು ಉಚ್ಛಾಟಿಸಿದರು. ಶಿರೋಮಣಿ ಅಕಾಲಿದಳ (ಪಂಥೀಯ) ಎಂಬ ಹೊಸ ಪಕ್ಷದ ಸ್ಥಾಪಿಸಿರುವುದಾಗಿ ಅವರು ಘೋಷಿಸಿದರು.

-- ಸುದ್ದಿ ಸಂಸ್ಥೆಗಳ ವರದಿ, ಜುಲೈ 3

★ ವಿಭಜನೆಯ ಹಿನ್ನೆಲೆಯಲ್ಲಿ ಗಮನಿಸಿದರೆ ಪಶ್ಚಿಮ ಬಂಗಾಳದ ಇವತ್ತಿನ ಜಾತ್ಯತೀತ ಸ್ವರೂಪ ನಿಜಕ್ಕೂ ಅಚ್ಚರಿ ಹುಟ್ಟಿಸುತ್ತದೆ. ಜಾತೀಯ ವಿಷಾಣುಗಳಿಂದ ಪಶ್ಚಿಮ ಬಂಗಾಳ ಮುಕ್ತವಾಗಿದೆ. ಇದಕ್ಕಾಗಿ ಸಿ.ಪಿ.ಐ(ಎಂ) ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸಬೇಕಾಗುತ್ತದೆ. ಧರ್ಮ ನಿರಪೇಕ್ಷತೆ ತನ್ನ ನೈಜ ಅರ್ಥದಲ್ಲಿ ಪ್ರತಿಯೊಂದು ಬಂಗಾಳಿಯ ಮನೆಯಲ್ಲೂ ನೆಲೆಸಿದೆ. ಜಾತಿ ಹಾಗೂ ಸಂಕುಚಿತ ಪ್ರಾದೇಶಿಕತೆ ಅಸ್ತಿತ್ವದಲ್ಲಿ ಇಲ್ಲದಿರುವ ರಾಜ್ಯಗಳಲ್ಲಿ ಪಶ್ಚಿಮ ಬಂಗಾಳ ಪ್ರಮುಖವಾದುದು.

–ಪ್ರಜಾವಾಣಿ ಸಾಪ್ತಾಹಿಕ ಪುರವಣಿ ಲೇಖನದಲ್ಲಿ ಉದಯನ್ ನಂಬೂದರಿ ಆ 5

★ ಪ್ರಧಾನಿ ವಿ.ಪಿ. ಸಿಂಗ್ ಅವರು ಇತ್ತೀಚೆಗೆ ಸೋವಿಯತ್ ಒಕ್ಕೂಟಕ್ಕೆ ಭೇಟಿ ನೀಡಿದಾಗ ಭಾರತ ರಷ್ಯ ನಡುವಣ ಸಂಬಂಧವನ್ನು ಇನ್ನಷ್ಟು ಬಲಪಡಿಸಲು ನಿರ್ಧರಿಸಿರುವುದು, ಮೂರು ದಶಕಕ್ಕೂ ಹೆಚ್ಚು ಕಾಲದಿಂದ ಉಭಯ ದೇಶಗಳ ನಡುವೆ ಬೆಳೆದು ಬಂದಿರುವ ಸಂಬಂಧದ ಸತ್ವವನ್ನು ಪ್ರತಿಬಿಂಬಿಸುತ್ತದೆ.

– 'ದಿ ಹಿಂದೂ' ಸಂಪಾದಕೀಯ ಆಗಸ್ಟ್ 7

★ ರಾಷ್ಟ್ರೀಯ ರಂಗ ಸರಕಾರ ಅಸ್ತಿತ್ವಕ್ಕೆ ಬಂದಾಗ ಅಗತ್ಯ ವಸ್ತುಗಳ ಬೆಲೆ ಇಳಿಯುತ್ತದೆ ಎಂಬುದು ಎಲ್ಲರ ನಿರೀಕ್ಷೆಯಾಗಿತ್ತು. ಚುನಾವಣೆ ಪ್ರಣಾಳಿಕೆ ಹಾಗೂ ಪ್ರಚಾರಗಳಲ್ಲಿ ಇದು ಮುಖ್ಯ ಅಂಶವೂ ಆಗಿತ್ತು. ಆದರೆ ಬೆಲೆಗಳು ಇಳಿಯುವುದಿರಲಿ, ಅವನ್ನು ತಟಸ್ಥಗೊಳಿಸುವಲ್ಲೂ ಸರಕಾರ ವಿಫಲವಾಗಿದೆ. ಏರಿಕೆಯನ್ನು ತಡೆಗಟ್ಟಲು ತನ್ನ ಕೈಲಾಗದಿರುವುದನ್ನು ಒಪ್ಪಿಕೊಂಡಿದೆ. ಪ್ರಾಯಶಃ ಅಧಿಕಾರಕ್ಕೆ ಬಂದಾಗ ಇದ್ದರಾಜಕೀಯ ಸ್ಥಿತಿಯನ್ನು ತಹಬಂದಿಗೆ ತರುವ ಗಲಾಟೆಗಳಲ್ಲಿ ಅದಕ್ಕೆ ಈ ಕಡೆ ಗಮನ ಕೊಡಲು ಆಗಿಲ್ಲ.

'ಪ್ರಜಾವಾಣಿ' ಸಂಪಾದಕೀಯ ಆಗಸ್ಟ್ 8

★ ರಾಜಕೀಯ ಪಕ್ಷಗಳ ಧೋರಣೆಯಲ್ಲಿನ ಬದಲಾವಣೆಯಿಂದ ಮಾತ್ರವೇ ಚುನಾವಣಾ ಸುಧಾರಣೆಗಳು ಸಾಧ್ಯವೇ ಹೊರತು ಕೇವಲ ಕಾನೂನಿನ ಬದಲಾವಣೆಗಳಿಂದ ಆಗದು.

ಕೇಂದ್ರ ಕಾನೂನು ಸಚಿವ ದಿನೇಶ ಗೋಸ್ವಾಮಿ ಆಗಸ್ಟ್ ರಂದು ದಿಲ್ಲಿಯಲ್ಲಿ ನಡೆದ 'ಚುನಾವಣಾ ಪದ್ಧತಿಯ ಬದಲಾವಣೆ' ಎಂಬ ಕಾರ್ಯಾಗಾರದಲ್ಲಿ:

★ ಮಾಲಿನ್ಯದಿಂದ ಮುಕ್ತವಾದ ತಂತ್ರಜ್ಞಾನ ಅಳವಡಿಸಿ ಕೊಳ್ಳಲು ಅಭಿವೃದ್ಧಿಶೀಲ ದೇಶಗಳಿಗೆ ಹೊಸ ಮತ್ತು ಹೆಚ್ಚುವರಿ ಆರ್ಥಿಕ ಹಾಗೂ ತಂತ್ರಜ್ಞಾನ ಸಂಪನ್ಮೂಲಗಳನ್ನು ಒದಗಿಸಲು ಸಾಧ್ಯವಾಗುವಂಥ ಭಾರತ ಮಂಡಿಸಿದ ನಿರ್ಣಯವೊಂದನ್ನು ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮ (ಯುಎನ್‌ಇಪಿ)ದ ಆಡಳಿತ ಮಂಡಳಿ ಅಂಗೀಕರಿಸಿದೆ.

– ಪಿ.ಟಿ.ಐ. ವರದಿ ಆ. 6

ಬಾಲಂಗೋಚಿ

ಅಯೋಧ್ಯೆಯಲ್ಲಿ ವಿಶ್ವ ಹಿಂದೂ ಪರಿಷತ್
ಕಾರ್ ಸೇವೆ - ಸುದ್ದಿ
ಜನರು ಅದಕ್ಕೆ ಖಾರಸೇವಾ ತಿನ್ನಿಸಲು ಸಿದ್ಧರಾಗಿದ್ದಾರಂತ ಡಿಟೆಕ್ಟಿವ್ ಪಿ ಸುದ್ದಿ ತಂದ್ಯಾನೆ.

ಸೂರಿಯವರ ಹೋರಾಟದ ಬದುಕು

ಪುಟ 5 ರಿಂದ

ಒತ್ತಾಯಿಸುತ್ತಾ ಬಂದಿದ್ದರೂ ನಾನು ನಿರಾಕರಿಸುತ್ತಲೇ ಬಂದಿದ್ದೆ. ನನಗೆ ಎರಡು ರಾಷ್ಟ್ರಗಳ (ಭಾರತ - ಪಾಕಿಸ್ತಾನ) ಥಿಯರಿಗೆ ಬೆಂಬಲ ನೀಡಿದ ಪಕ್ಷದ ಧೋರಣೆ ಒಪ್ಪಲಿಲ್ಲ. ದೇಶದ ವಿಭಜನೆ ಸರಿ ಎನ್ನಿಸಲಿಲ್ಲ. ಮುಸ್ಲಿಂ ಲೀಗ್‌ಗೆ ಪಕ್ಷ ನೀಡುತ್ತಿದ್ದ ಬೆಂಬಲ ಹಿಡಿಸಿರಲಿಲ್ಲ. ಆದುದರಿಂದ ಪಕ್ಷಕ್ಕೆ ಸೇರಲಿಲ್ಲ. ಆದರೆ ಸ್ವಾತಂತ್ರ ಬರುತ್ತಲೇ ಕಾಂ. ಎನ್ನೆಲ್ ಮತ್ತೆ ಒತ್ತಾಯ ಮಾಡಿದರು. "ಸ್ವಾತಂತ್ರ ಬಂದು ದೇಶದ ವಿಭಜನೆ ಆಗಿಯೇ ಹೋಯಿತು. ಇನ್ನೇನು ಪಕ್ಷಕ್ಕೆ ಸದಸ್ಯನಾಗು" ಎಂದರು. ಆಗ ಪಕ್ಷದ ಸದಸ್ಯತ್ವವನ್ನು ಪಡೆದೆ.

ಪುಟ 4 ರಿಂದ

ಮೀಸಲಾತಿ ಏಕೆ?

ನೀಡುವ ದುರ್ಯೋಜನೆಯಲ್ಲ. ಅವರ ಪಾಲನ್ನು ಅವರಿಗಾಗಿ, ರಾಜಕೀಯ ಅಧಿಕಾರದ ಮೇಲೆ ಹಿಡಿತ ಹೊಂದಿರುವ ಮೇಲ್ವರ್ಗದವರ ಆಕ್ರಮಣದಿಂದ ರಕ್ಷಿಸುವ ಪ್ರಯತ್ನ ಮಾತ್ರ.

ಮೀಸಲಾತಿ ವಿರೋಧಿಸುವವರು ಇದರಿಂದ ಯೋಗ್ಯತೆಗೆ ತಿರಸ್ಕಾರ ಮಾಡಿದಂತೆ ಆಗುತ್ತದೆ. ಇದು ಜಾತಿಯತೆಯನ್ನು ಹೆಚ್ಚಿಸುತ್ತದೆ. ಮೀಸಲಾತಿಗೆ ಆರ್ಥಿಕ ಆಧಾರ ಮಾತ್ರವೇ ಏಕಿರಬಾರದು ಎಂದು ಪ್ರಶ್ನಿಸುತ್ತಾರೆ. ಯೋಗ್ಯತೆಯ ಪ್ರಶ್ನೆ ಪರಿಶೀಲಿಸೋಣ. ಉದ್ಯೋಗದ ಸಮಾನಾವಕಾಶ ಇರದಿದ್ದಲ್ಲಿ ಯೋಗ್ಯತೆಯನ್ನು ಹೋಲಿಸಲು ಸಾಧ್ಯವೇ? ಉದಾಹರಣೆಗೆ ಹರಿಜನ-ಗಿರಿಜನ ವಿಭಾಗಗಳಲ್ಲಿ ಹಿಂದುಳಿದ ಜಾತಿಗಳಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸುವಷ್ಟರಲ್ಲಿ 15% ವಿದ್ಯಾರ್ಥಿಗಳು ಶಿಕ್ಷಣ ವ್ಯವಸ್ಥೆಯ ಚೌಕಟ್ಟಿನಿಂದ ಹೊರಗಾಗುತ್ತಾರೆ-ಫೇಲಾದ ಕಾರಣದಿಂದಲ್ಲ ಆರ್ಥಿಕ ಕಾರಣಗಳಿಗಾಗಿ ಇದನ್ನು Dropouts ಎನ್ನುತ್ತಾರೆ. ಹೀಗೆ ಶಾಲೆಗೆ ಹೋಗಲಾರದವರು ಉಳ್ಳವರ ಹೊಲಗದ್ದೆಗಳಲ್ಲಿ ದುಡಿಯುವ ಕೃಷಿ ಕಾರ್ಮಿಕರಾಗುತ್ತಾರೆ, ದನ ಕಾಯುವ, ಹೋಟೆಲುಗಳಲ್ಲಿ ಕಪ್ಪು ಬಸಿ ತೊಳೆಯುವ ಬಾಲ ಕಾರ್ಮಿಕರಾಗುತ್ತಾರೆ. ಇವರ ಯೋಗ್ಯತೆಯನ್ನು ಅರ್ಹತೆಯನ್ನು ಅಳೆಯುವ ಸಾಧನ ಯಾವುದು?

ಇಷ್ಟೆ ಅಲ್ಲ ಶಿಕ್ಷಣದ ಒಳಗೇ ಜಾತಿಯತೆ ಇರುವ ನಮ್ಮ ಸಮಾಜದಲ್ಲಿ ಯೋಗ್ಯತೆಯನ್ನು, ಮೆರಿಟನ್ನು ಹೋಲಿಸುವ ನಿಷ್ಪಕ್ಷಪಾತ ಸಾಧನ ಯಾವುದು?

ಮೀಸಲಾತಿ ಜಾತಿಯತೆಯನ್ನು ಹೆಚ್ಚಿಸುತ್ತದೆ ಎಂದು ವಾದಿಸುವವರು ಗಮನಿಸಬೇಕಾದ ಸಂಗತಿಯೆಂದರೆ ಮೀಸಲಾತಿ ಇರುವುದು ಸರಕಾರದ ಸಾರ್ವಜನಿಕ ವಲಯದ ಉದ್ದಿಮೆಗಳು ಮಾತ್ರವೇ, ಖಾಸಗೀ ರಂಗದಲ್ಲಿ ಮೀಸಲಾತಿ ಇಲ್ಲ. ಅಲ್ಲಿ ಈಗಲೂ ಜಾತಿಯ ಪ್ರಭಾವ ಸರ್ಕಾರಿ ಸಂಸ್ಥೆಗಳಿಗಿಂತಲೂ ತೀವ್ರವಾಗಿಯೇ ಇದೆ.

ಲೋಕಸಂಚಾರ

ಪುಟ 7 ರಿಂದ

ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿ ಬಿಳಿಯರು, ಕರಿಯರು, ಭಾರತೀಯರು ಎಲ್ಲರೂ ಇದ್ದಾರೆ. ಇಬ್ಬರು ಭಾರತೀಯ ಮೂಲದವರು ಇದ್ದಾರೆ. ಕಮ್ಯುನಿಸ್ಟ್ ಜಗತ್ತಿನಾದ್ಯಂತ ಸತ್ತುಹೋಗುತ್ತಿದೆ ಎಂದು ಸಾಮ್ರಾಜ್ಯಶಾಹಿ ಪ್ರಚಾರವನ್ನು ಸುಳ್ಳು ಮಾಡುತ್ತಾ ದ.ಆಫ್ರಿಕಾ ಕಮ್ಯುನಿಸ್ಟ್ ಪಕ್ಷ ಆ ದೇಶದ ರಾಜಕೀಯದಲ್ಲಿ ದೊಡ್ಡ ಪಾತ್ರ ವಹಿಸುತ್ತಿದೆ. ದಿನೇ ದಿನೇ ಬಲಗೊಳ್ಳುತ್ತಿದೆ.

ಕಮ್ಯುನಿಸ್ಟರ ಭಾರೀ ವಿಜಯ

ಮಂಗೋಲಿಯಾದಲ್ಲಿ ಪ್ರಥಮ ಬಹುಪಕ್ಷೀಯ ಚುನಾವಣೆಗಳಲ್ಲಿ ಕಮ್ಯುನಿಸ್ಟರ ವಿಜಯದ ಬಗ್ಗೆ ವಿವರಗಳು ಈಗ ದೊರಕಿವೆ. ಜನತಾ ಹುರಾಲ್ (ಮಂಗೋಲಿಯಾದ ಪಾರ್ಲಿಮೆಂಟಿನ ಸದನದ ಹೆಸರು) ನಲ್ಲಿ 430 ಸೀಟುಗಳಲ್ಲಿ 400 ನ್ನು ಕಮ್ಯುನಿಸ್ಟ್ ಪಕ್ಷಗಳಿಸಿದೆ. ಮಂಗೋಲಿಯಾದಲ್ಲಿ ದೊಡ್ಡ ಹುರಾಲ್, ಚಿಕ್ಕ ಹುರಾಲ್ ಎಂಬ ಎರಡು ಸದನಗಳಿವೆ - ಪಾರ್ಲಿಮೆಂಟ್‌ನಲ್ಲಿ. ದೊಡ್ಡ ಹುರಾಲ್ ವರ್ಷಕ್ಕೊಮ್ಮೆ ಸಭೆ ಸೇರಿ ದೂರಗಾಮಿ ಯೋಜನೆಗಳು, ವಿಷಯಗಳು ಬಗ್ಗೆ ನಿರ್ಧಾರ ತೆಗೆದುಕೊಂಡರೆ, ಚಿಕ್ಕ ಹುರಾಲ್ ಯಾವಾಗಲೂ ಸಭೆ ಸೇರಿರುತ್ತದೆ. ದೈನಂದಿನ ಆಡಳಿತವನ್ನು ನಿರ್ವಹಿಸುತ್ತದೆ. 53 ಸದಸ್ಯರ ಚಿಕ್ಕ ಹುರಾಲ್‌ನಲ್ಲೂ ಕಮ್ಯುನಿಸ್ಟರು ಶೇಕಡಾ 50 ಕ್ಕಿಂತ ಹೆಚ್ಚು ಸೀಟು ಗಳಿಸಿದ್ದಾರೆ. ಸ್ಪರ್ಧಿಸಿದ್ದ ಕಮ್ಯುನಿಸ್ಟ್ ಪಕ್ಷದ ನಾಯಕರೆಲ್ಲಾ ಆಯ್ಕೆಯಾಗಿದ್ದಾರೆ.

Printed and Published by P.Ramachandra Rao on behalf of Comminist Party of India(Marxist), Karnataka State Committee, 2nd cross, Muneswara Black, palace Guttahalli, Bangalore-560003, Editor P.RAMACHANDRA RAO : Phone Number-366489.